ಗೌರಿ

ರಂಜನೆ ಬೋಧನೆ ಪ್ರಚೋದನೆ

ಲಂಕೇಶ್


27 ಏಪ್ರಿಲ್ 2016 ಪುಟ 20 ರೂ. 15/-



ಅಂಬೇಡ್ಕರ್ 125 ವಿಶೇಷಾಂಕ

- ಡಾ.ವಿನಯಾ
- ವಿಕಾಸ್ ಆರ್.ಮೌರ್ಯ
- ಹುಲಿಕುಂಟೆ ಮೂರ್ತಿ
- ರಘೋತ್ತಮ ಹೊ.ಬ.
- ಅಪ್ಪಗೆರೆ ಲಂಕೇಶ್
- ಅರುಂಧತಿ ರಾಯ್

ಮತ್ತೆ ವಕ್ಕರಿಸಿತು ಪೀಡೆ






ಮಂಡ್ಯ ಚೆಡ್ಡಿ ಬಿಚ್ಚಿಸಿದ ಲವ್‌ಸ್ಟೋರಿ



ಮೈಸೂರು ದಂಧೆವಾಲ ಸ್ಯಾಂಟ್ರೋ ರವಿಯ ಉಪಟಳ

ರಂಜನೆ | ಬೋಧನೆ | ಪ್ರಚೋದನೆ ಲಂಕೇಶ್



ಬಾಬಾಸಾಹೇಬ್ ಅಂಬೇಡ್ಕರ್ ಅವರ 'ಜಾತಿವಿನಾಶ' ಪಠ್ಯಕ್ಕೆ ಸಂಬಂಧಿಸಿದಂತೆ ಖ್ಯಾತ ಲೇಖಕಿ ಅರುಂಧತಿ ರಾಯ್ ಅವರು ಬರೆದಿರುವ ಪ್ರವೇಶಿಕೆ 'ವೈದ್ಯನೂ ಸಂತನೂ' ಎಂಬ ಪಠ್ಯದ ಆಯ್ದ ಭಾಗ ಇಲ್ಲಿದೆ.


ವೈದ್ಯನೂ ಸಂತನೂ

ಅಂಬೇಡ್ಕರ್ ಒಬ್ಬ ಸಮೃದ್ಧ ಬರಹಗಾರರಾಗಿದ್ದರು. ಆದರೂ ಗಾಂಧಿ, ನೆಹರು ಮತ್ತು ವಿವೇಕಾನಂದರ ಪುಸ್ತಗಳು ಪುಸ್ತಕದಂಗಡಿಗಳ ಮತ್ತು ಲೈಬ್ರರಿಗಳ ಆಲಮಾರುಗಳಿಂದ ಫಳನೆ ಪ್ರಕಾಶಿಸುವ ನೋಟವನ್ನು ಅಂಬೇಡ್ಕರ್ ಕೃತಿಗಳು ನಿಮ್ಮೆಡೆಗೆ ಬೀರಲಾರವು.

ಅವರ ಎಲ್ಲ ಕೃತಿಗಳಿಗಿಂತ **Annihilation of Caste** (ಜಾತಿವಿನಾಶ) ಅತಿಹೆಚ್ಚು ಕ್ರಾಂತಿಕಾರಿ ಪಠ್ಯ. ಅದು ಹಿಂದೂ ಮೂಲಭೂತವಾದಿಗಳನ್ನಾಗಲೀ ಉಗ್ರಗಾಮಿಗಳನ್ನಾಗಲೀ ಉದ್ದೇಶಿಸಿ ಬರೆದಿದ್ದಲ್ಲ, ಬದಲಾಗಿ ಯಾರು ತಮ್ಮನ್ನು ತಾವು ಮಧ್ಯಮಮಾರ್ಗಿಗಳು ಅಥವಾ ಸೌಮ್ಯವಾದಿಗಳು ಎಂದು ಗುರುತಿಸಿಕೊಳ್ಳುತ್ತಾರೋ, ಯಾರನ್ನು ಅಂಬೇಡ್ಕರ್ 'ಅತ್ಯುತ್ತಮ ಹಿಂದೂ' ಎಂದು ಕರೆಯುತ್ತಾರೋ, ಯಾರನ್ನು ಶೈಕ್ಷಣಿಕ ಪರಿಭಾಷೆಯಲ್ಲಿ 'ಎಡಪಂಥೀಯ ಹಿಂದೂ'ಗಳು ಎಂದು ಕರೆಯಲಾಗುತ್ತದೆಯೋ ಅವರನ್ನು ಉದ್ದೇಶಿಸಿ ಬರೆದಂತದ್ದು. ಅಂಬೇಡ್ಕರರ ಪ್ರಕಾರ ಒಂದು ಕಡೆ ಹಿಂದೂ ಶಾಸ್ತ್ರಗಳಲ್ಲಿ ನಂಬಿಕೆಯಿಟ್ಟುಕೊಂಡು ಇನ್ನೊಂದು ಕಡೆ ತನ್ನನ್ನು ತಾನು ಉದಾರವಾದಿ ಅಥವಾ ಸೌಮ್ಯವಾದಿ ಎಂದು ಕರೆದುಕೊಳ್ಳುವುದೇ ಒಂದು ಮಹಾ ವೈರುಧ್ಯ. 'ಜಾತಿವಿನಾಶ' ಪ್ರಕಟವಾದಾಗ 'ಮಹಾ ಹಿಂದೂ' ಎಂದು ಕರೆಯಲ್ಪಡುವ ಮಹಾತ್ಮ ಗಾಂಧಿ ಅಂಬೇಡ್ಕರರ ಪ್ರಚೋದನೆಗೆ ಪ್ರತಿಕ್ರಿಯಿಸಿದ್ದಿದೆ.

ಅವರ ನಡುವೆ ಚರ್ಚೆ ಹೊಸದೇನೂ ಆಗಿರಲಿಲ್ಲ, ಇಬ್ಬರೂ ತಮ್ಮ ಪೀಳಿಗೆಯ ಒಂದು ಆಳವಾದ ಸಾಮಾಜಿಕ, ರಾಜಕೀಯ ಮತ್ತು ತಾತ್ವಿಕ ತಳಮಳದ ವಕ್ತಾರರಾಗಿದ್ದರು. ಅದು ತುಂಬ ಹಿಂದೆಯೇ ಹುಟ್ಟಿದ ಆದರೆ ಇಂದಿಗೂ ಮುಗಿಯದ ಘರ್ಷಣೆ. ಅಸ್ಪೃಶ್ಯ ಅಂಬೇಡ್ಕರ್ ಸುಮಾರು ಕ್ರಿಸ್ತಪೂರ್ವ 200-100 ರ ಹಿಂದಿನ ಜಾತಿವಿರೋಧಿ ಬೌದ್ಧಿಕ ಪರಂಪರೆಯ ವಕ್ತಾರರು. ಜಾತಿಪದ್ಧತಿ ಹುಟ್ಟಿದ್ದು ಋಗ್ವೇದದ (ಕ್ರಿಸ್ತಪೂರ್ವ 1200-900) ಪುರುಷ ಸೂಕ್ತದ ಶ್ಲೋಕದಲ್ಲಿ ಎಂಬ ನಂಬಿಕೆ ಇದೆ. ಸಾವಿರ ವರುಷಗಳ ನಂತರ ಬಂದ ಬೌದ್ಧರು ಸಂಘಗಳನ್ನು ನಿರ್ಮಿಸಿ ಜಾತಿಯನ್ನು ನಿರ್ಲಕ್ಷಿಸಿ ಎಲ್ಲರನ್ನೂ ಒಳಗೊಂಡಿದ್ದರಿಂದ ಆದನ್ನು ಮೊದಲು ಪ್ರಶ್ನಿಸಿದ್ದು ಬೌದ್ಧರು. ಆದರೂ ಜಾತಿ ಎನ್ನುವುದು ಬೇರೂರುತ್ತಾ ಬೆಳೆಯುತ್ತಿತ್ತು, ಹನ್ನೆರಡನೆಯ ಶತಮಾನದ ಮಧ್ಯಭಾಗದಲ್ಲಿ ದಕ್ಷಿಣ ಭಾರತದ ಬಸವ ಚಳವಳಿ ಜಾತಿಯನ್ನು ಪ್ರಶ್ನಿಸಿ ಕೆಲಸಮಯದ ನಂತರ ದಮನಿಸಲ್ಪಟ್ಟಿತು. ಹದಿನಾಲ್ಕನೆಯ ಶತಮಾನದಿಂದ ಚೋಖಾಮೇಳಾ, ರವಿದಾಸ್, ಕಬೀರ್, ತುಕಾರಾಮ್, ಮೀರಾ, ಜನಾಬಾಯಿರಂತಹ ಭಕ್ತಿಕವಿಗಳು ಜಾತಿವಿರೋಧಿ ಪರಂಪರೆಯ ವಕ್ತಾರರಾಗಿ ಹೊರಹೊಮ್ಮಿದರು. ಹತ್ತೊಂಭತ್ತನೆಯ ಮತ್ತು ಇಪ್ಪತ್ತನೆಯ ಶತಮಾನದ ಮೊದಲಿಗೆ ಪಶ್ಚಿಮ ಭಾರತದಲ್ಲಿ ಸತ್ಯಶೋಧಕ ಸಮಾಜದ ಜೋತಿಬಾ ಫುಲೆ; ಹಿಂದೂ ಧರ್ಮದಿಂದ ಕ್ರಿಶ್ಚಿಯನ್ ಆಗಿ ಮತಾಂತರ ಹೊಂದಿ ಅದನ್ನೂ ಪ್ರಶ್ನಿಸಲು ಹಿಂಜರಿಯದ ಮತ್ತು ಭಾರತದ ಮೊತ್ತ ಮೊದಲ ಸ್ತ್ರೀವಾದಿ ಎಂದು ಕರೆಯಬಹುದಾದ ಪಂಡಿತ ರಮಾಬಾಯಿ; ಆದಿ ಹಿಂದೂ ಚಳವಳಿಯ ನೇತೃತ್ವ ವಹಿಸಿದ್ದ ಭಾರತೀಯ ಅಚೂತ್ ಮಹಾಸಭಾವನ್ನು ಪ್ರಾರಂಭಿಸಿದ ಹಾಗೂ 'ಅಚೂತ್' ಎಂಬ ದಲಿತ ಪತ್ರಿಕೆಯನ್ನು ನಡೆಸುತ್ತಿದ್ದ ಸ್ವಾಮಿ ಅಚೂತಾನಂದ ಹರಿಹರ; ಮಲಬಾರ್ ಮತ್ತು ತಿರುವಾಂಕೂರಿನಲ್ಲಿ ಹಳೆಯ ಪದ್ಧತಿಯನ್ನು ಬುಡಮೇಲು ಮಾಡಲು ಪ್ರಯತ್ನಿಸಿದ ಅಯ್ಯಂಕಳಿ ಮತ್ತು ಶ್ರೀ ನಾರಾಯಣ ಗುರು ಮತ್ತು ತಮಿಳು ಲೋಕದಲ್ಲಿ ಬ್ರಾಹ್ಮಣ ಶ್ರೇಷ್ಠತೆಯನ್ನು ಗೇಲಿ ಮಾಡಿದ ಮೂರ್ತಿ ಭಂಜಕ ಲ್ಯೋದೀ ತಾಸ್ ಮತ್ತವರ ಶಾಕ್ಯ ಬೌದ್ಧರು, ಇತ್ಯಾದಿ. ಜಾತಿವಿರೋಧಿ ಪರಂಪರೆಯ ಅಂಬೇಡ್ಕರರ ಸಮಕಾಲೀನರಲ್ಲಿ ಮದ್ರಾಸ್ ಪ್ರಾಂತ್ಯದಲ್ಲಿ 'ಪೆರಿಯಾರ್' ಎಂದು ಪ್ರಸಿದ್ಧರಾಗಿದ್ದ ಇ. ವಿ ರಾಮಸಾಮಿ ನಾಯ್ಕರ್, ಬೆಂಗಾಲಿನ ಯೋಗೇಂದ್ರನಾಥ್ ಮಂಡಲ್, ಪಂಜಾಬಿನಲ್ಲಿ ಸಿಖ್ ಮತ್ತು ಹಿಂದೂ ಧರ್ಮಗಳೆರಡನ್ನೂ ನಿರಾಕರಿಸಿದ ಆದ್ ಧರ್ಮ್ ಚಳವಳಿಯ ಸ್ಥಾಪಕ ಬಾಬು ಮಂಗೂ ರಾಮ್. ಇವರೆಲ್ಲಾ ಅಂಬೇಡ್ಕರರ ಜನ.

ಗುಜರಾತಿ ಬನಿಯ ಕುಟುಂಬದಲ್ಲಿ ಹುಟ್ಟಿದ ಗಾಂಧಿ ಹುಟ್ಟಿನಿಂದ ಸವಲತ್ತುಳ್ಳ ಸವರ್ಣೀಯ ಹಿಂದೂ ಆಗಿ ಹಿಂದೂ ಧರ್ಮವನ್ನು ಸುಧಾರಿಸಲು ಪ್ರಯತ್ನಿಸಿದ ಪರಂಪರೆಗೆ ಸೇರಿದವರು. ಅಲ್ಲಿ 1828 ರಲ್ಲಿ ಬ್ರಹ್ಮೋ ಸಮಾಜವನ್ನು ಸ್ಥಾಪಿಸಿದ ರಾಜಾರಾಮ್ ಮೋಹನ್ ರಾಯ್; 1875 ರಲ್ಲಿ ಆರ್ಯ ಸಮಾಜವನ್ನು ಸ್ಥಾಪಿಸಿದ ಸ್ವಾಮಿ ದಯಾನಂದ ಸರಸ್ವತಿ; 1897 ರಲ್ಲಿ ರಾಮಕೃಷ್ಣ ಮಿಷನ್ ಅನ್ನು ಸ್ಥಾಪಿಸಿದ ಸ್ವಾಮಿ ವಿವೇಕಾನಂದ ಮತ್ತು ಇನ್ನೂ ಕೆಲವು ಸಮಕಾಲೀನ ಸುಧಾರಣಾ ಸಂಸ್ಥೆಗಳಿವೆ.



ಅಂಬೇಡ್ಕರ್-ಗಾಂಧಿ ಚರ್ಚೆಯನ್ನು ಅದರ ಚರಿತ್ರೆ ಮತ್ತು ನಾಯಕರನ್ನು ಅಷ್ಟಾಗಿ ಬಲ್ಲದವರಿಗೆ ಸಾಂಧರ್ಬಿಕ ಚೌಕಟ್ಟಿನೊಳಗೆ ಹಾಕಬೇಕೆಂದರೆ ಅವರಿಬ್ಬರು ಕ್ರಮಿಸಿದ ರಾಜಕೀಯ ಹಾದಿಗೆ ಹಲವಾರು ರೀತಿಯ ಪ್ರವೇಶಗಳನ್ನು ಪಡೆದುಕೊಳ್ಳುವುದು ಅಗತ್ಯವಾಗುತ್ತದೆ. ಯಾಕೆಂದರೆ ಅದು ಭಿನ್ನ ಅಭಿಪ್ರಾಯಗಳುಳ್ಳ ಇಬ್ಬರ ನಡುವಿನ ತಾತ್ವಿಕ ಚರ್ಚೆ ಮಾತ್ರ ಅಲ್ಲ, ಅವರಿಬ್ಬರೂ ಪ್ರತಿನಿಧಿಸಿದ್ದು ಪರಸ್ಪರ ಭಿನ್ನವಾದ ಗುಂಪಿನ ಹಿತಾಸಕ್ತಿಗಳನ್ನು ಹಾಗೂ ಆ ಘರ್ಷಣೆ ಅನಾವರಣಗೊಂಡಿದ್ದು ಭಾರತೀಯ ಸ್ವಾತಂತ್ರ್ಯ ಚಳವಳಿಯ ಹೃದಯ ಭಾಗದಲ್ಲಿಯೇ. ಅವರಿಬ್ಬರ ಮಾತು ಮತ್ತು ಕೃತಿ ಬೀರಿರುವ ಪ್ರಚಂಡ ಪ್ರಭಾವವನ್ನು ಪ್ರಸ್ತುತ ರಾಜಕೀಯದಲ್ಲೂ ಕಾಣುವುದು ಕಷ್ಟವೇನಲ್ಲ. ಈ ವ್ಯತ್ಯಾಸಗಳು ಅಂದಿನಂತೆ ಇಂದಿಗೂ ಪರಸ್ಪರ ರಾಜಿ ಮಾಡಿಕೊಳ್ಳಲಾಗದ ಸ್ಥಿತಿಯಲ್ಲೇ ಉಳಿದಿವೆ. ಇಬ್ಬರೂ ಅವರವರ ಬೆಂಬಲಿಗರಿಗೆ ಅಚ್ಚುಮೆಚ್ಚಿನವರಷ್ಟೇ ಅಲ್ಲ, ಪೂಜನೀಯರೂ ಹೌದು. ಅವರಿಬ್ಬರೂ ಪರಸ್ಪರ ಬಿಡಿಸಲಾಗದ ಬಂಧದಲ್ಲಿದ್ದರೂ ಸಹ ಇವರ ನಿಲುವು ಅವರಿಗೆ ಅವರ ನಿಲುವು ಇವರಿಗೆ ರುಚಿಸದು. ಅಂಬೇಡ್ಕರ್ ಗಾಂಧಿಯನ್ನು ರಾಜಕೀಯವಾಗಿ ಮತ್ತು ಬೌದ್ಧಿಕವಾಗಿ ಅಷ್ಟೇ ಅಲ್ಲ, ನೈತಿಕವಾಗಿಯೂ ಪ್ರಶ್ನಿಸುತ್ತಿದ್ದ ಅಸಾಧಾರಣ ಎದುರಾಳಿಯಾಗಿದ್ದರು. ಗಾಂಧಿಯ ಕತೆ ಹೇಳುವಾಗ ಅಂಬೇಡ್ಕರರ ಪಾತ್ರವನ್ನು ಕತ್ತರಿಸಿ ಎಸೆಯುವುದು ಗಾಂಧಿಗೂ ಮಾಡುವ ದ್ರೋಹವೇ. ನಾವೆಲ್ಲ ಬೆಳೆದದ್ದು ಅಂತಹ ಗಾಂಧಿಯ ಕತೆಯನ್ನು ಕೇಳುತ್ತಲೇ. ಹಾಗೆಯೇ,



ಗಾಂಧಿಯಿಲ್ಲದ ಅಂಬೇಡ್ಕರ್ ಕತೆಯೂ ಅಂಬೇಡ್ಕರರಿಗೆ ಮಾಡುವ ದ್ರೋಹವೇ ಹೌದು. ಯಾಕೆಂದರೆ ಅಂಬೇಡ್ಕರರ ಲೋಕದಲ್ಲಿ ಗಾಂಧಿಯ ನೆರಳು ಹಲವಾರು ರೀತಿಯಲ್ಲಿ ಹಾಗೂ ಅಹಿತಕರ ರೂಪಗಳಲ್ಲಿ ಇದ್ದೇ ಇತ್ತು.

****

ನಮಗೆಲ್ಲ ಗೊತ್ತಿರುವಂತೆ ಭಾರತೀಯ ಸ್ವಾತಂತ್ರ್ಯ ಚಳವಳಿ ತಾರಾವ್ಯಕ್ತಿತ್ವಗಳಿಂದ ತುಂಬಿಹೋಗಿತ್ತು, ಹಾಗಾಗಿ ಅದು ಹಾಲಿವುಡ್ಡಿನ ಚಲನಚಿತ್ರವಾಗಲಿಕ್ಕೂ ಸಹ ಒದಗಿ ಬಂದು ಎಂಟು ಆಸ್ಕರ್ ಪ್ರಶಸ್ತಿಗಳನ್ನು ಗೆದ್ದು ಪ್ರಚಂಡ ಯಶಸ್ಸನ್ನು ಪಡೆದುಕೊಂಡಿತು. ಭಾರತದಲ್ಲಿ ನಮ್ಮ ರಾಷ್ಟ್ರಪಿತೃಗಳ (ಮಾತೃಗಳು ಅದಕ್ಕೆ ಹೊಂದುವುದಿಲ್ಲವಲ್ಲ!) ಬಗ್ಗೆ ಆಗಾಗ ಅಭಿಪ್ರಾಯ ಸಮೀಕ್ಷೆ ನಡೆಸುವುದು, ಆ ತಾರಾಮಂಡಲವನ್ನು ಆಚೀಚೆ ಜರುಗಿಸಿ ಇನ್ನೊಂದು ಬಗೆಯ ಶ್ರೇಣೀಕೃತ ರೂಪವನ್ನು ಕೊಡುವುದು ಮತ್ತು ಅದರ ಬಗ್ಗೆ ಪುಸ್ತಕಗಳನ್ನು ಪತ್ರಿಕೆಗಳನ್ನು ಪ್ರಕಟಿಸುವುದು ಒಂದು ಹವ್ಯಾಸವಾಗಿಬಿಟ್ಟಿದೆ. ಮಹಾತ್ಮ ಗಾಂಧಿಯನ್ನು ಕಟುವಾಗಿ ಟೀಕಿಸುವ ವಿಮರ್ಶಕರೂ ಇದ್ದಾರೆ. ಆದರೂ ತಾರಾಮಂಡಲದ ತುತ್ತತುದಿಯಲ್ಲಿರುವುದು ಗಾಂಧಿಯೇ. ಬೇರೆ ಯಾರಾದರನ್ನು ತರಬೇಕೆಂದರೂ ಗಾಂಧಿಯನ್ನೇ ಪ್ರತ್ಯೇಕ ವರ್ಗವಾಗಿಸಿ ಪ್ರಶ್ನೆಯನ್ನು ಹಾಕಿಕೊಳ್ಳಬೇಕು: ಗಾಂಧಿಯ ನಂತರದ ಅತ್ಯಂತ ಶ್ರೇಷ್ಠ ಭಾರತೀಯ ಯಾರು?

ಭಾರತೀಯ ಸರಕಾರ ಸಹನಿಧಿ ಒದಗಿಸಿದ್ದ ರಿಚರ್ಡ್ ಅಟೆನ್‌ಬರೋ ನಿರ್ದೇಶನದ 'ಗಾಂಧಿ' ಚಿತ್ರದಲ್ಲಿ ಅಂಬೇಡ್ಕರ್ ಒಂದು ಮೂಕ ಪಾತ್ರವಾಗಿಯೂ ಒದಗಿ ಬರಲಿಲ್ಲ. ಉಳಿದಂತೆ ಸಾಮಾನ್ಯವಾಗಿ ಅವರು ಕಾಣಸಿಗುವುದು ಕಥೆಯ ಕೊನೆಯ ಭಾಗದಲ್ಲಿ, ಸಂವಿಧಾನಶಿಲ್ಪಿಯಾಗಿ. ಅವರ ರಾಜಕೀಯ ಗಾಢಾಸಕ್ತಿ, ನಿಲುವು, ವಿಚಾರಧಾರೆ, ಹೋರಾಟ ಎಲ್ಲವೂ ಗೌಣವಾಗಿಬಿಡುತ್ತವೆ. ಅದರ ಪರಿಯನ್ನು ನೋಡಿದಾಗ ಇತ್ಯಾತ್ಮಕ ತಾರತಮ್ಯದ ನಿದರ್ಶನವಾಗಿ ಮಾತ್ರ, ಪೊಲಿಟಿಕಲಿ ಕರೆಕ್ಟ್ ಆಗಿರಲು ಮಾತ್ರ ಅಂಬೇಡ್ಕರರನ್ನು ಅಲ್ಲಿ ಸೇರಿಸಲಾಗಿದೆ ಅಂತನ್ನಿಸುತ್ತದೆ. ಇರಲಿ, ಹಾಗೆ ಸೇರಿಸುವಾಗಲೇ ಕೆಲವರು ಏನೋ ಗೊಣಗಿದಂತೆ ಸಹ ಕೇಳಿಸಬಹುದು. ಏನದು? ಓ, ಅಂಬೇಡ್ಕರ್ ಒಬ್ಬ 'ಅವಕಾಶವಾದಿ' ಆಗಿದ್ದರು (1942-46 ರಲ್ಲಿ ಅವರು ಬ್ರಿಟಿಷ್ ವೈಸರಾಯ್‌ನ ಕಾರ್ಯಕಾರಿ ಮಂಡಳಿಯ ಸದಸ್ಯರಾಗಿದ್ದರಲ್ಲ?). ಅವರೊಬ್ಬ 'ಬ್ರಿಟಿಷ್ ಕೈಗೊಂಬೆ' ಆಗಿದ್ದರು (ಯಾಕೆಂದರೆ 1930 ರಲ್ಲಿ ಕಾಂಗ್ರೆಸ್ ನಾಯಕರೆಲ್ಲ ಉಪ್ಪಿನ ಕಾಯಿದೆಯನ್ನು ಉಲ್ಲಂಘಿಸಿ ಜೈಲು ಸೇರುತ್ತಿದ್ದಾಗ ಮೊದಲನೆಯ ದುಂಡುಮೇಜಿನ ಪರಿಷತ್ತಿಗೆ ಬ್ರಿಟಿಷ್ ಸರಕಾರ ನೀಡಿದ್ದ ಆಹ್ವಾನವನ್ನು ಒಪ್ಪಿಕೊಂಡಿದ್ದರಲ್ಲ?) ಅಸ್ಪೃಶ್ಯರಿಗೆ ಪ್ರತ್ಯೇಕ ಚುನಾವಣಾ ಕ್ಷೇತ್ರಗಳನ್ನು ಕೇಳಿದ್ದಕ್ಕೆ 'ಪ್ರತ್ಯೇಕತಾವಾದಿ' ಹಾಗೂ ಮುಸ್ಲಿಮ್ ಲೀಗಿನ ಪ್ರತ್ಯೇಕ ಪಾಕಿಸ್ತಾನವನ್ನು ಸಮರ್ಥಿಸಿದ್ದಕ್ಕೆ ಮತ್ತು ಜಮ್ಮು ಕಾಶ್ಮೀರದ ತ್ರಿ-ಭಾಗವನ್ನು ಸೂಚಿಸಿದ್ದಕ್ಕೆ ಅವರೊಬ್ಬ 'ರಾಷ್ಟ್ರವಿರೋಧಿ.'

ಈ ಬೈಗುಳಗಳನ್ನು ಅತ್ತ ಸರಿಸಿ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿದಾಗ ಅಂಬೇಡ್ಕರ್ ಆಗಲಿ, ಗಾಂಧಿ ಆಗಲಿ ಅಷ್ಟು ಸುಲಭವಾಗಿ 'ಸಾಮ್ರಾಜ್ಯ-ಪರ' ಅಥವಾ 'ಸಾಮ್ರಾಜ್ಯ-ವಿರೋಧಿ' ಎಂಬ ಲೇಬಲ್ಲುಗಳ ಹಿಡಿತಕ್ಕೆ ಸಿಗದಷ್ಟು ಅವರ ವ್ಯಕ್ತಿತ್ವ ಸಂಕೀರ್ಣವಾದದ್ದು ಎನ್ನುವುದು ತಿಳಿಯುತ್ತದೆ. ಅವರ ನಡುವಿನ ಘರ್ಷಣೆ ಇನ್ನಷ್ಟು ಸಂಕೀರ್ಣವಾಗುತ್ತಾ ಸಾಮ್ರಾಜ್ಯಶಾಹಿಯ ರೂಪವನ್ನೂ ಅದರ ವಿರುದ್ಧದ ಹೋರಾಟವನ್ನೂ ನಮಗೆ ಹೆಚ್ಚು ಅರ್ಥ ಮಾಡಿಸುತ್ತದೆ.

ಚರಿತ್ರೆ ಗಾಂಧಿಗೆ ಪ್ರೀತ್ಯಾದರಗಳನ್ನೇ ತೋರಿದೆ. ಅವರು ಬದುಕಿರುವಾಗಲೇ ಮಿಲಿಯನ್ನುಗಟ್ಟಲೆ ಜನ ಅವರನ್ನು ಪೂಜಿಸಿದ್ದಾರೆ. ಗಾಂಧಿಯ ದೈವಿಕತನ ಸಾರ್ವತ್ರಿಕವಾಗಿರುವಂತೆಯೇ ಸಾರ್ವಕಾಲಿಕ ಗುಣವನ್ನೂ ಪಡೆದಿರುವಂತೆ ತೋರುತ್ತದೆ. ಗಾಂಧಿಯೆಂಬ ರೂಪಕ ಗಾಂಧಿಯೆಂಬ ವ್ಯಕ್ತಿಯನ್ನೂ ಮೀರಿ ನಿಂತಿರುವಂತದ್ದು. ಆ ರೂಪಕ ಗಾಂಧಿಯನ್ನು ಮತ್ತೆ ಮತ್ತೆ ಆವಿಷ್ಕರಿಸು... ಹಾಗಾಗಿಯೇ ಗಾಂಧಿಯ ವಿಮರ್ಶ... ಗಾಂಧಿವಾದಿಗಳು ಆತಂಕಪಡಬೇಕಿಲ್ಲ, ಗಾಂಧಿ ... ಎಲ್ಲವೂ ಆಗಬಲ್ಲಂತವರು. ಒಬಾಮಗೆ ಹೇಗೆ ಇಷ್ಟವೋ 'ಆಕ್ರಮಿಸಿಕೊಳ್ಳಿ ಚಳವಳಿ'ಯವರಿಗೂ ... ವ್ಯವಸ್ಥೆ ಇಷ್ಟಪಡುವಂತೆ ಅರಾಜಕರೂ ಇಷ್ಟಪ... ನರೇಂದ್ರ ಮೋದಿಗೆ ಹೇಗೋ ಹಾಗೇ ರಾಹುಲ್ ಗಾ... ಬಡವರಿಗೂ ಶ್ರೀಮಂತರಿಗೂ ಗಾಂಧಿ ಇಷ್ಟವೇ...

ಗಾಂಧಿ ಎಂದರೆ ಯಥಾಸ್ಥಿತಿವಾದವನ್ನು ಹಿಡಿಯುವ ಸಂತನಂತೆ.

ಗಾಂಧಿಯ ಬದುಕು ಮತ್ತು ಬರಹದ ... ನಲವತ್ತೆಂಟು ಸಾವಿರ ಪುಟಗಳನ್ನು ಸಮಗ್ರ ... ತೊಂಬತ್ತೆಂಟು ಸಂಪುಟಗಳನ್ನಾಗಿ ವಿಂಗಡಿಸಿ ಪ್ರತಿ... ಘಟನೆಯನ್ನೂ, ಪ್ರತಿಯೊಂದು ವಾಕ್ಯವನ್ನೂ ... ರೂಪಗಳಲ್ಲಿ ಎಷ್ಟು ಬಾರಿ ಪ್ರಕಟಿಸಲಾಗಿದೆಯೆಂದರೆ ... ಒಂದು ಸುಸಂಬದ್ಧ ಕಥನದ ಸಾಧ್ಯತೆ ಇದ್ದಿರ... ಇದೆಯೆ ಎಂದು ಅಚ್ಚರಿ ಪಡುವಷ್ಟು. ಗಾಂಧಿ ಎ... ಎಲ್ಲದರ ವಿರುದ್ಧವನ್ನೂ ಹೇಳಿದ್ದರು. ಹಣ್ಣಾಯುವ ... ಎಂಥ ವೈವಿಧ್ಯಮಯ ಹಣ್ಣುಗಳು ಸಿಕ್ಕುತ್ತವೆ... ಒಂದೇ ಮರದಲ್ಲಿ ಈ ಪಾಟಿ ಬಗೆಬಗೆಯ ಹ... ಸಾಧ್ಯವೆ ಎಂದು ಅವರೇ ಆಶ್ಚರ್ಯಪಡುವಷ್ಟು!

ಉದಾಹರಣೆಯಾಗಿ ಗಾಂಧಿ 1946 ರಲ್ಲಿ ... **"The Pyramid vs. the Oceanic Ci...** (ಪಿರಮಿಡ್ ಮತ್ತು ಸಾಗರದ ಸುರುಳಿಗಳು) ಲೇಖ... ಅವರ ಸುಪ್ರಸಿದ್ಧ ಗ್ರಾಮೀಣ ಸ್ವರ್ಗದ ಪರಿಕಲ್ಪ... ನೋಡಬಹುದು:

"ಸ್ವಾತಂತ್ರ್ಯವೆನ್ನುವುದು ತಳಮಟ್ಟದಿಂದಲೇ ... ವಾಗಬೇಕು. ಹಳ್ಳಿ ಎಂಬ ಘಟಕ ಪೂರ್ಣ ಅಧಿಕಾ... ಹೊಂದಿರುವ ಪಂಚಾಯತ್ ವ್ಯವಸ್ಥೆಯಾಗಿರಬೇಕು. ಪ್ರತಿ ಹಳ್ಳಿ ಯಾರ ಸಹಾಯವೂ ಇಲ್ಲದೇ ತನ್ನನ್ನು ನಿಭಾಯಿಸಿಕೊಳ್ಳುವಷ್ಟು ಸ್ವಾವಲಂಬಿಯಾಗಿರಬೇಕು. ಅಸಂಖ್ಯ ಹಳ್ಳಿಗಳುಳ್ಳ ರಚನೆಯಲ್ಲಿ ಹರಡುತ್ತಾ ಹೋ... ಸುರುಳಿಗಳು ಇರಬೇಕು, ಏರುತ್ತಾ ಹೋಗುವ ಸುರು... ಬದುಕು ತಳಗಟ್ಟನ್ನು ಮೆಟ್ಟಿ ನಿಂತು ವಿರಾಜಿ... ತುತ್ತತುದಿಯ ಪಿರಮಿಡ್ಡಿನಂತೆ ಇರಬಾರದು. ಬ... ಸಾಗರದ ಸುರುಳಿಗಳಂತೆ ಹರಡಿಕೊಂಡಿರಬೇಕು. ಅದ... ಕೇಂದ್ರಬಿಂದುವಾಗಿ ವ್ಯಕ್ತಿ ಇರುತ್ತಾನೆ. ಅವನು ... ಗೋಸ್ಕರ ತನ್ನನ್ನು ಅರ್ಪಿಸಿಕೊಂಡಿರುತ್ತಾನೆ.. ಹಾ... ಸುತ್ತಳತೆಯಲ್ಲಿರುವ ಸುರುಳಿ ಒಳಗಿನ ಸುರುಳಿ... ತುಳಿಯುವುದಿಲ್ಲ, ಬದಲಾಗಿ ಅದರ ಬಲ... ಹೆಚ್ಚಿಸುವುದರ ಮೂಲಕ ತನ್ನನ್ನೂ ಬಲಪಡಿಸಿಕೊಳ್ಳು...

ಹಾಗೆಯೇ 1921ರಲ್ಲಿ 'ನವಜೀವನ್' ಪತ್ರಿಕ... ಬರೆದ ಜಾತಿಪದ್ಧತಿಯ ಸಮರ್ಥನೆಯನ್ನೂ ನೋಡಬಹ... ಅದನ್ನು ಗುಜರಾತಿಯಿಂದ ಅನುವಾದಿಸಿರುವ ಅಂಬೇ... ಗಾಂಧಿಯವರ ಗುಜರಾತಿ ಮತ್ತು ಇಂಗ್ಲಿಷ್ ಬರಹ... ಇತ್ಯಾತ್ಮಕ ತುಲನೆಗೆ ಒಳಪಡಿಸಿದರೆ ಗಾಂಧಿ ಜ... 'ವಂಚಿಸುತ್ತಿದ್ದರು' ಎಂದು ಒಂದಕ್ಕಿಂತ ಹೆಚ್ಚು ... ಸೂಚಿಸಿದ್ದರು:

"ನಿಯಂತ್ರಣಕ್ಕೆ ಇನ್ನೊಂದು ಹೆಸರು ಜಾತಿ. ವ್ಯಕ್ತಿಯ ಭೋಗಕ್ಕೆ ಮಿತಿಯನ್ನು ಒಡ್ಡುತ್ತದೆ. ಭೋಗಲಾಲಸೆಗೆ ವ್ಯಕ್ತಿ ಹದ್ದು ಮೀರದಿರಲಿ ಎಂದು ನಿರ್ಬಂಧಗಳು ಅಸ್ತಿತ್ವದಲ್ಲಿವೆ. ಸಹ-ಭೋಜನ ... ಅನ್ಯಗೋತ್ರವಿವಾಹಗಳನ್ನು ನಿರ್ಬಂಧಿಸುವ ಅರ್ಥವೂ ... ಹಾಗಾಗಿ ಜಾತಿನಿರ್ಮೂಲನೆ ಮಾಡಹೊರಟ... ಯಾರೊಂದಿಗೂ ನನ್ನ ಸಹಮತವಿರುವುದಿಲ್ಲ."

ಇದು 'ಏರುತ್ತಾ ಹೋಗದ ಆದರೆ ಹರ... ಹೋಗುವ ಸುರುಳಿಗಳ' ತದ್ವಿರುದ್ಧವಲ್ಲದೇ ಇನ್ನೇ...

ಇವೆರಡೂ ಹೇಳಿಕೆಗಳ ನಡುವೆ ಇಪ್ಪತ್ತೈದು ವರು... ಅಂತರವಿತ್ತು ಎನ್ನುವುದೂ ನಿಜವೆ. ಅಂದರೆ ಗಾ... ಸುಧಾರಿಸಿದರೆ? ಜಾತಿಯ ಬಗ್ಗೆ ಅವರಿಗಿದ್ದ ನಿ... ಬದಲಾಯಿತೆ? ಅದಂತೂ ಹೌದು, ಗಾಂಧಿ ಹಿಮ... ನಿಧಾನವಾಗಿ ಕರಗುವ ವೇಗದಲ್ಲಿ ಬದಲಾಗಿ... ಜಾತಿಪದ್ಧತಿಯ ಎಲ್ಲ ಸೂಕ್ಷ್ಮ ವಿವರಗಳನ್ನೂ ಒಪ್ಪಿಕೊ... ಗಾಂಧಿ ಬೇರೆ ಬೇರೆ ಜಾತಿಗಳು 'ಕೂಡಿಕೊಂಡು' ನಾಲ್ಕು ವರ್ಣಗಳಾಗಿ ವಿಂಗಡನೆಯಾಗಬೇಕು ಎಂಬ... ಸಾಗಿದ್ದರು. ಅಂಬೇಡ್ಕರ್ ಅದೇ ಚಾತುರ್ವರ್ಣ ವ್ಯವಸ್ಥೆ... ಜಾತಿಪದ್ಧತಿಯ ಮೂಲ ಎಂದು ಕರೆದಿದ್ದರು. ... ನಿಲುವುಗಳು ರಾಜಕೀಯ ಸಕ್ರಿಯೆಯಾಗಿ ಮಾರ್ಪ... ಬರೀ ಅಭಿಪ್ರಾಯವಾಗಿ ಉಳಿಯಬಹುದಾದ ... ಬದುಕಿನ ಕೊನೆಯಲ್ಲಿ ಗಾಂಧಿ ಜಾತಿಗಳ ನಡು... ಸಹ-ಭೋಜನ ಮತ್ತು ಮದುವೆಯ ಬಗ್ಗೆ ... ಅಭ್ಯಂತರವೇನೂ ಇಲ್ಲವೆಂದಿದ್ದರು. ಕೆಲವೊಮ್ಮೆ ತ...

⇨ 0

ಜೈ ಭೀಮ್




ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

ಸತ್ಯ ಹೇಳಬೇಕೆಂದರೆ ಹಲವು ವರ್ಷಗಳ ಹಿಂದಿನವರೆಗೆ ನನಗೆ ಬಾಬಾಸಾಹೇಬ್ ಅಂಬೇಡ್ಕರ್ ಅವರ ಬಗ್ಗೆ ಹೆಚ್ಚೇನೂ ಗೊತ್ತಿರಲಿಲ್ಲ. ಈಗ ನನಗೆ ಅವರ ಬಗ್ಗೆ ತುಂಬಾ ಗೊತ್ತಿದೆ ಎಂದೂ ಹೇಳುವುದಿಲ್ಲ. ಆದರೆ ಈಗ ಅವರ ಬರಹಗಳನ್ನು ಓದುತ್ತಿದ್ದೇನೆ. ಅವರ ಕುರಿತು ವಿಷಯಗಳನ್ನು ಅರಿತುಕೊಳ್ಳುತ್ತಿದ್ದೇನೆ ಎಂದಷ್ಟೇ ಪ್ರಾಮಾಣಿಕವಾಗಿ ಹೇಳಬಲ್ಲೆ. ಜೊತೆಗೆ ಅವರ ಬಗ್ಗೆ ಅರ್ಥಮಾಡಿಕೊಂಡಂತೆಲ್ಲ 'ಹಿ ಇಸ್ ಸಚ್ ಎ ಮಾರ್ವೆಲಸ್ ಮ್ಯಾನ್' ಅನಿಸುತ್ತಿರುವುದೂ ಅಷ್ಟೇ ನಿಜ.

ಒಂದು ರೀತಿಯಲ್ಲಿ ಆರೆಸ್ಸೆಸ್ ನೇತೃತ್ವದ ಮೋದಿ ಸರ್ಕಾರ ಅಂಬೇಡ್ಕರ್ ಅವರನ್ನು ಅಪೋಷನ ತೆಗೆದುಕೊಳ್ಳಲು ಯತ್ನಿಸಿದಂತೆಲ್ಲಾ ಬಾಬಾಸಾಹೇಬ್ ಅವರ ಗಂಟಲಲ್ಲೇ ಸಿಕ್ಕಿಹಾಕಿಕೊಂಡು ಚೆಡ್ಡಿಗಳ ಅಸಲಿ ಬುದ್ಧಿಯನ್ನು ಮತ್ತೆ ಮತ್ತೆ ಎಲ್ಲರಿಗೂ ಬಹಿರಂಗಪಡಿಸುತ್ತಿದ್ದಾರೆ ಮತ್ತು ಆ ಮೂಲಕ ಜನರಿಗೆ ಹೆಚ್ಚೆಚ್ಚು ಅರ್ಥವಾಗುತ್ತಿದ್ದಾರೆ ಎಂದರೆ ತಪ್ಪಾಗಲಾರದು. ಆ ಕಾರಣಕ್ಕಾದರೂ ಮೋದಿ ಸರ್ಕಾರಕ್ಕೆ ಧನ್ಯವಾದಗಳನ್ನು ಹೇಳಬೇಕು. ಯಾಕೆಂದರೆ ಅವರು ಹೀಗೆ ಅಂಬೇಡ್ಕರ್ ಅವರನ್ನು ಮುಗಿಸಲು ಪ್ರಯತ್ನ ಮಾಡಿಲ್ಲದಿದ್ದರೆ ಇವತ್ತು ಚೆಡ್ಡಿಗಳ ಹಿಕಮತ್ತಿನ ವಿರುದ್ಧ ಇಷ್ಟೊಂದು ಸಂಖ್ಯೆಯಲ್ಲಿ ಲೇಖನಗಳು, ಚರ್ಚೆಗಳು ನಡೆಯುತ್ತಿರಲಿಲ್ಲವೇನೋ.

ಇತ್ತೀಚೆಗೆ ಆರೆಸ್ಸೆಸ್‌ನ ನಾಯಕ ಮೋಹನ್ ಭಾಗವತ್ "ಅಂಬೇಡ್ಕರ್ ಅವರು ನಮ್ಮ ಸಂಘದ ಹಿಂದೂತ್ವ ಸಿದ್ಧಾಂತವನ್ನು ಸಮರ್ಥಿಸಿದ್ದರು. ಅವರಿಗೆ ಹಿಂದೂ ಧರ್ಮದಲ್ಲಿ ನಂಬಿಕೆ ಇತ್ತು. ಅವರು ಆರೆಸ್ಸೆಸ್ ಜನರನ್ನು ಒಗ್ಗೂಡಿಸುವ ಕೆಲಸ ಮಾಡುತ್ತಿದೆ ಎಂದು 'ಮೆಚ್ಚುಗೆ ವ್ಯಕ್ತಪಡಿಸಿದ್ದರು. ಅವರು ಕೂಡ ತ್ರಿವರ್ಣ ಧ್ವಜದ ಬದಲಾಗಿ ನಮ್ಮ ಕೇಸರಿ ಬಾವುಟವೇ ದೇಶದ ಬಾವುಟ ಆಗಬೇಕು ಎಂದು ಅಭಿಪ್ರಾಯಪಟ್ಟಿದ್ದರು" ಎಂದೆಲ್ಲ ಬೊಗಳೆ ಮಾತುಗಳನ್ನು ಆಡಿದ್ದ. ಹಾಗೆಯೇ ಆರೆಸ್ಸೆಸ್‌ನ ಮುಖವಾಣಿಯಾದ 'ಆರ್ಗನೈಸರ್' ಎಂಬ ಪತ್ರಿಕೆಯಲ್ಲೂ ಅಂಬೇಡ್ಕರ್ ಕುರಿತು ಹತ್ತಾರು ಸುಳ್ಳುಗಳನ್ನು ಪ್ರಕಟಿಸಲಾಗಿತ್ತು. ಈ ತಲೆಕೆಟ್ಟ ಚೆಡ್ಡಿಗಳು ಅಂಬೇಡ್ಕರ್ ಕುರಿತು ಸುಳ್ಳುಗಳನ್ನು ಹೇಳುವ ಮೊದಲು ಮತ್ತು ಅವರ ಅಂತಹ ಮಾತುಗಳನ್ನು ನಂಬುವ ಮೊದಲು ಎಲ್ಲರೂ ಒಂದು ಪ್ರಶ್ನೆಯನ್ನು ಕೇಳಿಕೊಳ್ಳಬೇಕಿದೆ. ಅದೇನೆಂದರೆ "ನಿಜವಾಗಲೂ ಅಂಬೇಡ್ಕರ್ ಅವರಿಗೆ ಹಿಂದೂ ಧರ್ಮದ ಬಗ್ಗೆಯಾಗಲಿ, ಹಿಂದೂತ್ವ ಸಿದ್ಧಾಂತದ ಬಗ್ಗೆಯಾಗಲಿ ಅಂತಹ ನಂಬಿಕೆ ಇದ್ದಿದ್ದರೆ ಅವರು ಯಾಕೆ ಈ ಧರ್ಮವನ್ನು ತ್ಯಜಿಸಿ ಬೌದ್ಧ ಧರ್ಮಕ್ಕೆ ಮತಾಂತರಗೊಂಡರು?" ಆ ಪ್ರಶ್ನೆಯನ್ನು ಎಲ್ಲರೂ ಕೇಳಿಕೊಂಡರೆ ಅಂಬೇಡ್ಕರ್ ಅವರ ಬಗ್ಗೆ ಕುತೂಹಲ ಮೂಡುತ್ತದಲ್ಲದೆ ಅಲ್ಲಿಂದ ಅಂಬೇಡ್ಕರ್ ಅವರನ್ನು ಅರ್ಥಮಾಡಿಕೊಳ್ಳುವ ಪಯಣ ಶುರುವಾಗುತ್ತದೆ. ಪಯಣದಲ್ಲಿ ಅಂಬೇಡ್ಕರ್ ನಮ್ಮೊಳಗೇ ಅರಳುತ್ತಾ ಹೋಗುತ್ತಾರೆ ಮತ್ತು ನಾವೂ ಅರಳುವಂತೆ ಮಾಡುತ್ತಾರೆ.



ಜಿನ್ನಾ ಮತ್ತು ಪೆರಿಯಾರ್ ಜೊತೆ ಅಂಬೇಡ್ಕರ್

ಇನ್ನು ಚೆಡ್ಡಿಗಳು "ಅಂಬೇಡ್ಕರ್ ಅವರು ಇಸ್ಲಾಮ್ ಧರ್ಮದ ವಿರೋಧಿ ಆಗಿದ್ದರು. ಅದಕ್ಕೇ ಅವರು ಇಸ್ಲಾಮ್ ಬದಲು ಬೌದ್ಧ ಧರ್ಮವನ್ನು ಸ್ವೀಕರಿಸಿದರು. ಬೌದ್ಧ ಧರ್ಮ ಹಿಂದೂ ಧರ್ಮದ ಭಾಗ. ಆದ್ದರಿಂದ ಅಂಬೇಡ್ಕರ್ ಹಿಂದೂ ಧರ್ಮವನ್ನೇನು ವಿರೋಧಿಸಿಲ್ಲ" ಎಂಬ ಇನ್ನೊಂದು ಸುಳ್ಳನ್ನು ಹೇಳುತ್ತಾರೆ.

ವಾಸ್ತವವಾಗಿ ಅಂಬೇಡ್ಕರ್ ಅವರು ಹಿಂದೂ ಮೂಲಭೂತವಾದವನ್ನು ವಿರೋಧಿಸಿದಷ್ಟೇ ಕಟುವಾಗಿ ಇಸ್ಲಾಮ್ ಮೂಲಭೂತವಾದವನ್ನೂ ವಿರೋಧಿಸುತ್ತಿದ್ದರು. ಜೊತೆಗೆ ಹಿಂದೂ ಧರ್ಮವನ್ನು ಕಟುವಾಗಿ ಟೀಕಿಸುತ್ತಿದ್ದರು. ಅವರು ಒಮ್ಮೆ ಈ ಎರಡೂ ಮೂಲಭೂತವಾದಿ ಸಿದ್ಧಾಂತದ ನಾಯಕರ ಬಗ್ಗೆ ಹೀಗೆ ಬರೆದಿದ್ದರು: "ವಿಚಿತ್ರವೆನಿಸಿದರೂ ಸಾವರ್ಕರ್ ಮತ್ತು ಜಿನ್ನಾ ಇಬ್ಬರೂ ಪರಸ್ಪರ ವಿರೋಧಿಗಳಾಗುವ ಬದಲು ಒಂದು ನಾಣ್ಯದ ಎರಡು ಮುಖಗಳಂತಿದ್ದಾರೆ. ಇಬ್ಬರೂ ಪ್ರತ್ಯೇಕ ದೇಶಕ್ಕಾಗಿ ಹೋರಾಡುತ್ತಿದ್ದಾರೆ. ಒಬ್ಬರು ಹಿಂದೂ ದೇಶ ಬೇಕೆನ್ನುತ್ತಿದ್ದರೆ ಇನ್ನೊಬ್ಬರು ಮುಸ್ಲಿಮ್ ದೇಶ ಬೇಕೆನ್ನುತ್ತಿದ್ದಾರೆ... ಸಾವರ್ಕರ್ ಅವರ ನಿಲುವು ವಕ್ರವಾಗಿದೆ ಮಾತ್ರವಲ್ಲ ತರ್ಕರಹಿತವಾಗಿಯೂ ಇದೆ. ಮುಸಲ್ಮಾನರು ಪ್ರತ್ಯೇಕ ಎನ್ನುತ್ತಾರೆ ಸಾವರ್ಕರ್. ಅವರಿಗೆ ಸಾಂಸ್ಕೃತಿಕ ಸ್ವಾಯತ್ತತೆ ಇರಬೇಕು ಎಂದೂ ಹೇಳುತ್ತಾರೆ. ಅವರು ತಮ್ಮದೇ ಬಾವುಟವನ್ನು ಹೊಂದಲೂ ಸಮ್ಮತಿ ಸೂಚಿಸುತ್ತಾರೆ. ಆದರೂ ಮುಸಲ್ಮಾನರು ತಮಗೆ ಪ್ರತ್ಯೇಕ ರಾಷ್ಟ್ರ ಬೇಕು ಎನ್ನುವುದನ್ನು ಸಾವರ್ಕರ್ ವಿರೋಧಿಸುತ್ತಾರೆ. ಹಿಂದೂಗಳಿಗೆ ಪ್ರತ್ಯೇಕ ರಾಷ್ಟ್ರ ಬೇಕೆನ್ನುವ ಸಾವರ್ಕರ್ ಅದು ಹೇಗೆ ಮುಸಲ್ಮಾನರಿಗೆ ತಮ್ಮದೇ ಆದ ರಾಷ್ಟ್ರವನ್ನು ನಿರಾಕರಿಸಲು ಸಾಧ್ಯ?"

ಅಷ್ಟೇ ಅಲ್ಲ, ಹಿಂದೂ ಸಮುದಾಯದಲ್ಲಿರುವ ಎಲ್ಲಾ ಶೋಷಿತವರ್ಗಗಳು ಮತ್ತು ಮುಸಲ್ಮಾನರು ಜೊತೆಗೂಡಬೇಕಿದೆ ಎಂದೂ, ದಮನಿತ ವರ್ಗಗಳ ಸ್ಥಿತಿಗತಿಗಳು ಮುಸಲ್ಮಾನರ ಸ್ಥಿತಿಗತಿಗಿಂತ ಭಿನ್ನವಾಗಿಲ್ಲದಿರುವುದರಿಂದ ಅವರೆಲ್ಲರೂ ಒಗ್ಗಟ್ಟಾಗಿ ಮೇಲುಜಾತಿಯವರು ನಿರಾಕರಿಸುತ್ತಾ ಬಂದಿರುವ ಹಕ್ಕುಗಳಿಗಾಗಿ ಹೋರಾಡಬೇಕು ಅನ್ನುತ್ತಾರೆ ಅಂಬೇಡ್ಕರ್.

ಇವತ್ತು ಯಾವ ಅಂಬೇಡ್ಕರ್ ಅವರನ್ನು ಅಪೋಷನ ಮಾಡಿಕೊಳ್ಳಲು ಚೆಡ್ಡಿಗಳು ಯತ್ನಿಸುತ್ತಿದ್ದಾರೋ ಅದೇ ಅಂಬೇಡ್ಕರ್ ಅವರ ಪ್ರತಿಕೃತಿ ದಹನವನ್ನು ಇದೇ ಚೆಡ್ಡಿಗಳು ಮಾಡಿದ್ದರು ಎಂಬುದನ್ನು ಯಾರೂ ಮರೆಯಬಾರದು. ಅದು ಸಂಸತ್ತಿನಲ್ಲಿ ಅಂಬೇಡ್ಕರ್ 'ಹಿಂದೂ ಕೋಡ್ ಬಿಲ್' ಅನ್ನು ಜಾರಿಗೊಳಿಸಲು ಯತ್ನಿಸುತ್ತಿದ್ದ ಸಮಯ. ರಾಮಚಂದ್ರ ಗುಹಾ ಅವರು ತಮ್ಮ 'ಇಂಡಿಯಾ ಆಫ್ಟರ್ ಗಾಂಧಿ' ಪುಸ್ತಕದಲ್ಲಿ ಹೀಗೆ ದಾಖಲಿಸಿದ್ದಾರೆ: "ಹಿಂದೂ ಕೋಡ್ ಬಿಲ್ ಅನ್ನು 'ಹಿಂದೂ ಧರ್ಮದ ಮೇಲೆ ಎಸೆದಿರುವ ಬಾಂಬ್' ಎಂದು ಬಣ್ಣಿಸಿದ ಆರೆಸ್ಸೆಸ್ ನಾಯಕರು ಅದರ ವಿರುದ್ಧ ದೇಶದಾದ್ಯಂತ ಪ್ರಚಾರಾಂದೋಲನವನ್ನು ಶುರುಮಾಡಿದರು. 1949ರ ಡಿಸೆಂಬರ್ 11ರಂದು ಆರೆಸ್ಸೆಸ್ ದೆಹಲಿಯ ರಾಮಲೀಲಾ ಮೈದಾನದಲ್ಲಿ ದೊಡ್ಡ ಸಾರ್ವಜನಿಕ ಸಭೆಯನ್ನು ಆಯೋಜಿಸಿತು. ಆ ಸಭೆಯಲ್ಲಿ ಎಲ್ಲ ಭಾಷಣಕಾರರು ಅಂಬೇಡ್ಕರ್ ಅವರ ಬಿಲ್ ಅನ್ನು ವಿರೋಧಿಸಿದರು. ಮಾರನೆ ದಿನ ಹಲವಾರು ಜನ ಅಸೆಂಬ್ಲಿ ಕಟ್ಟಡದ ಹತ್ತಿರ ಜಮೆ ಆಗಿ ಪ್ರಧಾನಿ ಮತ್ತು ಅಂಬೇಡ್ಕರ್ ಅವರ ಪ್ರತಿಕೃತಿಗಳನ್ನು ದಹಿಸಿದರು. ಕೆಲವರು ಅಲ್ಲೇ ಇದ್ದ ಶೇಕ್ ಅಬ್ದುಲ್ಲಾ ಅವರ ಕಾರನ್ನು ಜಖಂಗೊಳಿಸಿದರು." ಅಂದರೆ ಆರೆಸ್ಸೆಸ್‌ಗೆ ಅಂಬೇಡ್ಕರ್ ಮತ್ತು ಅವರ ಚಿಂತನೆಗಳು ಕಂಡರಾಗುತ್ತಿರಲಿಲ್ಲ. ಆದರೀಗ ದಲಿತರ ಮತಗಳು ಬೇಕಿರುವುದರಿಂದ ತಮ್ಮ ಸೈದ್ಧಾಂತಿಕ ಗುರು ಹೆಗ್ಡೆವಾರ್ ಅವರ ಫೋಟೋ ಜತೆ ಅಂಬೇಡ್ಕರ್ ಅವರ ಫೋಟೋವನ್ನೂ ನೇತು ಹಾಕಿ ಅಂಬೇಡ್ಕರ್ ತಮ್ಮನ್ನು ಬೆಂಬಲಿಸುತ್ತಿದ್ದರಿಂದ ತಾವು ಅವರನ್ನು ಬೆಂಬಲಿಸುತ್ತೇವೆ ಎಂಬ ನಾಟಕ ಆಡುತ್ತಿದ್ದಾರೆ.

ಯಾಕೆ ಅಂಬೇಡ್ಕರ್ ಕಂಡರೆ ಚೆಡ್ಡಿಗಳಿಗೆ ಆಗುತ್ತಿರಲಿಲ್ಲ ಎಂಬ ಪ್ರಶ್ನೆಗೆ ಅಂಬೇಡ್ಕರ್ ಅವರ ಬರಹಗಳು ಸ್ಪಷ್ಟ ಉತ್ತರಗಳನ್ನು ನೀಡುತ್ತವೆ. ಹಿಂದೂ ಧರ್ಮದ ಕಟುಟೀಕಾಕಾರರಾಗಿದ್ದ ಅಂಬೇಡ್ಕರ್ ಅವರ ಹಲವು ಹೇಳಿಕೆಗಳು ಹೀಗಿವೆ:

"ಹಿಂದೂ ಧರ್ಮ ಮತ್ತು ಸಾಮಾಜಿಕ ಐಕ್ಯತೆ ವಿರುದ್ಧವಾದವು. ಹಿಂದೂ ಧರ್ಮದ ತಳಹದಿಯೇ ಸಾಮಾಜಿಕ ಬೇರ್ಪಡಿಸುವಿಕೆ. ಹಿಂದೂಗಳು ಒಂದಾಗಬೇಕಾದರೆ ಅವರು ಮೊದಲು ಹಿಂದೂ ಧರ್ಮವನ್ನು ತ್ಯಜಿಸಬೇಕು. ಯಾಕೆಂದರೆ ಅವರೆಂದೂ ಹಿಂದೂಗಳಾಗಿದ್ದು ಒಂದಾಗಿರಲು ಸಾಧ್ಯವಿಲ್ಲ."

"ಹಿಂದೂ ರಾಷ್ಟ್ರ ಅಸ್ತಿತ್ವಕ್ಕೆ ಬಂದರೆ ಈ ದೇಶಕ್ಕೆ ಅದಕ್ಕಿಂತ ದೊಡ್ಡದಾದ ಅನಾಹುತ ಇನ್ನೊಂದಿಲ್ಲ. ಹಿಂದೂಗಳು ಅದೇನೇ ಹೇಳಿದರೂ ಹಿಂದೂ ಧರ್ಮ ಎಂಬುದು ಸ್ವಾತಂತ್ರ್ಯ ಸಮಾನತೆ ಮತ್ತು ಭ್ರಾತೃತ್ವಕ್ಕೆ ಅಪಾಯಕಾರಿ ಆದದ್ದು. ಆ ಕಾರಣಕ್ಕೇ ಅದು ಪ್ರಜಾಪ್ರಭುತ್ವ ವಿರೋಧಿಯೂ ಹೌದು. ಏನೇ ಆದರೂ ಹಿಂದೂ ರಾಷ್ಟ್ರ ಅಸ್ತಿತ್ವಕ್ಕೆ ಬಾರದಂತೆ ನೋಡಿಕೊಳ್ಳಬೇಕು."

"ಜಾತಿಯನ್ನು ಆಧಾರವಾಗಿಟ್ಟುಕೊಂಡು ಮಾಡುವಂತಹ ಸಮಾಜ ರಚನೆಯಷ್ಟು ಹೀನವ್ಯವಸ್ಥೆ ಮತ್ತೊಂದಿರಲಾರದು. ಈ ವ್ಯವಸ್ಥೆ ಜನರ ಶಕ್ತಿಯನ್ನು ಕುಂದಿಸಿ, ನಿಶ್ಚೇತರನ್ನಾಗಿಸುತ್ತದೆ. ಬದುಕಿನ ಯಾವುದೇ ಸೃಜನಶೀಲ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲಾರದಷ್ಟು ಹೆಳವರನ್ನಾಗಿಸುತ್ತದೆ."

"ನಾವು ನಮ್ಮನ್ನು ಹಿಂದೂಗಳೆಂದು ಗುರುತಿಸಿಕೊಳ್ಳುವುದರಿಂದ ಹೀಗೆ ಹೀನಾಯವಾಗಿ ನಡೆಸಿಕೊಳ್ಳಲಾಗುತ್ತಿದೆ. ಬೇರೊಂದು ಧರ್ಮಕ್ಕೆ ಸೇರಿದರೆ ಇಷ್ಟು ನೀಚವಾಗಿ ನಡೆಸಿಕೊಳ್ಳಲಾರರು. ಸಮಾನತೆಯನ್ನು ನೀಡಬಲ್ಲ ಉತ್ತಮವಾಗಿ ನಡೆಸಿಕೊಳ್ಳಬಲ್ಲ ಯಾವುದೇ ಧರ್ಮವನ್ನು ಆರಿಸಿಕೊಳ್ಳಿ. ತಪ್ಪನ್ನು ಈಗಲಾದರೂ ಸರಿಪಡಿಸಬೇಕಿದೆ. ಅಸ್ಪೃಶ್ಯ ಜಾತಿಯಲ್ಲಿ ಹುಟ್ಟುವ ದುರದೃಷ್ಟ ನನ್ನದಾಗಿತ್ತು. ಅದು ನನ್ನ ಕೈಲಿರಲಿಲ್ಲ. ಆದರೆ ಹಿಂದೂ ಆಗಿಯೇ ನಾನು ಸಾಯಲಾರೆ, ಯಾಕೆಂದರೆ ಅದು ನನ್ನ ಕೈಲಿದೆ."

ಇವತ್ತು ಫೇಸ್‌ಬುಕ್ಕಿನಲ್ಲಿ ಹಲವು ಮಿತ್ರರು ಚೆಡ್ಡಿ ನಾಯಕನೊಬ್ಬನ ಹೇಳಿಕೆಯನ್ನು ಹಂಚಿಕೊಂಡಿದ್ದರು. ಆ ಚೆಡ್ಡಿ ನಾಯಕನ ಪ್ರಕಾರ ದಲಿತರ ಕೈಗಳಲ್ಲಿ ಅಸ್ತ್ರಗಳಿದಿದ್ದರೆ ಈ ದೇಶ ಮುಸಲ್ಮಾನರ ಪಾಲಾಗುತ್ತಿರಲಿಲ್ಲವಂತೆ. ಅದನ್ನು ಓದುತ್ತಿದ್ದಂತೆ ನನಗನ್ನಿಸಿದ್ದು "ಹಾಗೊಮ್ಮೆ ದಲಿತರ ಕೈಗಳಲ್ಲಿ ಅಸ್ತ್ರಗಳಿದಿದ್ದರೆ ಅವರು ಮುಸಲ್ಮಾನರ ವಿರುದ್ಧ ಹೋರಾಡುವ ಮುನ್ನ ನೂರಾರು ವರ್ಷಗಳಿಂದ ತಮ್ಮನ್ನು ಶೋಷಿಸುತ್ತಿದ್ದ ಮೇಲುಜಾತಿಯವರ ಮೇಲೆಯೇ ಅವುಗಳನ್ನು ಪ್ರಯೋಗಿಸುತ್ತಿದ್ದರಲ್ಲವೆ?" ಎಂದು. ದಲಿತರು ಯಾಕೆ ಹೋರಾಡದೆ ಇದ್ದರೆಂದು ಅಂಬೇಡ್ಕರ್ ಹೇಳಿದ ಮಾತುಗಳು ಹೀಗಿವೆ:

"(ಜಾತಿ ವ್ಯವಸ್ಥೆಯ) ಘೋರ ಅನಿಷ್ಟಗಳನ್ನು ಜನಸಮುದಾಯ ಹೇಗೆ ತಾನೆ ತಡೆದುಕೊಂಡಿದೆ? ಜಗತ್ತಿನ ಇತರ ದೇಶಗಳಲ್ಲಿ ಸಾಮಾಜಿಕ ಕ್ರಾಂತಿಗಳು ನಡೆದಿರುವಾಗ ಭಾರತದಲ್ಲಿ ಮಾತ್ರ ಯಾಕಿಲ್ಲ ಎಂಬ ಪ್ರಶ್ನೆ ನನ್ನನ್ನು ತುಂಬ ಕಾಡಿದೆ. ನನಗೆ ಹೊಳೆದಿರುವ ಉತ್ತರ ಒಂದೇ. ಈ ಜಾತಿಪದ್ಧತಿಯೆಂಬ ಅನಿಷ್ಟ ಕೆಳಜಾತಿಗಳನ್ನು ಯಾವರೀತಿಯಲ್ಲೂ ಪ್ರತಿಭಟಿಸದಂತೆ ಮಾಡಿ ಪೂರಾ ನಿಷ್ಕ್ರಿಯರನ್ನಾಗಿಸಿದೆ. ಅವರಿಗೆ ಶಸ್ತ್ರಗಳ ಸವಲತ್ತಿಲ್ಲ. ಶಸ್ತ್ರಗಳಿಲ್ಲದೇ ತಿರುಗಿ ಬೀಳಲಾಗುವುದಿಲ್ಲ. ಕೇವಲ ನೇಗಿಲು ಹೊಡೆಯುವವರಾಗಿಯೇ ಉಳಿಯಬೇಕಾದ ವ್ಯವಸ್ಥೆಯ ಕಪಿಮುಷ್ಠಿಯಲ್ಲಿ ಸಿಲುಕಿದವರು ತಮ್ಮ ನೇಗಿಲುಗಳನ್ನೇ ಶಸ್ತ್ರಗಳಾಗಿ ಪರಿವರ್ತಿಸುವ ಸವಲತ್ತಿಲ್ಲದವರು. ಅವರಿಗೆ ಸೇನಾಬಲವಿಲ್ಲ. ಹಾಗಾಗಿ ಯಾರು ಬೇಕಾದರೂ ಅವರ ಮೇಲೆ ಸವಾರಿ ಮಾಡಬಹುದಿತ್ತು. ಜಾತಿಪದ್ಧತಿಯ ಮೂಲಕ ಶಿಕ್ಷಣದಿಂದ ವಂಚಿತರಾದವರು ಬಿಡುಗಡೆಯ ಬಗ್ಗೆ ಹೇಗೆ ತಾನೆ ಚಿಂತಿಸಬಲ್ಲರು? ಅವರನ್ನು ಹೀನಸ್ಥಿತಿಗೆ ತಳ್ಳಿ ಉಸಿರೆತ್ತದಂತೆ ಕಟ್ಟಿಹಾಕಲಾಗಿತ್ತು. ಬಿಡುಗಡೆಯ ಯಾವ ದಾರಿಯೂ ತೋರದೇ ತಮ್ಮ ಆಜನ್ಮ ದಾಸ್ಯವನ್ನು ಅವರು ಒಪ್ಪಿಕೊಂಡು ತಮ್ಮ ಹಣೆಬರಹವೆಂದುಕೊಂಡು ತೆಪ್ಪಗೆ ಉಳಿದರು."

ಇನ್ನು ಅಸ್ಪೃಶ್ಯತೆ ಮತ್ತು ನಿಜವಾದ ಪ್ರಜಾಪ್ರಭುತ್ವದ ಬಗ್ಗೆ ಬಾಬಾಸಾಹೇಬ್ ಹೇಳಿದ್ದ ಮಾತುಗಳು:

"ಪ್ರಭುತ್ವದಲ್ಲಿ ಪ್ರಾತಿನಿಧ್ಯದ ಹಕ್ಕು ಮತ್ತು ಅಧಿಕಾರದ ಹಕ್ಕು, ಇವೆರಡೂ ಪೌರತ್ವ ಎಂಬ ಪರಿಕಲ್ಪನೆಯ ಮೂಲಭೂತ ಅಂಶಗಳಾಗಿರುತ್ತವೆ. ಆದರೆ ಅಸ್ಪೃಶ್ಯರ ಅಸ್ಪೃಶ್ಯತೆ ಈ ಹಕ್ಕುಗಳನ್ನು ಯಾವತ್ತೂ ಕೈಗೆಟುಕದಂತೆ ಮಾಡುತ್ತವೆ. ಕೆಲವು ಕಡೆ ವೈಯಕ್ತಿಕ ಸ್ವಾತಂತ್ರ್ಯ ಮತ್ತು ವೈಯಕ್ತಿಕ ಭದ್ರತೆಯನ್ನೂ ಹೊಂದಿರದ ಈ ಜನರಿಗೆ ಕಾನೂನಿನ ದೃಷ್ಟಿಯಲ್ಲಿ ಸಮಾನತೆ ಎನ್ನುವುದು ದೂರವೇ ಉಳಿದುಬಿಡುವ ಪರಿಸ್ಥಿತಿ ಹೆಚ್ಚಾಗಿರುತ್ತದೆ. ಇವು ಅಸ್ಪೃಶ್ಯರಿಂದಲೇ ಪ್ರತಿನಿಧಿಸಲ್ಪಡಬೇಕಾದ ಅಸ್ಪೃಶ್ಯರ ಕಾಳಜಿಗಳು. ಅವು ಪ್ರತ್ಯೇಕವಾಗಿ ಅವರಿಗೇ ಸೇರಿದಂತಹ, ಬೇರೆ ಯಾರೂ ಅದನ್ನು ನಿಜವಾಗಿ ಪ್ರತಿನಿಧಿಸಲಾಗದಂತಹ ಕಾಳಜಿಗಳು.. ಆದ್ದರಿಂದ ದಲಿತರ ಸಮಸ್ಯೆಗಳನ್ನು ಪ್ರತಿನಿಧಿಸಲು ದಲಿತರನ್ನು ಹುಡುಕುವುದಷ್ಟೇ ಅಲ್ಲ, ಪರಿಹಾರವನ್ನೂ ಕಂಡುಕೊಳ್ಳಲು ಅಗತ್ಯವಾದಂತಹ ಸಂಖ್ಯೆಯಲ್ಲಿ ದಲಿತ ಪ್ರತಿನಿಧಿಗಳನ್ನು ಹುಡುಕಬೇಕು."

ಹಾಗೆಯೇ ಮಹಡ್ ಹೋರಾಟದಲ್ಲಿ ಅಂಬೇಡ್ಕರ್ ಹೇಳಿದ ಮಾತುಗಳು:

"ಮಹನೀಯರೆ, ಸತ್ಯಾಗ್ರಹ ಸಮಿತಿ ನೀಡಿದ ಆಹ್ವಾನದ ಮೇರೆಗೆ ನೀವಿಲ್ಲಿ ಬಂದು ಸೇರಿದ್ದೀರಿ. ಆ ಸಮಿತಿಯ ಅಧ್ಯಕ್ಷನಾಗಿ ನಿಮಗೆಲ್ಲರಿಗೂ ಕೃತಜ್ಞತೆಯ ಸ್ವಾಗತ ಕೋರುತ್ತೇನೆ. ಮಹಡ್ ಕಾಲುವೆ ಒಂದು ಸಾರ್ವಜನಿಕ ಸ್ವತ್ತು. ಮಹಡ್‌ನ ಸವರ್ಣೀಯ ಹಿಂದೂಗಳು ಎಂತಹ ಉದಾರಿಗಳೆಂದರೆ ತಾವು ಅದರ ನೀರನ್ನು ಬಳಸುವುದಲ್ಲದೆ ಬೇರೆ ಧರ್ಮೀಯರಿಗೂ ಅದನ್ನು ಬಳಸಲು ಬಿಡುತ್ತಾರೆ. ಹಾಗಾಗಿ ಇಸ್ಲಾಮ್ ಧರ್ಮಕ್ಕೆ ಸೇರಿದವರಿಗೂ ಅದರ ಹಕ್ಕುಂಟು. ಅಷ್ಟೇ ಏಕೆ, ಮನುಷ್ಯರಿಗಿಂತ ಕೀಳು ಎಂದು ಪರಿಗಣಿಸಲ್ಪಡುವ ಪ್ರಾಣಿಪಕ್ಷಿಗಳಿಗೂ ಆ ನೀರನ್ನು ಬಳಸಲು ಅನುಮತಿ ಉಂಟು. ಎಲ್ಲಕ್ಕಿಂತ ಹೆಚ್ಚಾಗಿ ಅಸ್ಪೃಶ್ಯರು ಸಾಕುವ ಪಶುಗಳಿಗೂ ಆ ಕೆರೆಗೆ ಪ್ರವೇಶವುಂಟು. ಆದರೆ ಅಸ್ಪೃಶ್ಯರಿಗೆ ಅನುಮತಿಯಿಲ್ಲ. ಅವರ ಸ್ಪರ್ಶದಿಂದ ನೀರು ಮೈಲಿಗೆಯಾಗುತ್ತದೆ ಎಂದಲ್ಲ ಅಥವಾ ಆವಿಯಾಗಿ ಮಾಯವಾಗುತ್ತದೆ ಎಂದೂ ಅಲ್ಲ. ಬದಲಿಗೆ ಹಾಗೆ ಬಿಟ್ಟರೆ ಅವರ ಪವಿತ್ರ ಸಂಪ್ರದಾಯ ಯಾರನ್ನು ಕೀಳು ಕುಲದವರೆಂದು ಘೋಷಿಸಿದೆಯೋ ಅವರು ತಮ್ಮ ಸಮಾನರು ಎಂದು ಒಪ್ಪಿಕೊಳ್ಳಬೇಕಾಗುತ್ತಲ್ಲ? ಅದಕ್ಕೆ ಅವರಿಗೆ ಅನುಮತಿಯಿಲ್ಲ. ಚಾವದಾರ್ ಕೆರೆಯ ನೀರನ್ನು ಕುಡಿದರೆ ನಾವೇನೂ ಅಮರರಾಗುವುದಿಲ್ಲ. ಕುಡಿಯದೆಯೂ ಇಷ್ಟು ಕಾಲ ಬದುಕಿ ಉಳಿದಿದ್ದೇವೆ. ಚಾವದಾರ್ ಕೆರೆಗೆ ನಾವು ಹೋಗುತ್ತಿರುವುದು ನೀರು ಕುಡಿಯಲೆಂದಲ್ಲ. ನಾವೂ ಬೇರೆಯವರಂತೆಯೇ ಮನುಷ್ಯರು ಎಂದು ತೋರಿಸಲು ನಾವು ಆ ಕೆರೆಗೆ ನೀರು ಕುಡಿಯಲು ಹೋಗುತ್ತಿದ್ದೇವೆ. ಸಮಾನತೆಯ ಆ ತತ್ವವನ್ನು ಸ್ಥಾಪಿಸಲು ನಾವಲ್ಲಿಗೆ ಹೋಗುತ್ತಿದ್ದೇವೆ."

ಹಾಗೆಯೇ ದೇವಸ್ಥಾನ ಪ್ರವೇಶ ಕುರಿತು ಅಂಬೇಡ್ಕರ್ ಅವರ ಅಭಿಪ್ರಾಯ:

"ನಿಮ್ನ ವರ್ಗಗಳಿಗೆ ಬೇಕಾಗಿರುವುದು ತಮಗೆ ಸಾಮಾಜಿಕವಾಗಿ ಸಮಾನ ಸ್ಥಾನ ನೀಡಬಲ್ಲ ಒಂದು ಧರ್ಮ ಮಾತ್ರ. ಧರ್ಮದ ಆಧಾರದ ಮೇಲೆ ಪ್ರಸ್ತುತ ಸಾಮಾಜಿಕ ಪಿಡುಗುಗಳನ್ನು ಸಮರ್ಥಿಸಿಕೊಳ್ಳುವ ಉದ್ದೇಶಕ್ಕಿಂತ ಹೀನಾಯವಾದದ್ದು ಇನ್ನೊಂದಿಲ್ಲ. ದೇವಸ್ಥಾನ ಪ್ರವೇಶದಿಂದ ತಮ್ಮ ಅಸಮಾನತೆಗಳನ್ನು ಮೀರುವುದು ನಿಮ್ನವರ್ಗಗಳಿಗೆ ಸಾಧ್ಯವಾಗದಿರಬಹುದು. ಆದರೆ ಅಸಮಾನತೆಗಳನ್ನು ಮುಂದುವರಿಕೆಗೆ ಬೆಂಬಲ ನೀಡುವ ಧರ್ಮವನ್ನು ಅವರು ತಿರಸ್ಕರಿಸುವ ಸಂಕಲ್ಪವನ್ನು ಮಾಡಿದ್ದಾರೆ."

ಕೊನೆಯದಾಗಿ ಅಂಬೇಡ್ಕರ್ ಅವರು ಬೌದ್ಧ ಧರ್ಮವನ್ನು ಸ್ವೀಕರಿಸಿದಾಗ ತಮ್ಮ ಅಭಿಮಾನಿಗಳೊಂದಿಗೆ 22 ವಚನಗಳನ್ನು ಸ್ವೀಕರಿಸಿದ್ದರು. ಆ ವಚನಗಳಲ್ಲಿ ಮೊದಲ ಮೂರು ಹೀಗಿವೆ:

ನನಗೆ ಬ್ರಹ್ಮ, ವಿಷ್ಣು ಮತ್ತು ಮಹೇಶನಲ್ಲಿ ನಂಬಿಕೆ ಇಲ್ಲ ಮತ್ತು ನಾನು ಅವರನ್ನು ಪೂಜಿಸುವುದಿಲ್ಲ.


ನನಗೆ ರಾಮ ಮತ್ತು ಕೃಷ್ಣರಲ್ಲಿ ನಂಬಿಕೆ ಇಲ್ಲ ಮತ್ತು ಅವರು ದೇವರ ಅವತಾರಗಳೆಂದು ನಂಬದ ನಾನು ಅವರನ್ನು ಪೂಜಿಸುವುದಿಲ್ಲ.

ನನಗೆ ಗೌರಿ, ಗಣಪತಿ ಮತ್ತು ಇತರೆ ದೇವಾನುದೇವತೆಗಳಲ್ಲಿ ನಂಬಿಕೆ ಇಲ್ಲ ಮತ್ತು ಅವನ್ನ್ಯಾವನ್ನೂ ಪೂಜಿಸುವುದಿಲ್ಲ.

ಆರೆಸ್ಸೆಸ್ ಅದೆಷ್ಟೇ ಪ್ರಯತ್ನಪಟ್ಟರೂ ಅಂಬೇಡ್ಕರ್ ಎಂದೂ ಅವರ ಪಾಲಾಗುವುದಿಲ್ಲ. ಅವರು ಎಂದೆಂದಿಗೂ ನಮ್ಮವರಾಗಿಯೇ ಇರುತ್ತಾರೆ ಮತ್ತು ನಮಗೆ ಆದರ್ಶರಾಗಿರುತ್ತಾರೆ.


ಜೈ ಭೀಮ್!


ಬೈಂದೂರು: ವೋಟಿಗಾಗಿ ಲ್ಯಾಂಡ್ ಲೂಟ್ ಮಾರ್ ರಾಜಕಾರಣ!



ಗೋಪಾಲ ಪೂಜಾರಿ


ಉಡುಪಿ ಜಿಲ್ಲೆಯ ಬೈಂದೂರು ವಿಧಾನಸಭಾ ಕ್ಷೇತ್ರ ನತದೃಷ್ಟ ಪ್ರದೇಶ! ಒಂದೆಡೆ ಭೋರ್ಗರೆವ ಅರಬ್ಬೀ ಸಮುದ್ರ; ಮತ್ತೊಂದೆಡೆ ದುರ್ಗಮ ಕಾನನ. ನಡುವೆ ಸಕಲ ಪಕ್ಷದ ಸೋಗಲಾಡಿ ರಾಜಕಾರಣಿಗಳ ಶುದ್ಧ ಸ್ವಾರ್ಥದ ಮೇಲಾಟ ಮತ್ತು ಮುಕ್ಕಾಟ! ಜನರ ಬೇಕು-ಬೇಡಗಳು ಇಲ್ಲಿ ಅರಣ್ಯರೋದನ. ಈ ಗುಡ್ಡಗಾಡು ಏರಿಯಾದಲ್ಲಿ 1990ರ ದಶಕದ ಕೊನೆಯಲ್ಲಿ ಶುರುವಾದ ಹಣದ ಹಣಾಹಣಿ ರಾಜಕಾರಣ ಇವತ್ತಿಗೂ ಅದೇ ಅನಾಹುತಕಾರಿ ಖದರಲ್ಲಿ ಮುಂದುವರಿದಿದೆ. ಹಣ ಹರಿಸಿ ಶಾಸಕನಾದವನಿಗೆ ಜನರ ಸಮಸ್ಯೆ ಅದ್ಹೇಗೆ ಅರ್ಥವಾದೀತು?


ಈ ಬೈಂದೂರನ್ನು ಆಳುತ್ತಿರುವಾತ ಸುಖಸಾಗರ್ ಗ್ರೂಪ್ಸ್ ಆಫ್ ಹೋಟೇಲ್ ಧಣಿ ಗೋಪಾಲ ಪೂಜಾರಿ ಎಂಬ ಅನ್‌ಪಡ್ ಪುರುಷೋತ್ತಮ. 90ರ ದಶಕದ ಅಂತ್ಯದಲ್ಲಾದ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಈತ 'ಬಂ'ರ ಕೆಸಿಪಿಯಿಂದ ಸ್ಪರ್ಧಿಸಿ ಸೋತಿದ್ದ. ಆಗ ಗೆದ್ದಾತ ಕಳಪೆ





ಜಯರಾಮ್ ಶೆಟ್ಟಿ


ಲಕ್ಷ್ಮೀನಾರಾಯಣ


ನಾಗರಾಜ ಶೆಟ್ಟಿ


ಶಿವರಾಮ್ ಪೂಜಾರಿ


ರಾಜು

ರಸಗೊಬ್ಬರ, ನಕಲಿ ಕ್ರಿಮಿನಾಶಕ ತಯಾರಿಕಾ ಕಾರ್ಖಾನೆ ಎಂದೇ ಹೆಸರಾಗಿದ್ದ 'ಮಲ್ಟಿವಿನ್'ನ ದೊರೆಯಾಗಿದ್ದ ಐ.ಎಂ. ಜಯರಾಮ ಶೆಟ್ಟಿ. ಈಗ ದಿವಂಗತನಾಗಿರುವ ಐಎಂಜೆಯ ಧಗಾ ದಂಧೆಗೆ ಅನೇಕ ರೈತರು ಬಲಿಯಾಗಿದ್ದರು. ಈ ಐಎಂಜೆ ಮಧ್ಯಪ್ರದೇಶದ ಅಂದಿನ ಬಿಜೆಪಿ ಸರ್ಕಾರದ ಸಿಎಂ ಸುಂದರ್‌ಲಾಲ್ ಪಟ್ವಾ- ಅಂದಿನ ಬಿಜೆಪಿ ಸಂಸದ ಧನಂಜಯ ಕುಮಾರ್ ಸಖ್ಯದಿಂದ ಮಧ್ಯಪ್ರದೇಶದಲ್ಲೂ ಗೊಬ್ಬರ ವ್ಯವಹಾರ ನಡೆಸಿ ಕಳ್ಳ ಕುಬೇರನಾಗಿದ್ದ.

ಅಕ್ರಮ ಸಕ್ರಮ ಮಾಫಿಯಾ

ಈ ಐಎಂಜೆ ಶಾಸಕನಾಗಿದ್ದಾಗಲೇ ಚಡ್ಡಿ ಪಕ್ಷದ ಸಂಸದನೂ ಆಗಿ ಆಯ್ಕೆಯಾಗಿದ್ದ. ಆ ನಂತರ ಸಂಘಪರಿವಾರದ ಸರದಾರರಾದ ಕಲ್ಲಡ್ಕ, ವಿ.ಎಸ್. ಆಚಾರ್ಯ, ಕೊಡ್ಗಿ ಶೋಷಣೆ, ಗರ್ಭಗುಡಿ ರಾಜಕಾರಣಕ್ಕೆ ರಸ ಹೀರಿದ ಕಬ್ಬಿನ ಜಲ್ಲೆಯಂತಾಗಿ ಸತ್ತೂ ಹೋದ. ಅದಿರಲಿ, ಐಎಂಜೆ ಬೈಂದೂರು ಶಾಸಕ ಸ್ಥಾನಬಿಟ್ಟು ಹೋದ ನಂತರ ಬಂದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಕ್ಯಾಂಡಿಡೇಟಾದ ಗೋಪಾಲ ಪೂಜಾರಿ ಗೆದ್ದು ವಿಧಾನಸೌಧಕ್ಕೆ ಹೋದರು. ಐಎಂಜೆಯ ಸ್ಟೈಲಲ್ಲೇ ಹಣ ಹರಿಸಿ ಗೆದ್ದಿದ್ದ ಪೂಜಾರಿ ಮತ್ತೆರಡು ಬಾರಿ ಶಾಸಕನಾದ. ಆದರೆ ನಂತರ ಸಿಡಿಮಿಡಿ ಮುದುಕ ಲಕ್ಷ್ಮೀನಾರಾಯಣರ ರೊಕ್ಕದ ಕುಣಿತದ ಎದುರು ಸೋತುಹೋಗಿದ್ದ ಪೂಜಾರಿ ಈಗ ಮತ್ತೆ ಬೈಂದೂರಿನ ಅಧಿಪತಿಯಾಗಿದ್ದಾರೆ.

ಈ ಫ್ಲಾಶ್‌ಬ್ಯಾಕ್ ಇಲ್ಲದಿದ್ದರೆ ಬೈಂದೂರಿನ ಕುರುಡು ಕಾಂಚಾಣದ ರಾಜಕಾರಣಕ್ಕೆ ಅಕ್ರಮ-ಸಕ್ರಮ ಭೂಮಂಜೂರಾತಿಯ ವೋಟ್ ಬ್ಯಾಂಕ್ ಭಾನ್ಗಡಿ ಹೇಗ್ಹೇಗೆ ಸಾಥ್ ನೀಡಿದೆ ಎಂಬುದು ಅರ್ಥವಾಗೋದಿಲ್ಲ. ಬೈಂದೂರು ಕ್ಷೇತ್ರದ ವ್ಯಾಪ್ತಿಯಲ್ಲಿ ಅಪಾರ ಕಂದಾಯ ಮತ್ತು ಅರಣ್ಯ ಭೂಮಿ ಇದೆ. ಎಷ್ಟು ಭೂಮಿಯಿದೆಯೋ ಅದಕ್ಕಿಂತ ಹೆಚ್ಚು ಭೂರಹಿತರಿದ್ದಾರೆ. ತಲೆ ಮೇಲೊಂದು ಸೂರು ಕಟ್ಟಿಕೊಳ್ಳಲು ಒಂದೆರಡು ಸೆಂಟ್ಸ್ ಜಾಗ ಕೊಡಿರೆಂದು ಬಡವರು ಬೊಬ್ಬೆ ಹೊಡೆಯುತ್ತಲೇ ಇದ್ದಾರೆ. ಇದು ಬೈಂದೂರಲ್ಲಿ ಗೆದ್ದು ಶಾಸಕನಾದವರಿಗೆ ಓಟಿನ ಬೇಟೆಗೆ ಅಸ್ತ್ರವಾಗಿದೆ! ಅಕ್ರಮವಾಗಿ ಭೂಮಿ ಕಬ್ಜಾ ಮಾಡಿಕೊಂಡು ಬದುಕುತ್ತಿರುವವರಿಗೆ ಅದೇ ಜಾಗ ಸಕ್ರಮ ಮಾಡಿಕೊಡುವ ಕಮಿಟಿಗೆ ಸ್ಥಳೀಯ ಶಾಸಕನೇ ಅಧ್ಯಕ್ಷ!

ಐ.ಎಂ. ಜಯರಾಮ್ ಶೆಟ್ಟಿ ಶಾಸಕನಾಗಿದ್ದ ಕಾಲದಿಂದ ಈಗಿನ ಗೋಪಾಲ ಪೂಜಾರಿಯ ಕಾಲಕೀರ್ದಿಯ ತನಕ ಅನೇನಾನೇಕ ಅಕ್ರಮ ಒತ್ತುವರಿಯನ್ನು ಕಾನೂನುಬಾಹಿರವಾಗಿ ಸಕ್ರಮ ಮಾಡಲಾಗಿದೆ. ಅಕ್ರಮ-ಸಕ್ರಮದ ನೀತಿ-ನಿಯಮಾವಳಿ-ಕಾನೂನು-ಕಟ್ಟಳೆ ಪ್ರಜ್ಞಾಪೂರ್ವಕವಾಗೇ ಧಿಕ್ಕರಿಸಿ ಐ.ಎಂ.ಜೆ, ಗೋಪಾಲ ಪೂಜಾರಿ ಮತ್ತು ಲಕ್ಷ್ಮೀನಾರಾಯಣ ತಂತಮ್ಮ ಹಿಂಬಾಲಕರಿಗೆ ಎಕರೆಗಟ್ಟಲೆ ಭೂಮಿ ಇನಾಮಾಗಿ ಕೊಟ್ಟಿದ್ದಾರೆ! ಬದುಕಲು ಎರಡು ಸೆಂಟ್ಸ್ ಮಂಜೂರಿ ಕೇಳಿದ ದುರ್ಬಲರಿಗೆ- ಅರ್ಹರಿಗೆ ಕಡೆಗಣಿಸಿ ತಾವೆಂಥ ನಾಲಾಯಕ್ ಶಾಸಕನೆಂಬುದನ್ನೂ ಸ್ವಯಂ ಸಾಬೀತುಪಡಿಸಿಕೊಂಡಿದ್ದಾರೆ. ಹೀಗಾಗಿ ಈ ಮೂರೂ ಶಾಸಕರ ಕಾಲದಲ್ಲೂ ನೂರಾರು ಎಕರೆ ಭೂಮಿ ಉಳ್ಳವರ ಪಾಲಾಗಿರುವುದರಿಂದ ಯಾವ ಪಕ್ಷದ ಭೂಪರೂ ಸೊಲ್ಲೆತ್ತುತ್ತಿಲ್ಲ. ಇದೇ ಈ ಬೈಂದೂರು ಅಕ್ರಮ-ಸಕ್ರಮ ಹಗರಣದ ವಿಶೇಷ!!

ನಿಯಮಾವಳಿ ಎಂತದು ಮಾರಾಯ್ರೆ?

ಬೈಂದೂರು ಭಾಗದಲ್ಲಿ ಕಂದಾಯ-ಅರಣ್ಯ ಭೂಮಿಗೆ ಬೇಲಿ ಸುತ್ತಿ ಕಬಳಿಸುವ ಕರಾಮತ್ತು ಇಂದು-ನಿನ್ನೆಯದಲ್ಲ. ಇದಕ್ಕೆ ಐಎಂಜೆ ಯುಗಕ್ಕಿಂತಲೂ ಹಿಂದಿನ ಇತಿಹಾಸವಿದೆ. ಅಸಹಾಯಕರು-ದೀನರು ಜೀವನ ಸಾಗಿಸಲು ಕಬ್ಜಾ ಮಾಡಿಕೊಂಡಿದ್ದ ಜಾಗ ಸಕ್ರಮಗೊಳಿಸಿ ಪಟ್ಟಾ ಕೊಡುವ ಕಾನೂನು ರಾಜ್ಯದಲ್ಲಿ ಜಾರಿಗೆ ಬರುತ್ತಿದ್ದಂತೆಯೇ ಹಣವಂತರು, ಸರ್ಕಾರಿ ನೌಕರರು, ಗ್ರಾಪಂ, ಜಿಪಂ, ತಾಪಂ ಸದಸ್ಯರು, ಅವರ ಕುಲಬಾಂಧವರು ರಾತ್ರೋರಾತ್ರಿ ಅಕ್ರಮವಾಗಿ ಭೂ ಸ್ವಾಹಾಕ್ಕೆ ಇಳಿದುಬಿಟ್ಟಿದ್ದಾರೆ. ಈ ಲ್ಯಾಂಡ್ ಲೂಟಿ ಜಾಲ ಬೈಂದೂರಿನಾದ್ಯಂತ ಅದೆಷ್ಟು ವ್ಯವಸ್ಥಿತವಾಗಿ ಹಬ್ಬಿದೆಯೆಂದರೆ, ವೋಟ್ ಬ್ಯಾಂಕ್ ರಾಜಕಾರಣವನ್ನು ಈ ಮಾಫಿಯಾ ಇವತ್ತು ನಿಯಂತ್ರಿಸುವಷ್ಟು ಕೊಬ್ಬಿಹೋಗಿದೆ! ಕಾನೂನಿನ ದೌರ್ಬಲ್ಯ ಬಳಸಿ, ಶಾಸಕ ಸಾಹೇಬರ ಬಲ ಪ್ರಯೋಗಿಸಿ ಬಲಾಢ್ಯರು ಎಕರೆಗಟ್ಟಲೆ ಸರ್ಕಾರಿ ಭೂಮಿ ನುಂಗಿಹಾಕಿದ್ದಾರೆ!

ಅಕ್ರಮ ಸಕ್ರಮೀಕರಣ ಮನಸೋ ಇಚ್ಛೆ ಮಾಡುವಂತಿಲ್ಲ, ಇದಕ್ಕೊಂದು ನಿಯಮಾವಳಿ ಇದೆ. ಅಕ್ರ... ಸಕ್ರಮದಲ್ಲಿ ಭೂಮಂಜೂರಿ ಆಗಬೇಕಿದ್ದರೆ, ಹಲವು ಷರ... ಪೂರೈಸಬೇಕು. ಫಲಾನುಭವಿ ಹಲವು ವರ್ಷದಿಂ... ಬೇಡಿಕೆಯ ಸ್ಥಳದಲ್ಲಿ ವಾಸವಾಗಿದ್ದು ಜೀವನ ನಡೆಸುತ್ತಿರಬೇ... ಅಲ್ಲಿ ಕೃಷಿ ಅಥವಾ ತೋಟಗಾರಿಕೆ ಮಾಡಿ... ಕುರುಹುಗಳಿರಬೇಕು; ಭೂರಹಿತನಾಗಿರಬೇಕು. ಒಂ... ಕುಟುಂಬ ಬೇರೆ-ಬೇರೆ ಹೆಸರಲ್ಲಿ ಮಂಜೂ... ಪಡೆಯುವಂತಿಲ್ಲ. ಅಕ್ರಮ-ಸಕ್ರಮದಲ್ಲಿ ಜನಪ್ರತಿನಿಧಿಗಳ... ಸರ್ಕಾರಿ ನೌಕರರಿಗೆ ಜಾಗ ಮಂಜೂರಿಗೆ ಯಾ... ಅವಕಾಶವೂ ಇಲ್ಲ. 5 ಎಕರೆಗಿಂತ ಕಡಿಮೆ ಜಾಗವನ್ನ... ಅಕ್ರಮ-ಸಕ್ರಮದಡಿ ಕೊಡಬಹುದು. ಇದು ನಿಯ... ಆದರೆ ಬೈಂದೂರಿನ ಬಹುತೇಕ ಅಕ್ರಮ-ಸಕ್ರಮ ಕಾನೂ... ಬಾಹಿರ; ಬಡವರಿಗೆ ನಿಷ್ಪ್ರಯೋಜಕ; ಉಳ್ಳವರಿ... ಅಧಿಕಾರಸ್ಥರಿಗೆ ವರದಂತಾಗಿದೆ!


ಹಿಂದಿನ ಭಾನ್ಗಡಿ


ಐ.ಎಂ. ಜಯರಾಮ ಶೆಟ್ಟಿ ಮತ್ತು ಲಕ್ಷ್ಮೀನಾರಾಯಣ... ಕಾಲದಲ್ಲಿ ಬಿಜೆಪಿಯ ಬಲಶಾಲಿ ಭೂಪರಿಂದ ಲ್ಯಾಂ... ಲೂಟ್ ಮಾರ್ ನಡೆದಿದೆ. ಬಿಜೆಪಿಯ ದೀಪಕ್ ... ಎಂಬ ಚಡ್ಡಿಯ ಕುಟುಂಬ ಒಂದಕ್ಕೆ ಬರೋಬ್ಬರಿ ... ಎಕರೆ ಭೂಮಿ ಅಕ್ರಮವಾಗಿ ಸಕ್ರಮ ಮಾಡಿಕೊಡಲಾಗಿ... ಹಿಂದೆ 'ಸಾಂತಾವರ ಗುಡ್ಡೆ' ಎಂಬಲ್ಲಿ ಶಾಸಕ ಗೋಪಾ... ಪೂಜಾರಿಯ ಆಪ್ತ ಸಹಚರರು ಅಕ್ರಮ-ಸಕ್ರಮದ ಹೆಸ... ಬೆಲೆಬಾಳುವ ಅರಣ್ಯ ಭೂಮಿಗೆ ಬೇಲಿ ಹಾಕಿಕೊಂಡಿದ್ದ... ಒಂದು ಹಂತದಲ್ಲಿ ಶಾಸಕ ಪೂಜಾರಿಯ ಬಲಗೈ ಬಂಟನೂ... ಜಾತಿಬಂಧುವೂ ಆದ ರಾಜು ಪೂಜಾರಿ ಕುಟುಂಬಸ್ಥ... ಎಕರೆಗಟ್ಟಲೆ ಭೂಮಿ ಅಕ್ರಮ-ಸಕ್ರಮ ಸಮಿತಿ ಕೊ... ಕೈತೊಳೆದುಕೊಂಡಿತ್ತು!

ಜಿಪಂನ ಮಾಜಿ ಅಧ್ಯಕ್ಷ ರಾಜು ಪೂಜಾರಿ, ಅ... ಸಹೋದರ ಮೋಹನ್ ಪೂಜಾರಿ ಎಂಬ ಪೊಲೀ... ಪ್ಯಾದೆ ಮತ್ತು ಇನ್ನೊಬ್ಬ ಸಹೋದರ ಜಿಲ್ಲಾ- ಮಧ್ಯವ... ಬ್ಯಾಂಕ್- ಸೂಪರ್‌ವೈಸರ್ ಶಿವರಾಮ ಪೂಜಾರಿ ಲ್ಯಾಂ... ಗ್ರ್ಯಾಂಟ್ ಮಾಡಿಸಿಕೊಂಡಿದ್ದರು. ಇದಕ್ಕೆ ಶಾಸಕ ಗೋಪಾ... ಪೂಜಾರಿಯ ಕೃಪಾಕಟಾಕ್ಷವೇ ಕಾರಣವೆಂದು ಹೇಳ... ಜರೂರತ್ತು ಇಲ್ಲದಷ್ಟು ಸ್ಪಷ್ಟವಾಗಿ ಶಾಸಕರ ಕೈವಾಡ ಹಗರಣದಲ್ಲಿ ನಡೆದಿತ್ತು. ಆದರೆ ಅಂದ... ಜಿಲ್ಲಾಧಿಕಾರಿಯಾಗಿದ್ದ ಉಮಾಶಂಕರ್ ನೇರ ಸ್ಥಳಕ್ಕೆ ಬಂ... ಪರಿಶೀಲಿಸಿ ಭೂ ಮಂಜೂರಿದಾರರ ಜಾತಕ ಜಾಲಾಡಿದ್ದ... ಈ ಅಕ್ರಮ ಸಕ್ರಮವೇ ಘೋರ ಅಕ್ರಮವೆಂದು ಶ... ಬರೆದು ಭೂಮಂಜೂರಾತಿ ರದ್ದು ಮಾಡಿದ್ದರು!

ಕಡ್ಮೆ ಮೇಲೆ ಕೆಂಗಣ್ಣು!

ಸಾಂತಾವರ ಗುಡ್ಡೆ ಜಾಗ ಕೈತಪ್ಪಿ ಹೋದ ನಂ... ರಾಜೂ ಪೂಜಾರಿ ಬಳಗ ಅಂಥದೇ ಪ್ರಶಸ್ತ ಸ್ಥಳಕ... ಹುಡುಕಾಟ ನಡೆಸುತ್ತಲೇ ಇತ್ತು. ತಮ್ಮ ಬಲಕ್ಕೆ ಸಾಕ್ಷಾ... ಶಾಸಕ ಪೂಜಾರಣ್ಣನೇ ಇರುವಾಗ ಎಕರೆಗಳ ಲೆಕ್ಕದ... ಸರ್ಕಾರಿ ಜಾಗ ಸ್ವಾಹ ಮಾಡೋದು ಅಂಥ ಕಷ್ಟವೇನ... ಎಂಬ ಸಮಾಧಾನ ಆ ಪರಿವಾರದಲ್ಲಿತ್ತು. ಅಂತೂ ರಾಜ... ಪೂಜಾರಿ ಕಣ್ಣಿಗೆ ಯಡ್ತರೆ ಗ್ರಾಮದ ಕಡ್ಮೆ ಅರಣ... ಅಮೂಲ್ಯ ಭೂಮಿ ಬೀಳುತ್ತದೆ! ಈ ಕಡ್ಮೆಯ ನಾ... ಸಾವಿರ ಎಕರೆ ಅರಣ್ಯ ಮತ್ತು ಕಂದಾಯ ಭೂಮಿಯ... 481.71 ಎಕರೆ ಅಕ್ರಮ-ಸಕ್ರಮದಲ್ಲಿ ಹಂಚಲು ರಾಜ... ಪೂಜಾರಿ 475 ಫಲಾನುಭವಿಗಳ ಒಂದು ಲಿಸ್ಟ್ ತಯಾ...





...ಸಕ ಪೂಜಾರಿಯ 'ಮಂಜೂರಿ ಮುದ್ರೆ' ಒತ್ತಿಸಿಕೊಂಡು ಬಿಟ್ಟಿದ್ದಾನೆ.

ಶಾಸಕ ಗೋಪಾಲ ಪೂಜಾರಿ ಪಕ್ಕಾ ನಾಜೂಕಯ್ಯ. ಆದರೆ ಈತನ ಸೇನಾಧಿಪತಿ ...ಜೂ ಪೂಜಾರಿ ಇದ್ದಾನಲ್ಲ, ಆತನ ಅಟ್ಟಹಾಸ ರಾಕ್ಷಸರನ್ನೂ ಬೆಚ್ಚಿಬೀಳಿಸುವಷ್ಟು ...ರ್ಕಶ. ಇಂಥ 'ಜನೋಪಯೋಗಿ' ಸೇವೆಯಿಂದಾಗಿಯೇ ಆತ ಈ ಬಾರಿಯ ...ಪಂ ಎಲೆಕ್ಷನ್‌ನಲ್ಲಿ ಸೋತು ಮೂಲೆಗುಂಪಾಗಿದ್ದಾನೆ. ಆದರೂ ಬೈಂದೂರಿನ ...ನಧಿಕೃತ ಶಾಸಕನ ದಾಂಧಲೆಯೇನೂ ಕಮ್ಮಿಯಾಗಿಲ್ಲ. ಸಾಂತಾವರ ಗುಡ್ಡೆ ...ೂ ಲೂಟಿಯಲ್ಲಿ ಯಾರ್‍ಯಾರೂ ಇದ್ದರೋ ಅವರಲ್ಲಿ ಹೆಚ್ಚಿನವರು ಕಡ್ಡೆ ...ಬಳಿಕೆಯಲ್ಲಿದ್ದಾರೆ. ಇದರಲ್ಲಿ ರಾಜೂ ಪೂಜಾರಿ ಫ್ಯಾಮಿಲಿಯದೇ ದೊಡ್ಡ ...ಾಲು. ಅಕ್ರಮ-ಸಕ್ರಮ ನಿಯಮದಡಿ 5 ಎಕರೆ ಭೂಮಂಜೂರಿಗೆ ...ವಕಾಶವಿಲ್ಲವಾದ್ದರಿಂದ ರಾಜೂ ಪೂಜಾರಿ ಕುಟುಂಬದ ಮೂವರು 4.95 ...ತ್ತು 4.85 ಎಕರೆ ಲ್ಯಾಂಡ್ ಲಪಟಾಯಿಸಿದ್ದಾರೆ.

ಕಡ್ಡೆ ಅಕ್ರಮ-ಸಕ್ರಮ ಭೂಮಂಜೂರಾತಿ ನೂರಕ್ಕೆ ಇನ್ನೂರಷ್ಟು ಬೋಗಸ್! ...ಲಾನುಭವಿಗಳಲ್ಲಿ ಯಾರೂ ಜಾಗ ಉತ್ತಿ-ಬಿತ್ತಿ ಬದುಕಿದವರಲ್ಲ; ಸಣ್ಣದೊಂದು ...ಡಿಸಲು ಕಟ್ಟಿ ವಾಸಿಸಿದವರಲ್ಲ. ಇವರೆಲ್ಲ ಕೋಟಿ-ಲಕ್ಷಗಳ ಆಸ್ತಿ-ಅಂತಸ್ತು ...ರುವವರು; ಐಷಾರಾಮಿ ಜೀವನ ಸಾಗಿಸುತ್ತಿರುವವರು; ಬಡವರಿಗೆ ಸೇರಬೇಕಾದ ...ೂಮಿ ಮಾನ-ಮರ್ಯಾದೆ ಬಿಟ್ಟು ಸ್ವಾಹ ಮಾಡಿರುವವರು. ಜಾಗ ಮಂಜೂರಿ ...ಾಡಿಸಿಕೊಂಡಿರುವ ಹರಾಮಿಗಳೆಲ್ಲ ಆರ್‌ಟಿಸಿ ಒತ್ತೆಯಿಟ್ಟು ಬ್ಯಾಂಕುಗಳಿಂದ ...ರ್ಜರಿ ಸಾಲ ಎತ್ತಿದ್ದಾರೆ. ರಾಜೂ ಪೂಜಾರಿ, ಆತನ ತಂದೆ ರಾಮ ಪೂಜಾರಿ, ...ಹೋದರ ಶಿವರಾಮ ಪೂಜಾರಿ, ಯಡ್ತರೆ ಗ್ರಾಪಂ ಅಧ್ಯಕ್ಷ ನಾಗರಾಜ ಶೆಟ್ಟಿ ...ತ್ತು ಎಮ್ಮೆಲ್ಲೆ ಪೂಜಾರಿ ಮಾಮನಿಗೆ ವಲಸಿಗ ಕೇರಳಿಗರ ಓಟು ಹಾಕಿಸುವ ...ಾರ್ಟ್ ದೊರೆ ಜಾಯ್ ಚಾಕೋ ಕುಟುಂಬ ಕಡ್ಡೆ ಭೂಮಿ ಕಬಳಿಕೆ ...ಜಾರೋಷವಾಗೇ ಮಾಡಿ ದಕ್ಕಿಸಿಯೂಕೊಂಡಿದೆ. ಇದೇ ಎಮ್ಮೆಲ್ಲೆ ಪೂಜಾರಿಯ ...ಕತ್ತು!!

ಮೂರೂವರೆ ಕೋಟಿಯ ಕಾಡು!!

ಕೊಲ್ಲೂರು, ಮೂರೂರು, ಜಡ್ಕಲ್ ಏರಿಯಾದಲ್ಲಿ ಕೇರಳದ ಮಲೆಯಾಳಿಗಳು ...ೇಡುಬಿಟ್ಟಿದ್ದಾರೆ. ರಬ್ಬರ್ ತೋಟ, ಅಡಿಕೆ ತೋಟ ಮಾಡಿಕೊಂಡಿದ್ದಾರೆ. ...ತ್ಯಹರಿದ್ವರ್ಣ ಕಾಡಲ್ಲಿ ರೆಸಾರ್ಟ್, ಹೋಂಸ್ಟೇ ನಡೆಸುತ್ತಿದ್ದಾರೆ. ಇದು ಕನ್ನಡದ ...ಲವೇ ಎಂಬಷ್ಟು ಅನುಮಾನ ಬರುವಂತೆ ಕೇರಳಿಗರ ಕೇಕೆಯಿಲ್ಲಿ ಮೊಳಗುತ್ತಿದೆ. ...ವರೆಲ್ಲ ಎಮ್ಮೆಲ್ಲೆ ಗೋಪಾಲ ಪೂಜಾರಿ ಬೆಂಬಲಿಗರು. ಒಂದಿಷ್ಟು ಚೆಡ್ಡಿ ...ಮತ್ಕಾರಕ್ಕೂ ಮರುಳಾದವರೂ ಇದ್ದಾರೆ. ಕೇರಳ ಮೂಲದವರು ಕಡ್ಡೆ ಅರಣ್ಯ ...ೂಮಿಯ ಅಕ್ರಮ-ಸಕ್ರಮದ ಫಲಾನುಭವಿಗಳು. ಈ ಮಲೆಯಾಳಿ ಫ್ಯಾಮಿಲಿಯ ...ಪ್ಪ-ಸಹೋದರ-ಸಹೋದರಿಯ ಹೆಸರಿಗೆ ಎಕರೆಗಟ್ಟಲೆ ಭೂಮಿ ಎಮ್ಮೆಲ್ಲೆ ...ಹೇಬರ ಕೃಪೆಯಿಂದ ರಿಕಾರ್ಡ್ ಆಗಿದೆ. ಹೆಂಗವಳ್ಳಿಯ ಹೊಳೆಯನ್ನೇ ...ತ್ತುವರಿ ಮಾಡಿ ತೋಟ ನಿರ್ಮಿಸಿಕೊಂಡಿದ್ದ ಜಾಯ್ ಚಾಕೋನ ದಂಧೆಗಳೆಲ್ಲವೂ ...ಗೂಢ. ಯಾರೇ ಶಾಸಕನಾದರೂ ಈತ ಅಡ್ಜೆಸ್ಟ್ ಆಗುವ ಗುಣ-ಧರ್ಮದವನು.

ಅಕ್ರಮ-ಸಕ್ರಮ ಕಾನೂನು ದುರುಪಯೋಗಪಡಿಸಿಕೊಂಡು ಕಡ್ಡೆ ಅರಣ್ಯ-...ದಾಯ ಜಾಗ ಪಡೆದಿರುವ 475 ಮಂದಿಯಲ್ಲಿ ಯಾರೂ ಅರ್ಹರೇ ಇಲ್ಲ. ...ಕ್ಕಸ್ಥರೇ ಸರ್ಕಾರದ ಬೆಲೆಬಾಳುವ ಭೂಮಿ ಪಡೆದಿದ್ದಾರೆ. ಹಳ್ಳಿಗಳಲ್ಲಿ ಒಂದು ...ಟ್ಸ್ ಜಾಗಕ್ಕೆ ಕಮ್ಮಿಯೆಂದರೂ 3 ಸಾವಿರ ರೂ. ಬೆಲೆಯಿದೆ. ಹಾಗೆ ಲೆಕ್ಕ ...ಾಕಿದರೆ ಕಡ್ಡೆಯ 481.71 ಎಕರೆ ಭೂಮಿಯ ಬೆಲೆ 1.44 ...ೋಟಿಯಷ್ಟಾಗುತ್ತದೆ! ಈ ಜಾಗದಲ್ಲಿ 50 ಲಕ್ಷ ಒಳ್ಳೊಳ್ಳೆ ಮರಗಳಿವೆ. ಇದರ ...ೌಲ್ಯ ಒಂದು ಅಂದಾಜಿನಂತೆ ಬರೋಬ್ಬರಿ 2 ಕೋಟಿ!! ಈ ಮೂರೂವರೆ ...ೋಟಿ ಸರ್ಕಾರಿ ಬೊಕ್ಕಸಕ್ಕೆ ನಿವ್ವಳ ಹಾನಿ. ಉಚ್ಚ ನ್ಯಾಯಾಲಯ ಸರ್ಕಾರಿ ...ೂಮಿಯನ್ನು ಅರಣ್ಯ ಭೂಮಿಯೆಂದೇ ಪರಿಗಣಿಸುವಂತೆ ಹೇಳಿದೆ. ಅರಣ್ಯ ...ೂಮಿ ಒಂದಿಂಚು ಮಂಜೂರಿ ಮಾಡುವುದಕ್ಕೂ ನೂರೆಂಟು ಕಟ್ಟುನಿಟ್ಟಿನ ...ಬಂಧನೆಗಳಿವೆ. ಇದೆಲ್ಲ ಶಾಸಕ ಸಾಹೇಬರು, ಕುಂದಾಪುರದ ತಹಸೀಲ್ದಾರರು ...ತ್ತು ಜಿಲ್ಲಾಧಿಕಾರಿ ವಿಶಾಲ್ ಕುಮಾರ್ ಬುದ್ಧಿಪೂರ್ವಕವಾಗೇ ಧಿಕ್ಕರಿಸಿದ್ದಾರೆ. ...ಳ್ಳವರಿಗೆ ಅನುಕೂಲ ಮಾಡಿಕೊಡಲೆಂದೇ ಸರಣಿ ಪಾತಕ ಮಾಡಿದ್ದಾರೆ....

ತನಿಖೆ ಆದೀತಾ?

ಬೈಂದೂರಿನ ಅಕ್ರಮ-ಸಕ್ರಮ ಇತಿಹಾಸದಲ್ಲಿ ಕಾಂಗ್ರೆಸ್, ಬಿಜೆಪಿ, ಜೆಡಿಎಸ್... ...ಗೆ ಎಲ್ಲ ಪಕ್ಷದ ಪರಾಕ್ರಮಿಗಳೂ ಲ್ಯಾಂಡ್ ಲೂಟಿ ಮಾಡಿದ್ದಾರೆ. ಆದ್ದರಿಂದ ...ಾರಿಗೂ ಅಕ್ರಮ-ಸಕ್ರಮ ಭಾನ್ಗಡಿ ಬಗ್ಗೆ ತನಿಖೆಯಾಗಲಿ ಎಂದು ಹೇಳುವ ...ರ್ಯವಿಲ್ಲ! ಬಿಜೆಪಿ ರಾಜ್ಯಾಧ್ಯಕ್ಷನಾಗಿ ಈಗಷ್ಟೇ ಅವತರಿಸಿರುವ ಅವಾಂತರಕಾರಿ ...ಡ್ಡಿಯ ಪಾರ್ಲಿಮೆಂಟ್ ಕ್ಷೇತ್ರಕ್ಕೆ ಬೈಂದೂರು ಸೇರಿದೆ. ಆದರೆ ಅಕ್ರಮ ...ಸಾಬರಿ ತನಗೇಕೆ ಎಂಬ ನಿಲುವು ಆತನದು. ಅಕ್ರಮ-ಸಕ್ರಮ ಕರ್ಮಕಾಂಡಕ್ಕೆ ...ಾಕಿದರೆ ವೋಟು ಬ್ಯಾಂಕ್ ಭಂಗವಾದೀತೆಂಬ ಭಯ ಅಷ್ಟೂ ಪಕ್ಷದ ...ಧಾರಿಗಳಿಗೆ.

ಹಾಗಂತ ಜಿಲ್ಲಾಧಿಕಾರಿ ವಿಶಾಲ್‌ಕುಮಾರ್ ಆದರೂ ಇತ್ತ ಕಣ್ಣು ...ಾಯಿಸಿಯಾನೆ ಎಂದು ನೋಡಿದರೆ, ಊಹುಂ, ಆತನೂ ನಿಸ್ಸೀಮ ...ರ್ಲಕ್ಷನಲ್ಲಿದ್ದಾನೆ. ಅದ್ಯಾಕೋ ದಿನಗಳೆದಂತೆ ವಿಶಾಲ್ ನಾಲಾಯಕ್ ಡಿಸಿ ...ಂಬ ಭಾವನೆ ಜನರಲ್ಲಿ ಬರುತ್ತಿದೆ. ಬೈಂದೂರಿನ ಅಕ್ರಮ-ಸಕ್ರಮ ಆತ ...ಡೂ ಕಾಣದಂತಿದ್ದಾನೆ. ಮಂತ್ರಿ ಸೊರಕೆ ಮಾತು ಮೀರದ ಡಿಸಿ ವಿಶಾಲ್‌ಗೆ ...ರ್ತವ್ಯ ಪ್ರಜ್ಞೆಯೇ ಇಲ್ಲ! ಜಿಲ್ಲಾಧಿಕಾರಿ ತನಗೆ ಪಂಚೇಂದ್ರಿಯ ಸರಿಯಿದೆ ...ಎಂದು ತೋರಿಸಿಕೊಂಡರೆ ಸಾಕು ತಂತಾನೆ ಬೈಂದೂರಿನ ಕಡ್ಡೆ ಸರ್ಕಾರಿ ...ೂಮಿ ನುಂಗಿದವರು ನೀರು ಕುಡಿಯಬೇಕಾಗುತ್ತದೆ. ಕಂದಾಯ ಮಂತ್ರಿ ...ವಿ ಪ್ರಸಾದ್‌ಗಿದು ಗೊತ್ತಾ??

ಸರ್ಕಾರದ ಭೂಮಿ ಮರಳಿ ಪಡೆವ ತಾಕತ್ತು ತೋರಿಸಿಯಾರೆ ಜಿಲ್ಲಾಧಿಕಾರಿ ...ಾಲ್‌ಕುಮಾರ್? ಹಾಗಂತ ಉಡುಪಿ ಜಿಲ್ಲೆಯ ಜನ ಕೇಳುತ್ತಿದ್ದಾರೆ. ಕಡ್ಡೆ ...ೂಭಾನ್ಗಡಿ ಆಸ್ಫೋಟಿಸುತ್ತಿದ್ದಂತೆಯೇ ಬೆಚ್ಚಿ ಬಿದ್ದಿರುವ ಶಾಸಕ ಪೂಜಾರಿ ...ಎಂ. ಜಯರಾಮ ಶೆಟ್ಟರ ಕಾಲದಿಂದಲೂ ನಡೆದ ಅಕ್ರಮ-ಸಕ್ರಮ ಭೂ ...ಂಜೂರಾತಿ ತನಿಖೆ ಆಗಲಿ..." ಎಂದು ಟ್ರಿಕ್ಕು ಮಾಡುತ್ತಿದ್ದಾರೆ. ಚೆಡ್ಡಿಗಳು ...ಷ್ಟು ಬಂದದಕ್ಕೇ ಭೂ ಬಾಂಬ್ ಸ್ಫೋಟಿಸುವ ಭಯಕ್ಕೆ ಬಿದ್ದಿದ್ದಾರೆ. ಐಎಂಜೆ ...ಕಾಲದಿಂದಾದ ಅಕ್ರಮ-ಸಕ್ರಮ ಕರ್ಮಕಾಂಡದ ವಿಚಾರಣೆಯಾದರೆ ಹಲವರ ...ಬಯಲಾಗೋದಂತೂ ಖರೆ ನೋಡಾಯ್ರಿ!

■ ನಹುಷ

ಸಾಮಾಜಿಕ ನ್ಯಾಯ ನಮಿಗೂ ಗೊತ್ತು ಕಂಡ್ರೀ

ಥೂತ್ತೇರಿ

ಯಾಹೂ

ದುರ್ಮುಖಿ ಸಂವತ್ಸರದ ಚಾಂದ್ರಮಾನ ಯುಗಾದಿ ಸಮೀಪಕ್ಕೆ ಕರ್ನಾಟಕದ ಪಾಲಿಗೆ ಎರಡು ಘಟನೆಗಳು ಸಂಭವಿಸಿವೆಯಲ್ಲಾ, ಮೊದಲನೆಯದಾಗಿ ಉಪ್ಪವಲಯದ ಕಾಡಿನ ನಡುವೆ ಥೇಟ್ ರಾಮಚಂದ್ರನಂತೆಯೇ ವನವಾಸ ಮಾಡುತ್ತಿದ್ದ ರಾಘು ಎಂಬ ಛದ್ಮವೇಷದ ಕಾಮಣ್ಣ ಪ್ರೇಮಲತಾ ಎಂಬ ಗೃಹಿಣಿಗೆ ರಾಮಮಂತ್ರ ಬೋಧಿಸುವ ನೆಪದಲ್ಲಿ ಸುಮಾರು ಒಂದು ನೂರ ಅರವತ್ತೊಂಬತ್ತು ಬಾರಿ ಭೋಗಿಸಿರುವುದು ಒಪ್ಪಿತ ಲೈಂಗಿಕ ಕ್ರಿಯೆಯೇ ಹೊರತು ಬಲಾತ್ಕಾರವಲ್ಲ ಎಂಬ ಕೋರ್ಟ್ ತೀರ್ಪು ಹೊರಬಿದ್ದಿರುವುದು. ಸದರಿ ತೀರ್ಪು ರಾಘವನಿಗೆ ಸಂತೋಷದ ತೀರ್ಪಾದರೆ ಆತನ ವಾನರ ಸೇನೆ ರಾಮಚಂದ್ರಾಪುರದ ಕಾಡೇ ನಡುಗುವಂತೆ ಸಂಭ್ರಮ ಪಟ್ಟಿವೆಯಲ್ಲಾ. ಅಂದರೆ ಯತಿವರ್ಯರದ್ದು ಸಂಭೋಗವೇ ಹೊರತು, ರೇಪಲ್ಲ ಎಂಬುದೇ ವಾನರ ಸೇನೆಯ ಸಂಭ್ರಮಕ್ಕೆ ಕಾರಣವಂತೆ, ಥೂತ್ತೇರಿ!!

* * *

ಇನ್ನ ಎರಡನೆಯ ಸಂಭ್ರಮ ಬಿಜೆಪಿಯದ್ದು. ಭಾರತದ ಭ್ರಷ್ಟ ರಕ್ಷಣೆ ಪಾರ್ಟಿಯಾದ ಬಿಜೆಪಿ ಕರ್ನಾಟಕದ ಯಾವ ಚೆಡ್ಡಿಗಳನ್ನೂ ಕೇಳದೆ ನಾಡಿನ ವರ್ಣರಂಜಿತ ರಾಜಕಾರಣಿ ಯಡಿಯೂರಪ್ಪನನ್ನು ರಾಜ್ಯಾಧ್ಯಕ್ಷನನ್ನಾಗಿ ಹೇರಿಬಿಟ್ಟಿದೆ. ಈ ಸಮಯದಲ್ಲಿ ಯಡಿಯೂರಪ್ಪನನ್ನು ಅಭಿನಂದಿಸಲೇಬೇಕು. ಏಕೆಂದರೆ ಕರ್ನಾಟಕದಲ್ಲಿ ಈವರೆಗೆ ಮುಖ್ಯಮಂತ್ರಿಗಳಾದ ಯಾರೂ ಕ್ಷಿಪ್ರಗತಿಯಲ್ಲಿ ಯಡಿಯೂರಪ್ಪನಷ್ಟು ಆಸ್ತಿ ಮಾಡಲಿಲ್ಲ. ಲಂಚವನ್ನು ಕೈಲಿ ಮುಟ್ಟದೆ ಚೆಕ್ಕಿನ ರೂಪದಲ್ಲಿ ಪಡೆದುಕೊಂಡರು. ಅದೇ ಕಾರಣವಾಗಿ ಮುಂದೆ ಮತ್ತೊಮ್ಮೆ ಜೈಲು ಪಾಲಾಗಬಹುದು. ಇವರ ಅಕ್ರಮ ಆಸ್ತಿಯ ಕೊನೆ ಮೊದಲುಕಂಡವರಿಲ್ಲ. ಅದು ಶಿಕಾರಪುರದಿಂದ ಪ್ರಾರಂಭವಾಗಿ ಶಿವಮೊಗ್ಗದ ಮುಖಾಂತರ ಬೆಂಗಳೂರು ತಲುಪುತ್ತದೆ. ಅವುಗಳ



ಪಟ್ಟಿ ಬಹಳ ದೊಡ್ಡದಿದೆ. ಆದರೂ ಅಧ್ಯಕ್ಷ ಪಟ್ಟ ಗಿಟ್ಟಿಸಿದ ಯಡಿಯೂರಪ್ಪ ಅಭಿನಂದನಾರ್ಹರು. ಅವರ ಆಯ್ಕೆಯಿಂದ ಬಿಜೆಪಿಯ ಭ್ರಷ್ಟರ ಪಡೆ ಸಂಭ್ರಮಗೊಂಡಿದೆ. ಅದಕ್ಕಿಂತ ಮಾಧ್ಯಮದವರ ಸಂಭ್ರಮ ಹೇಳತೀರದಾಗಿದೆ. ಅದೇ ಒಂದು ಬೇರೆ ಕತೆಯಿದೆ. ಇಂತಿರುವಾಗ "ನಮ್ಮ ಯಡಿಯೂರಪ್ಪ ಮಾಸ್ ಲೀಡರ್. ಅವರ ಜೊತೆ ಎಲ್ಲರೂ ಬನ್ನಿ. ಮತ್ತೆ ಕರ್ನಾಟಕವನ್ನು ಕಬಳಿಸೋಣ" ಎಂದು ಯಡ್ಡಿ ಕಾಲದಲ್ಲಿ ರಾಜಾಸ್ಥಾನಕ್ಕೆ ಹೋಗಿ ಉದ್ಯಮ ಸ್ಥಾಪಿಸಿದ ಈಶ್ವರಪ್ಪ ಕರೆಕೊಟ್ಟಿದ್ದಾರಲ್ಲ. ಯಡಿಯೂರಪ್ಪನ ಕೆಜೆಪಿ ಕಾರಣಕ್ಕೆ ಮೂರನೇ ಸ್ಥಾನಕ್ಕೆ ಹೋಗಿ, ಹೇಗೋ ಎಮ್ಮೆಲ್ಸಿಯಾಗಿ ಬಚಾವಾದ ಈಶ್ವರಪ್ಪನಿಗೆ ಮಾತ್ರ ಯಡಿಯೂರಪ್ಪ ನುಂಗಲಾರದ ತುತ್ತಾಗಿ ನಿದ್ದೆಗೆಡಿಸಿದ್ದಾರಂತಲ್ಲಾ, ಥೂತ್ತೇರಿ!!

* * *

ಸಾಕ್ಷಾತ್ ಭವಾನಿಯಂತಿರುವ ರೇವಣ್ಣನವರ ಪತ್ನಿಗೆ ಹಾಸನ ಜಿಲ್ಲಾ ಪಂಚಾಯ್ತಿ ಗಾದಿ ಸಿಗದಿರುವುದಕ್ಕೆ ಧರ್ಮಪತಿಯಾದ ರೇವಣ್ಣನವರು ಬೆಂಗಳೂರು ಬಿಬಿಎಂಪಿ ಅಧಿಕಾರವನ್ನೇ ಕೆಡಗುವುದಾಗಿ ಗುಟುರು ಹಾಕಿರುವ ಈ ಸಮಯದಲ್ಲಿ ಹೊಳೆನರಸೀಪುರದ ಹೋರಿಯನ್ನು ಮಾತನಾಡಿಸಬೇಕೆನಿಸಿತಲ್ಲಾ. ಕೂಡಲೇ ಫೋನ್ ಮಾಡಲಾಗಿ ರಿಂಗಾಯ್ತು.

ರಿಂಗ್‌ಟೋನ್: "ಆಗದು ಎಂದು ಕೈಕಟ್ಟಿ ಕುಳಿತರೆ ಸಾಗದು ಕೆಲಸವು ಮುಂದೇ.... ಸಾಗದು ಕೆಲಸವು ಮುಂದೆ....!"

"ಹಲೋ, ಯಾರ್ರಿ ಮಾತಾಡ್ತಾಯಿರದು?"

"ಈಗ ಮಾತ್ನಾಡಬೇಕು ಸಾರ್. ನಾನು ಪತ್ರಕರ್ತ."

"ಪತ್ರಕರ್ತ ಏನ್ಮಾಡ್ತಾಯಿದಿರ್ರಿ? ಹಾಸನದಲ್ಲಿ ಇಂತ ಅನ್ಯಾಯ ನಡಿದಿರುವಾಗ ಪೆನ್ನ ಜೋಬಲ್ಲಿ ಮಡಿಕಂಡು ಸುಮ್ಮನಿದ್ದಿರಲ್ರೀ?"

"ಹಾಸನದಲ್ಲಿ ನಡದಿರೊ ಅನ್ಯಾಯ ಏನು ಸಾರ್?"

"ಇನ್ನೂ ಏನಾಗಬೇಕ್ರಿ? ಆ ವಾಲೆ ಮಂಜನೂ, ಎಚ್ಚೆ ಪಾಟೀಲನೂ ಸೇರಿಕೊಂಡು ಸಿದ್ದರಾಮಣ್ಣನಿಗೆ ಚಾಡಿ ಹೇಳಿ ಮಾಡಿರೋ ಕ್ಯಲ್ಸ ನೋಡ್ರಿ.... ವಂಶೀಕರು ಮಾಡೋ ಕ್ಯಲಸನೇನ್ರಿ ಇದು?"

"ವಂಶೀಕರು ಮಾಡೋ ಕ್ಯಲಸ ಯಾವುದು ಸಾರ್?"

"ಅಷ್ಟೂ ಗೊತ್ತಾಗಲವೇನ್ರಿ ನಿಮಗೆ? ಹಾಸನದಲ್ಲಿ ಜನ ಅಷ್ಟೊಂದು ಓಟು ಕೊಟ್ಟು ಭವಾನಿ ಗೆಲ್ಲಿಸಿದ್ರೆ, ಆಕೆ ಜಿಲ್ಲಾ ಪಂಚಾಯ್ತಿ ಅಧ್ಯಕ್ಷೆ ಆಗದಂಗೆ ತಡದು, ಇಂತ ಮನೆಯಾಳ ಕೆಲಸ ಮಾಡ್ತವುರಲ್ಲ.. ಈ ರೇವಣ್ಣ ಏನು ಅಂತ ತೋರುಸ್ತಿನಿ."

"ಏನು ಮಾಡ್ತಿರಿ ಸಾರ್?"

"ಬಿಬಿಎಂಪಿಗೆ ಜೆಡಿಎಸ್ ಕಾರ್ಪೊರೇಟ್ರು ಕೊಟ್ಟಿರೊ ಸಪೋರ್ಟ್ ವಾಪಸ್ ತಗಳಂಗೆ ಮಾಡ್ತಿನಿ."

"ಕಾರ್ಪೊರೇಟ್ರು ನಿಮ್ಮ ಮಾತ ಕೇಳಂಗಿದಾರ ಸಾರ್?"

"ಕೇಳ್ಳೆಬೇಕು ಕಂಡ್ರಿ. ಇವತ್ತು ರಾಷ್ಟ್ರೀಯ ಅಧ್ಯಕ್ಷರು ನಮ್ಮ ತಂದೆ. ರಾಜ್ಯಾಧ್ಯಕ್ಷರು ನಮ್ಮ ಕುಮಾರ. ಅವುರಿಗೆ ಹೇಳ್ತಿನಿ ಅನ್ಯಾಯ ಸರಿಪಡಿಸಿ ಅಂತ."

"ಸಾಮಾಜಿಕ ನ್ಯಾಯದ ಪ್ರಕಾರ ಹಾಸನಕ್ಕೆ ಬಹಳ ವರ್ಷಗಳ ನಂತರ ನ್ಯಾಯ ಸಿಕ್ಕದಂತಲ್ಲ ಸಾರ್."

"ಸಾಮಾಜಿಕ ನ್ಯಾಯ ನಮಿಗೂ ಗೊತ್ತು ಕಂಡ್ರಿ. ದೇವೇಗೌಡ್ರ ಕುಟುಂಬಕ್ಕೆ ಸಾಮಾಜಿಕ ನ್ಯಾಯ ಹೇಳಕ್ಕೆ ಬರಬ್ಯಾಡಿ."

"ಸಾರ್, ನಿಮ್ಮ ಮಾತ ನಿಮಗೆ ಹೇಳ್ತಿನಿ. ಜೆಡಿಎಸ್‌ನ ರಾಷ್ಟ್ರೀಯ ಅಧ್ಯಕ್ಷರು ದೇವೇಗೌಡ್ರು. ರಾಜ್ಯಾಧ್ಯಕ್ಷರು ಕುಮಾರಣ್ಣ. ಇನ್ನ ಅನಿತಕ್ಕ ಮಾಜಿ ಎಮ್ಮೆಲ್ಲೆ. ಕುಮಾರಣ್ಣಾರ ಮಾವ ಡಿ.ಸಿ. ತಮ್ಮಣ್ಣ ಎಮ್ಮೆಲ್ಲೆ. ಶ್ರವಣಬೆಳಗೊಳದ ಎಮ್ಮೆಲ್ಲೆ ನಿಮ್ಮ ಭಾವನ ತಮ್ಮ ಬಾಲಕೃಷ್ಣ. ನೀವು ಹೊಳೆನರಸೀಪುರದ ಶಾಸಕರು. ಮಾಜಿ ಮಂತ್ರಿ, ಮಾಜಿ ಕೆಎಂಎಫ್ ಅಧ್ಯಕ್ಷರು. ಭವಾನಿ ಜಿಲ್ಲಾ ಪಂಚಾಯ್ತಿ ಮೆಂಬ್ರು. ಇದ್ಯಾವ ಸೀಮೆ ಸಾಮಾಜಿಕ ನ್ಯಾಯ ಸಾರ್?"

"ಇದು ಸಾಮಾಜಿಕ ನ್ಯಾಯದಿಂದ ಸಿಕ್ಕಿರೊ ಸ್ಥಾನಮಾನ ಅಲ್ಲ ಕಂಡ್ರಿ. ನಾವು ದುಡಿದು ಸಂಪಾದಿಸಿದ್ದು. ನಮ್ಮ ಪ್ರಭಾವ ಬಳಸಿ ಬ್ಯಾರೆಯೋರಿಗೂ ಕೊಟ್ಟಿದ್ದೀವಿ ಗೊತ್ತ?"

"ಏನು ಕೊಟ್ಟಿದಿರಿ ಸಾರ್?"

"ನೋಡ್ರಿ, ಜಿಲ್ಲಾ ಪಂಚಾಯ್ತಿ ಬಂದಾಗ ನಮ್ಮ ತ್ಯಂದೆ ಹರಿಜನ್ರ ಹುಡುಗುನ್ನ ಹಿಡಿಕೊಂಡು ಜಿಲ್ಲಾ ಪಂಚಾಯ್ತಿ ಅಧ್ಯಕ್ಷನ್ನ ಮಾಡಿದ್ರು. ಅಂತ ಕ್ಯಲಸ ಯಾವನು ಮಾಡಿದ ತೋರುಸ್ರಿ?"

"ಅದಂತೂ ಮೆಚ್ಚೊ ಕ್ಯಲಸ ಸಾರ್."

"ಜೆಡಿಎಸ್ಸು ವಡದೋದಾಗ ದಾಗುಟ್ರು ತಿಪ್ಪೆಸ್ವಾಮಿಯ ಪಾರ್ಟಿ ಅಧ್ಯಕ್ಷನ್ನ ಮಾಡಿದ್ರು. ಸಿದ್ದರಾಮಣ್ಣನ್ನ ಹಣಕಾಸಿನ ಮಂತ್ರಿ ಮಾಡಿ ಉಪಮುಖ್ಯಮಂತ್ರಿ ಮಾಡಿದ್ರು. ಯಗಡೇರಿಗೂ ನಮ್ಮಪ್ಪನಿಗೂ ಜಗಳ ಆದಾಗ ರಾಚಯ್ಯನೇ ಮುಖ್ಯಮಂತ್ರಿ ಆಗ್ಲಿ ಅಂದಿದ್ರು. ಅಂತದ್ರಲ್ಲಿ ನಮಿಗೆ ಸಾಮಾಜಿಕ ನ್ಯಾಯ ಹೇಳಕ್ಕೆ ಬರಬ್ಯಾಡಿ."

"ನೋಡಿ ಸಾರ್, ಗೌಡ್ರು ಸಾಮಾಜಿಕ ನ್ಯಾಯದ ರಾಜಕಾರಣ ಇವತ್ತು ಅನುಮಾನಕ್ಕೆ ಎಡೆಮಾಡಿಕೊಟ್ಟಿದೆ. ತಮ್ಮ ಕುಟುಂಬವನ್ನ ಕರ್ನಾಟಕದಲ್ಲಿ ಸ್ಥಾಪನೆ ಮಾಡಕ್ಕೆ ದಲಿತ್ರು, ಕುರುಬ್ರು, ಹರಿಜನರನ್ನ ಬಳಸಿಕೊಂಡಂಗೆ ಕಾಣ್ತರೆ. ಈಗ್ಲು ಕೂಡ ಪರಿಶಿಷ್ಟ ಮಹಿಳೆಗೆ ಹಾಸನ ಜಿಲ್ಲಾ ಪಂಚಾಯ್ತಿ ಅಧ್ಯಕ್ಷೆ ಸ್ಥಾನ ಸಿಕ್ಕಿರದಕ್ಕೆ ಅವುರು ಪ್ರತಿಕ್ರಿಯೆ ನೀಡಿಲ್ಲ. ಯಾಕಂದ್ರೆ ಭವಾನಿಗೆದ್ರಿಕಂಡ್ರು ಅಂತ ಕಾಣ್ತದೆ."

"ಹೆದ್ರಿಕಂಡಲ್ಲ ಕಂಡ್ರಿ. ಸೊಸೆಗೆ ಅನ್ಯಾಯವಾದಾಗ ಬೇಜಾರಾಗಕ್ಕುಲವೆ?"

"ನಿಜ ಸಾರ್. ನಿಮ್ಮ ಕುಟುಂಬಕ್ಕೆ ಅನ್ಯಾಯವಾಗಿದೆ. ಎರಡು ಮೂರು ದಶಕದಿಂದ ಎಷ್ಟೇ ಅನ್ಯಾಯ ಆದ್ರು ಕೂಡ ಪರಿಶಿಷ್ಟ ಪಂಗಡ ಬಾಯಿನೆ ಬಿಟ್ಟಿರಲಿಲ್ಲವಲ್ಲ ಹೇಳಿ."

"ನಾವು ಚನ್ನಾಗಿ ನೋಡಿಕಂಡಿದ್ದಿವಲ್ರಿ ಅವುರ್ನ."

"ಅವುರನ್ನ ಚನ್ನಾಗಿ ನೋಡಿಕಳಕ್ಕೆ ನೀವ್ಯಾರು ಸಾರ್? ಅವುರೇನು ನಿಮ್ಮ ಮನೆ ಆಳೆ? ಅವುರ ಪಾಲ ಅವುರಿಗೆ ಕೊಡದೆ ನೀವೇ ತಿಂದು, ಅವುರ ಕೈಲೇ ಬಾಯಿ ವರಿಸಿಕೊಂಡ್ರಿ. ಈಹಿಂದ ಸಿದ್ದರಾಮಯ್ಯ ಬಂದು ಅವುರ ಪಾಲ ಅವುರಿಗೆ ಕೊಟ್ಟ ಅಷ್ಟೆಯ."

"ಅವುರ ಪಾಲ ಅವುರಿಗೆ ಕೊಡದು ನಮಿಗೂ ಗೊತ್ತಿದೆ ಕಂಡ್ರಿ. ಎಲ್ಲಿ ಕೊಡಬೇಕು ಅಲ್ಲಿ ಕೊಡಬೇಕು. ಹಾಸನದ ರಾಜಕಾರಣಕ್ಕೆ ಕೈಹಾಕ್ಯವುರೆ. ಅನುಭವುಸ್ತರೆ ನೋಡಿ."

"ಸಾರ್, ಇಡೀ ಕರ್ನಾಟಕದಲ್ಲಿ ಯಾವ ಜಿಲ್ಲೆಯಿಂದ್ಲೂ ವಿರೋಧ ಬರ್ಲಿಲ್ಲ. ನೀವು ಮಾತ್ರ ವಿರೋಧಿಸಿದ್ರಲ್ಲ, ಪರಿಶಿಷ್ಟ ಪಂಗಡ ನಿಮ್ಮ ಪಾರ್ಟಿಯಿಂದ ಕೈಬಿಟ್ಟು ಹೋಗಲ್ವ?"

"ಅದ್ಯಾಕೋಗತ್ರಿ? ಪರಿಶಿಷ್ಟ ಪಂಗಡದೋರೆ ಬಂದು ಭವಾನಕ್ಕ ಆಗಬೇಕಾಗಿತ್ತು ಅಂತ ಅತ್ತಗಂಡೇಳಿದ್ರು. ಇದಕೇನೇಳ್ತಿರಿ?"

"ನಿಜ ಸಾರ್, ಅಂತವುರೂ ಇದಾರೆ."

"ಶಾಸಕರಲ್ಲೇ ಅಂತವುರವುರೆ ಕಂಡ್ರಿ. ಇವತ್ತು ಸಿದ್ದರಾಮಣ್ಣನ ಕ್ಯಲಸಗಳು ಕಾಂಗ್ರೆಸ್ನೋರಿಗೆ ಬೇಕಾಗಿಲ್ಲ. ಸುಮ್ಮನೆ ಅಹಿಂದ ಅಂತರೆ. ಸರಿಯಾಗಿ ಕೈಕೊಡ್ತರೆ ನೋಡಿ."

"ಕೈಕೊಡ್ತರೆ ಅಂತ ರಾಜಕಾರಣ ಮಾಡಕ್ಕಾಯ್ತದ ಸಾರ್? ಸಾಮಾಜಿಕ ನ್ಯಾಯ ಕೊಡಕ್ಕೆ ಅಂತ ಹ್ವಂಟಾಗ ಯಲ್ಲಾನು ಎದುರಿಸಬೇಕು."

"ಅಂಗಾದ್ರೆ ನಾವು ತಯಾರಾಗಿದ್ದಿವಿ. ಅದ್ಯಾರು ಬತ್ತರೊ ಬರ್ಲಿ. ಈ ರೇವಣ್ಣ ಏನು ಅಂತ ತೋರುಸ್ತಿನಿ."

"ಕುಮಾರಣ್ಣ ಸುಮ್ಮನಾದ್ರು ಅಂತ ನೀವೆದ್ರ ಸಾರ್?"

"ಕುಮಾರಣ್ಣನ ಸುದ್ದಿ ಬುಡಿ. ಈ ರೇವಣ್ಣ ಈಗ ಭವಾನಿ ರೇವಣ್ಣ ಗೊತ್ತ?"

"ಥೂತ್ತೇರಿ!!!"

■

ಮುರುಘಾ ಮಠದ ಮೇಲೆ ಕಾರ್ಮೋಡ

ಚಿತ್ರದುರ್ಗದ ಮುರುಘಾ ಮಠದ ಮೇಲೆ ಮತ್ತೆ ಕಾರ್ಮೋಡ ಕವಿಯಲು ಶುರುವಾಗಿದೆ. ಒಂದಷ್ಟು ಗದ್ದಲ, ಜಮೀನು ರಾದ್ಧಾಂತಗಳ ನಂತರ ತಣ್ಣಗಾಗಿದ್ದ ಮುರುಘಾ ಮಠ ಮತ್ತೊಮ್ಮೆ ಹಾದಿಬೀದಿಯ ಸುದ್ದಿಯಾಗಿದೆ. ಇದ್ದುದರಲ್ಲಿ ವೈಚಾರಿಕ ಶರಣ ಸಾಹಿತ್ಯವನ್ನು ಮೈಗೂಡಿಸಿಕೊಂಡ ಶಿವಮೂರ್ತಿ ಶರಣರು ಖಾವಿ ಸ್ವಾಮಿಗಳ ನಡುವೆಯೇ ಕಿಂಚಿತ್ತು ಘನತೆ ಉಳಿಸಿಕೊಂಡವರು. ಆದರೀಗ ಅವರು ರಾಜಕಾರಣಿಗಳನ್ನು ಭೇಟಿಯಾಗಿ ರಾಜಕೀಯ ಮಾಡುತ್ತಿದ್ದಾರೆ ಎಂಬ ಗಲ್ಲು ಹಬ್ಬಿದೆ. ಅದಕ್ಕೆ ಮೂಲ ಕಾರಣ ಬಸವರಾಜನ್ ಎಂಬ ಮಠದ ಮಾಜಿ ಆಡಳಿತಾಧಿಕಾರಿ.

ಅಸಲಿಗೆ ಈ ಬಸವರಾಜನ್ ಸಾಚಾ ಆಸಾಮಿಯೇನಲ್ಲ; ಸನ್ಮಾನ್ಯ ಕಿತಾಪತಿ, ಪರಮಸ್ವಾರ್ಥಿ, ಲಂಪಟ... ಹೀಗೆ ಚಿತ್ರದುರ್ಗದ ಗಲ್ಲಿಗೊಂದರಂತೆ ಬಿರುದು ಸಂಪಾದಿಸಿಕೊಂಡಿರೊ ಈತ ಮಾಡಿರುವ ಛಾನ್ಗಡಿಗಳು ಒಂದೆರಡಲ್ಲ, ಇವತ್ತು ಅವೇ ಶಿವಮೂರ್ತಿ ಶರಣರ ಕುತ್ತಿಗೆಗೆ ಸುತ್ತಿಕೊಂಡಿವೆ.

ಬಸವರಾಜನ್‌ನ ಪತ್ನಿ ಸೌಭಾಗ್ಯ ಎಂಬ ರಾಜಕೀಯ ತೆವಲಿನ ಹೆಂಗಸು ಜಿಲ್ಲಾ ಪಂಚಾಯತ್ ಅಧ್ಯಕ್ಷೆಯಾದರೆ ಕಾವಿಯೊಳಗಿನ ಶರಣರೇಕೆ ಬುಸುಗುಡಬೇಕು ಅಂತ ಕೆದಕುತ್ತಾ ಹೋದರೆ ರೋಚಕ ವೃತ್ತಾಂತ ತೆರೆದುಕೊಳ್ಳುತ್ತಾ ಸಾಗುತ್ತದೆ. ದೊಡ್ಡಸಿದ್ದವ್ವನಹಳ್ಳಿ ಜಿ.ಪಂ. ಕ್ಷೇತ್ರದಿಂದ ಗೆದ್ದುಬಂದಿರುವ ಸೌಭಾಗ್ಯಳ ಗಂಡ ಬಸವರಾಜನ್ ಮಾಜಿ ಶಾಸಕನಾದರೂ ಸದ್ಯದ ಮಟ್ಟಿಗೆ ರಾಜಕೀಯ ನಿರುದ್ಯೋಗಿ. ಆರಂಭದಲ್ಲಿ ಜೆಡಿಎಸ್ ಅಂಗಳದಲ್ಲಿದ್ದ ಈ ಖತರ್‌ನಾಕ್ ಜೋಡಿ ಕಳೆದ ಎಂಎಲ್‌ಎ ಎಲೆಕ್ಷನ್‌ನಲ್ಲಷ್ಟೇ ಕಾಂಗ್ರೆಸ್ ಹಟ್ಟಿಗೆ ಹೈಜಂಪ್ ಮಾಡಿದ್ದು; ಮಂತ್ರಿ ಆಂಜನೇಯ ಅದೆಂತಹ ಧರ್ಮಸಂಕಟಕ್ಕೆ ಸಿಲುಕಿದರೋ ಗೊತ್ತಿಲ್ಲ ಈ ಗಂಡ-ಹೆಂಡತಿಗೆ ಜಿಲ್ಲಾ ಕಾಂಗ್ರೆಸ್‌ನಲ್ಲಿ ಭರ್ಜರಿ ಮನ್ನಣೆಯನ್ನೇ ಕೊಟ್ಟರು. ಸೌಭಾಗ್ಯ ಕೇಳಿದ ಕ್ಷೇತ್ರಕ್ಕೆ ಟಿಕೆಟು ಕೊಟ್ಟಿದ್ದಲ್ಲದೆ ಆಕೆಯನ್ನು ಗೆಲ್ಲಿಸಿ ತರುವಲ್ಲಿ ಖುದ್ದು ಆಂಜನೇಯರೇ ಮುತುವರ್ಜಿ ವಹಿಸಿದ್ದು ರಹಸ್ಯವಾಗೇನೂ ಉಳಿದಿಲ್ಲ.

ಸೌಭಾಗ್ಯಳಿಗೆ ಟಿಕೆಟು ಸಿಕ್ಕಾಗಲೇ ಶಿವಮೂರ್ತಿ ಶರಣರು ಸಣ್ಣಗೆ ಬೆವೆತು ಹೋಗಿದ್ದರು. ಸೌಭಾಗ್ಯಳಿಗೆ ಸಿಕ್ಕ ಟಿಕೆಟು ತಪ್ಪಿಸಲು ಶತಪ್ರಯತ್ನ ಮಾಡಿದರೂ ಫಲಿಸಲಿಲ್ಲ. ಯಾವಾಗ ಸೌಭಾಗ್ಯ ಸಿದ್ದವ್ವನಹಳ್ಳಿಯಿಂದ ಗೆದ್ದು ದುರ್ಗದ ನಡುಬೀದಿಯಲ್ಲಿ ಭರ್ಜರಿ ವಿಜಯೋತ್ಸವ ಆಚರಿಸಿದಳೋ ಆಗ ಶರಣರು ಅಕ್ಷರಶಃ ರಾಜಕಾರಣಿಯಂತೆ ಆಕೆಗೆ ದಕ್ಕಬಹುದಾದ ಅಧ್ಯಕ್ಷಗಿರಿಯನ್ನು ತಪ್ಪಿಸಲು ತಂತ್ರ ರೂಪಿಸತೊಡಗಿದರು.

ಬಸವರಾಜನ್ ಮತ್ತು ಶಿವಮೂರ್ತಿ ಶರಣರ ನಡುವಿನ ದುಶ್ಮನಿ ಇವತ್ತು ನಿನ್ನೆಯದಲ್ಲ, ಬಸವರಾಜನ್ ಮಠದಿಂದ ಸರ್ವಾಧಿಕಾರಿ ಕುರ್ಚಿ ಬಿಟ್ಟು ಹೊರಬಿದ್ದ ಘಳಿಗೆಯಿಂದಲೇ ಶರಣರ ವಿರುದ್ಧ, ಮಠದ ವಿರುದ್ಧ ಒಂದಲ್ಲಾ ಒಂದು ಕ್ಯಾತೆ ತೆಗೆಯುತ್ತಲೇ ಬಂದಿದ್ದಾನೆ. ಮಠದ ಆಸ್ತಿ, ಜಮೀನು, ಸೈಟುಗಳ ಮೇಲೆಲ್ಲ ನ್ಯಾಯಾಲಯದಲ್ಲಿ ಕೇಸು ಜಡಿಯುತ್ತಲೇ ಬಂದಿದ್ದಾನೆ. ಶರಣರು ಹತ್ತು ವರ್ಷಗಳಿಂದ ಸರಿಯಾಗಿ ನಿದ್ದೆ ಮಾಡುವುದಕ್ಕೂ ಅವಕಾಶ ಕೊಡದಂತೆ ಕಾಟ ಕೊಟ್ಟಿದ್ದಾನೆ.


ಅಂತಹ ಬಸವರಾಜನ್‌ನ ಮಡದಿ ಸೌಭಾಗ್ಯ ಬರೀ ಜಿ.ಪಂ. ಸದಸ್ಯಳಾಗಿದ್ದರೆ ಬಹುಶಃ ಶರಣರು ಈ ಪಾಟಿ ದಿಗಿಲಿಗೆ ಬೀಳುತ್ತಿರಲಿಲ್ಲವೇನೊ. ಆದರೆ ಅಧ್ಯಕ್ಷಗಾದಿ ಮೀಸಲಾತಿ ಹೊರಬಿದ್ದು ಸೌಭಾಗ್ಯ ಜಿ.ಪಂ. ಅಧ್ಯಕ್ಷೆಯಾಗುವ ಸುಯೋಗವನ್ನು ಯಾವಾಗ ಪಡೆದುಕೊಂಡಳೊ ಶರಣರು ಮತ್ತಷ್ಟು ಥಂಡಾ ಹೊಡೆದರು.

ಶರಣರ ಈ ನಡುಕಕ್ಕೆ ಬಲವಾದ ಕಾರಣವೂ ಇದೆ. ಬಸವರಾಜನ್ ಮುರುಘಾಮಠದ ಆಡಳಿತಾಧಿಕಾರಿಯಾಗಿ ದ್ದನೆಂಬುದು ನೆಪಮಾತ್ರದ್ದು. ಮಠದ ಸಮಗ್ರ ವ್ಯವಹಾರದ ಚುಕ್ಕಾಣಿ ಹಿಡಿದಿದ್ದ ಸರ್ವಾಧಿಕಾರಿಯಂತೆ ಮೆರೆದವನು ಆತ. ಅದೆಷ್ಟರಮಟ್ಟಿಗೆಂದರೆ ಶರಣರು ತಿನ್ನುವ ಒಣದ್ರಾಕ್ಷಿ, ಗೋಡಂಬಿಯ ಲೆಕ್ಕ ಹಾಕುವುದರಿಂದ ಶರಣರು ಹತ್ತುವ ಕಾರಿನ ಡೀಸೆಲ್, ಹೋಗಿಬರುವ



ಕಿಲೋಮೀಟರ್‌ಗಳ ಮೇಲೂ ಕಣ್ಣಿಟ್ಟು ಕುಂತಿದ್ದ. ಮಠದ ತುಂಬಾ ಬಸವರಾಜನ್ ತನ್ನ ಪರವಾದ ಪಟಾಲಂ ಪಡೆಯನ್ನು ನೇಮಕ ಮಾಡಿದ್ದ. ಈ ಪಟಾಲಂ ಪಡೆ ಶರಣರ ನಡೆನುಡಿ, ಭೋಜನಗೃಹ, ಖಾಸಗೀ ಬದುಕು ಅಂತೆಲ್ಲದರ ಮೇಲೂ ಹದ್ದಿನ ಕಣ್ಣಿಟ್ಟು ಶರಣರ ಪ್ರತಿ ಚಲನವಲನದ ಬಗ್ಗೆ ಬಸವರಾಜನ್ ಎದುರು ದಾಖಲಿಸುತ್ತಿದ್ದರು. ಈ ಬಸವರಾಜನ್ ಹುಟ್ಟಾ ವಾರಾನ್ನದ ಭಾಗ್ಯದಲ್ಲೇ ಬದುಕಿ ಬಂದವನು. ಅಂತವನನ್ನು ಮಲ್ಲಿಕಾರ್ಜುನ ಸ್ವಾಮಿಗಳು ಮಠದೊಳಕ್ಕೆ ಬಿಟ್ಟುಕೊಂಡು ಬೆಳೆಸಿದ್ದರು. ಹಾಗೆ ನೋಡಿದರೆ ಮಲ್ಲಿಕಾರ್ಜುನ ಸ್ವಾಮಿಗಳ ನಂತರ ಮುರುಘಾಮಠದ ಪೀಠದಲ್ಲಿ ಈ ಬಸವರಾಜನ್‌ನೇ ಪವಡಿಸಬೇಕಿತ್ತು. ಆದರೆ ಲೋಲುಪ ಗುಣದ ಬಸವರಾಜನ್ ಸನ್ಯಾಸಿಯಾಗಬಯಸದೇ ಸಂಸಾರಿಯಾಗಿ ಮಠದ ಸಾವಿರಾರು ಕೋಟಿ ಆಸ್ತಿಗೆ ಒಡೆಯನಾಗುವ ಸಖತ್ ಐಡಿಯಾ ಹುಡುಕಿದ. ಹಾಗಾಗಿಯೇ ಹಾವೇರಿ ಮಠದಲ್ಲಿ ಚಿಕ್ಕ ಸ್ವಾಮಿಯಾಗಿದ್ದ ಶಿವಮೂರ್ತಿಯನ್ನು ಬಸವರಾಜನ್‌ನೇ ತಂದು ಮುರುಘಾಮಠದ ಜಗದ್ಗುರು ಅಂತ ಘೋಷಿಸಿದ. ಅಲ್ಲಿಂದಲೇ ಶಿವಮೂರ್ತಿ ಶರಣರು ಬಸವರಾಜನ್‌ನ ಕೈಗೊಂಬೆಯಾದದ್ದು.

ಪಟ್ಟದ ಸ್ವಾಮಿಯನ್ನೇ ಕೈಗೊಂಬೆ ಮಾಡಿಕೊಂಡ ಬಸವರಾಜನ್, ಸೌಭಾಗ್ಯಳೊಟ್ಟಿಗೆ ಮಠದಲ್ಲೇ ಸಂಸಾರ





ಶುರುಮಾಡಿಕೊಂಡ. ಇದು ಹೇಳೀಕೇಳಿ ವಿರಕ್ತಮಠ, ಅಂಥಾದರಲ್ಲಿ ಬಸವರಾಜನ್ ಮಠದ ಅಂಗಳದಲ್ಲೇ ಸಂಸಾರ ಶುರುಮಾಡಿದ್ದು ಮಠದ ಸಮಸ್ತ ಭಕ್ತರಿಗೆ ಸಿಟ್ಟು ತರಿಸಿತ್ತು, ಭಕ್ತರು ಬೀದಿಗಿಳಿದು ಪ್ರತಿಭಟಿಸಿದರು. ಶಿವಮೂರ್ತಿ ಶರಣರಿಗೆ ಛೀಮಾರಿ ಹಾಕಿದರು. ಆದರೆ ಶರಣರು ಮಠದ ಆದಿಕಾಲದ ಪರಂಪರೆಗೆ ಎಳ್ಳೂನೀರು ಬಿಟ್ಟು ಚಪಲಚೆನ್ನಿಗರಾಯ ಬಸವರಾಜನ್ ಪರವೇ ನಿಂತುಬಿಟ್ಟರು. ಆದರೆ ಭಕ್ತರ ಒತ್ತಡ ಹೆಚ್ಚಾದಾಗ ಬಸವರಾಜನ್‌ನನ್ನು ಶರಣರು ಮಠದಿಂದ ಹೊರದಬ್ಬಿದರು. ಹಾಗೆ ಹೊರಬಂದ ಬಸವರಾಜನ್ ಶರಣರ ವಿರುದ್ಧ ಏನೇನೆಲ್ಲಾ ಮಾಡಬಹುದೋ ಅದೆಲ್ಲವನ್ನೂ ಕ್ರಿಯಾರೂಪಕ್ಕಿಳಿಸಲು ತಯಾರಿ ನಡೆಸುತ್ತಲೇ ಶರಣರ ವಿರುದ್ಧ ನಿಂತುಬಿಟ್ಟ. ಶಾಸಕನಾದ ನಂತರವಂತೂ ಮಠದ ವಿರುದ್ಧ ಕತ್ತಿಮಸೆಯುತ್ತಲೇ ಬಂದ. ಅಂದಹಾಗೆ ಈತ ಮಠದಲ್ಲಿ ಆಡಳಿತಾಧಿಕಾರಿಯಾಗಿದ್ದಾಗಲೇ ಹೆಂಡತಿ ಸೌಭಾಗ್ಯಳನ್ನು ಚಿತ್ರದುರ್ಗದ ಜಿ.ಪಂ. ಅಧ್ಯಕ್ಷೆಯನ್ನಾಗಿಸಿದ್ದ.

ಮಠದಿಂದ ತನ್ನನ್ನು ಹೊರದಬ್ಬಿದರು ಅನ್ನೋ ಜಿದ್ದಿಗೆ ಬಿದ್ದ ಬಸವರಾಜನ್ ತಾನು ಆಡಳಿತಾಧಿಕಾರಿಯಾಗಿದ್ದಾಗ ಶರಣರ ಹೆಸರಿನಲ್ಲಿ ಈತನೇ ನಡೆಸಿದ್ದ ಅವ್ಯವಹಾರಗಳನ್ನು ಕೆದಕಿ ಶರಣರ ಮೇಲೆಯೇ ಕೇಸು ದಾಖಲಿಸಲಾರಂಭಿಸಿದ. ಬಸವರಾಜನ್‌ನ ಹೊಡೆತಕ್ಕೆ ಶರಣರು ಪತರುಗುಟ್ಟಿದರು. ಬಸವರಾಜನ್ ಮಠದಿಂದ ಹೊರನಡೆದಾಗ ಮಠ 100 ಕೋಟಿ ಸಾಲದಲ್ಲಿದೆ ಅಂತಾ ಶಿವಮೂರ್ತಿ ಶರಣರು ವ್ಯಥೆ ವ್ಯಕ್ತಪಡಿಸಿದ್ದರು.

ಸದ್ಯದ ಸಂಕಟ

ಸದ್ಯ ಬಸವರಾಜನ್‌ನ ಹೆಂಡತಿ ಸೌಭಾಗ್ಯ ಚಿತ್ರದುರ್ಗ ಜಿ.ಪಂ. ಅಧ್ಯಕ್ಷೆಯಾಗುವುದು ಗ್ಯಾರಂಟಿಯಾಗಿದೆ. ಹಾಗಾದಲ್ಲಿ ಶರಣರಿಗೆ ಯಾಕೆ ನಡುಕ ಎಂಬುದು ಚಿದಂಬರ ರಹಸ್ಯವೇನಲ್ಲ. ಈ ಹಿಂದೆ 'ಪತ್ರಿಕೆ'ಯಲ್ಲೇ ಬಸವರಾಜನ್ ಮತ್ತು ಶರಣರ ನಡುವಿನ ಎಸ್.ಜೆ.ಎಂ. ನೌಕರರ ಗೃಹಮಂಡಳಿಯ ನೂರಾರು ಕೋಟಿ ಅವ್ಯವಹಾರದ ಬಗ್ಗೆ ಸಮಗ್ರ ವರದಿ ಪ್ರಕಟಗೊಂಡಿತ್ತು. ಈ ಗೃಹಮಂಡಳಿಯ ಹಿಂದೆ ಅಜಮಾಸು 200 ಕೋಟಿ ರಿಯಲ್ ಎಸ್ಟೇಟ್ ದಂಧೆಯ ಪಾತಕ ಅಡಗಿದೆ. ಬಸವರಾಜನ್ ಮಠದಿಂದ ಹೊರನಡೆದರೂ ಈ ಗೃಹಮಂಡಳಿಯನ್ನು ತನ್ನ ಬಳಿಯೇ ಉಳಿಸಿಕೊಂಡಿದ್ದ. ಮಠ ಈಗ ಗೃಹಮಂಡಳಿ ವ್ಯವಹಾರವನ್ನು ತನ್ನ ಕಬ್ಜಾಕ್ಕೆ ತೆಗೆದುಕೊಂಡಿದೆ. ಈ 200 ಕೋಟಿ ವ್ಯವಹಾರದ ನಿವೇಶನ ಜಿ.ಪಂ. ವ್ಯಾಪ್ತಿಗೆ ಬರುತ್ತದೆ. ಹಾಗೆಯೇ ಮಠದ ಬಸವೇಶ್ವರ ಮೆಡಿಕಲ್ ಕಾಲೇಜಿನ ನಿವೇಶನವೂ ಬಸವರಾಜನ್ ಹಾಕಿರುವ ಕೇಸಿನಿಂದ ತಕರಾರಿನಲ್ಲಿದೆ. ಅಲ್ಲದೆ ಕೆಂಚನಕಟ್ಟೆ ಗ್ರಾಮದ ಸರ್ವೆ ನಂಬರಿನ ನಿವೇಶನ ಕೂಡ ತಕರಾರಿನಲ್ಲಿದೆ. ಒಂದುವೇಳೆ ಸೌಭಾಗ್ಯ ಜಿ.ಪಂ. ಅಧ್ಯಕ್ಷೆಯಾದರೆ ಶರಣರ ಈ ಎಲ್ಲಾ ಕೋಟ್ಯಾಂತರ ರೂಪಾಯಿ ವ್ಯವಹಾರಕ್ಕೆ ಎಳ್ಳು ನೀರು ಬಿಡೋದು ಗ್ಯಾರಂಟಿ. ಹಾಗಾಗಿಯೇ ಸೌಭಾಗ್ಯ ಚಿತ್ರದುರ್ಗ ಜಿ.ಪಂ. ಅಧ್ಯಕ್ಷೆಯಾಗುವುದನ್ನು ತಪ್ಪಿಸಲು ಇನ್ನಿಲ್ಲದ ಪ್ರಯತ್ನ ಮಾಡುತ್ತಿದ್ದಾರೆ ಎಂಬ ಮಾತು ಕೇಳಿಬರುತ್ತಿದೆ.

ಜಿ.ಪಂ. ಅಧ್ಯಕ್ಷರ ಮೀಸಲಾತಿ ಪ್ರಕಟವಾದ ಬೆನ್ನಲ್ಲೇ ಖುದ್ದು ಶರಣರೇ ರಾಜಕೀಯ ರಂಗ ಪ್ರವೇಶ ಮಾಡಿದರು. ಮೊದಲು ಸಿ.ಎಂ. ಸಿದ್ದರಾಮಯ್ಯನನ್ನು ಭೇಟಿ ಮಾಡಲು ಯತ್ನಿಸಿದ್ದರು. ಅದು ಕೈಗೂಡದಿದ್ದಾಗ ಪವರ್ ಮಿನಿಸ್ಟರ್ ಡಿ.ಕೆ.ಶಿ. ಹೆಗಲ ಮೇಲೆ ಕೈಹಾಕಿದ್ದಲ್ಲದೇ, ಮಂತ್ರಿ ಮಹದೇವಪ್ಪನ ಮನೆಗೂ ಎಂಟ್ರಿಕೊಟ್ಟರು. ಡಿಕೆಶಿ ಮೂಲಕ ಎಚ್.ಸಿ. ಮಹದೇವಪ್ಪನ ಮನೆ ತಲುಪಿದ ಶರಣರು ಚಿತ್ರದುರ್ಗ ಜಿಲ್ಲಾ ಪಂಚಾಯ್ತಿ ಮೀಸಲಾತಿ ಸಾಮಾನ್ಯ ಮಹಿಳೆ ವರ್ಗದಿಂದ ಬೇರೆ ವರ್ಗಕ್ಕೆ ಬದಲಾಯಿಸುವಂತೆ ಮಾತುಕತೆ ನಡೆಸಿದ್ದರು. ಶರಣರ ಈ ಭೇಟಿಗಳ ಮಾಹಿತಿ ಬೆಂಗಳೂರಿನಲ್ಲೇ ಇದ್ದ ಬಸವರಾಜನ್‌ಗೆ ತಲುಪಿದ್ದೇ ತಡ ಹೆಂಡತಿ ಸಮೇತ ಮಂತ್ರಿ ಮಹದೇವಪ್ಪನ ಮನೆಗೆ ಬಂದವನೇ ಶರಣರ ವಿರುದ್ಧ ಮಾತಿನ ಯುದ್ಧಕ್ಕೆ ನಿಂತಿದ್ದಾನೆ. ಶರಣರಾದವರು ಶರಣರಾಗೇ ಮಠದ ಉಸ್ತುವಾರಿ ನೋಡಿಕೊಂಡಿರಿ, ರಾಜಕೀಯ ಮಾಡಬೇಡಿ ಎಂದೆಲ್ಲ ಎಚ್ಚರಿಕೆ ನೀಡಿದ್ದಾನೆ ಬಸವರಾಜನ್.

ಅಂದಹಾಗೆ, ಜಿ.ಪಂ. ಅಧ್ಯಕ್ಷ ಪಟ್ಟದ ಪೈಪೋಟಿಯಲ್ಲಿ ಚಿತ್ರದುರ್ಗ ಜಿಲ್ಲಾ ಕೈ ಪಾರ್ಟಿಯಲ್ಲೇ ವಾದವಿವಾದಗಳು ಶುರುವಾಗಿವೆ. ಈಗಾಗಲೇ ಒಂದು ಬಾರಿ ಅಧ್ಯಕ್ಷೆಯಾಗಿದ್ದ ಸೌಭಾಗ್ಯಳಿಗೆ ಮತ್ತೆ ಅಧ್ಯಕ್ಷ ಗಾದಿ ಬೇಡಾ ಎನ್ನುವ ಒಂದು ಗುಂಪು ಮಂತ್ರಿ ಆಂಜನೇಯರನ್ನು ತಡವಿಕೊಂಡಿದೆ. ಚಳ್ಳಕೆರೆ, ಹೊಸದುರ್ಗ, ಹಿರಿಯೂರು ಶಾಸಕರಾದ ರಘುಮೂರ್ತಿ, ಗೋವಿಂದಪ್ಪ ಮತ್ತು ಸುಧಾಕರ ಸೇರಿದಂತೆ ಕೈ ಮುಖಂಡರು ಹಿರಿಯೂರು ಭಾಗದ ಜಿ.ಪಂ. ಸದಸ್ಯೆ ಶಶಿಕಲಾರನ್ನೇ ಅಧ್ಯಕ್ಷೆಯನ್ನಾಗಿ ಮಾಡುವ ಪ್ರಯತ್ನ ಶುರುವಿಟ್ಟುಕೊಂಡಿದ್ದಾರೆ. ಹಾಗೊಂದುವೇಳೆ ಶಶಿಕಲಾ ಅಧ್ಯಕ್ಷೆಯಾಗುವುದು ತಪ್ಪಿ ಸೌಭಾಗ್ಯಳಿಗೆ ಲಕ್ಕು ಹೊಡೆದರೆ ಮುರುಘಾಮಠದ ಶರಣರಿಗೆ ಚಳಿಜ್ವರ ಗ್ಯಾರಂಟಿ. ಜೊತೆಗೆ ಚಿತ್ರದುರ್ಗ ಜಿಲ್ಲಾ ಕೈ ಪಾರ್ಟಿಯಲ್ಲಿ ರಾಜಕೀಯ ಅಲ್ಲೋಲಕಲ್ಲೋಲವೂ ಗ್ಯಾರಂಟಿ. ಈಗಾಗಲೇ ಸಂಕಷ್ಟದಲ್ಲಿರುವ ಆಂಜನೇಯರ ರಾಜಕೀಯ ಮತ್ತಷ್ಟು ಕಗ್ಗಂಟಾಗುವುದೂ ಅಷ್ಟೇ ಸತ್ಯ.


■ ಟಿ.ಎನ್.ಷಣ್ಮುಖ

ಮಲ್ಲಿಕಾರ್ಜುನನ ಸ್ಕೆಚ್ಚು

ಅಷ್ಟಕ್ಕೂ ಮುರುಘಾ ಶರಣರು ಇಂತಹ ರಾಜಕಾರಣಕ್ಕೆ ಕೈಹಾಕಲು ಮುಂದಾದದ್ದು ಜಿ. ಮಲ್ಲಿಕಾರ್ಜುನ ಎಂಬ ಪೆದ್ದನ ಸಹವಾಸದಿಂದ. ಸಿಎಂ ಸಿದ್ದು, ಡಿಕೆಶಿ, ಮಹದೇವಪ್ಪರಂತ ಅಧಿಕಾರಸ್ಥರನ್ನು ಎಡತಾಕಿ ಪ್ರಕಟವಾಗಿದ್ದ ಅಧ್ಯಕ್ಷಗಾದಿ ಮೀಸಲುಪಟ್ಟಿಯನ್ನೇ ಬದಲಾಯಿಸುವ ಹೇತ್ಲಾಂಡಿ ಐಡಿಯಾವನ್ನು ಮುರುಘಾ ಶರಣರ ತಲೆಗೆ ತುಂಬಿದ್ದೇ ಈ ಮಲ್ಲಿಕಾರ್ಜುನ್. ಈತ ಸದ್ಯ ಮಠದ ಬಸವೇಶ್ವರ ಮೆಡಿಕಲ್ ಕಾಲೇಜಿನ ಪ್ರಧಾನ ಅಡ್ಮಿನಿಸ್ಟ್ರೇಟರ್.

ಹಿಂದೊಮ್ಮೆ ದಾವಣಗೆರೆಯ ಸರ್ಕಾರಿ ಪಿಯು ಕಾಲೇಜಿನ ಪ್ರಾಂಶುಪಾಲನಾಗಿದ್ದ ಈ ಮಲ್ಲಿಕಾರ್ಜುನ ಮಠದ ಜಬರ್‌ದಸ್ತ್ ಆಮದನಿಯನ್ನು ಕಂಡು ತನ್ನ ಸರ್ಕಾರಿ ವೃತ್ತಿಗೆ ರಾಜೀನಾಮೆ ಗೀಚಿ ಶಿವಮೂರ್ತಿ ಶರಣರ ಗುಂಪು ಸೇರಿಕೊಂಡ. ಅವನ 'ವಿದ್ವತ್ತನ್ನು' ಗಮನಿಸಿದ ಶರಣರು ಏಕಾಏಕಿ ಮೆಡಿಕಲ್ ಕಾಲೇಜಿನ ಆಡಳಿತಾಧಿಕಾರಿಯನ್ನಾಗಿ ನೇಮಕ ಮಾಡಿದರು. ಬಸವರಾಜನ್‌ನ ಉಚ್ಚಾಟನೆಯ ನಂತರ ಖಾಲಿಯಿದ್ದ ಶರಣರ ಆಪ್ತ ಬಳಗಕ್ಕೆ ತೂರಿಕೊಂಡ ಮಲ್ಲಿಕಾರ್ಜುನ ಶರಣರಿಗೆ ಇಂಥಾ ಐಡಿಯಾ ತುರುಕುವ ಕಾಯಕ ಮಾಡುತ್ತಾ ಬರುತ್ತಿದ್ದಾನೆ. ಶರಣರು ಈಗಲಾದರು ಎಚ್ಚೆತ್ತುಕೊಂಡು ಇಂಥವರನ್ನು ದೂರ ಇಡದೇ ಹೋದರೆ ಮುಂದೊಂದು ದಿನ ಮತ್ತೊಬ್ಬ ಬಸವರಾಜನ್‌ನ ಬಿಡ್ಡಾಕ್ಕೆ ಬಿದ್ದ ಪರಿಸ್ಥಿತಿಗೆ ಸಿಲುಕಿಕೊಳ್ಳುವುದು ಗ್ಯಾರಂಟಿ.

ಮಂಡ್ಯ: ಚೆಡ್ಡಿಗಳ 'ಲವ್ ಜಿಹಾದ್'ಗೆ ತಣ್ಣೀರು





ಹಿಂದೂ ಅಥವಾ ಮುಸ್ಲಿಂ ಹುಡುಗ-ಹುಡುಗಿ ಜೊತೆಯಲ್ಲಿ ಓಡಾಡಿದರೆಂಬ ಕಾರಣಕ್ಕೆ ಲವ್ ಜಿಹಾದ್ ದಾಂಧಲೆ ಎಬ್ಬಿಸುವುದು, ಗೋವು ಸಾಗಾಣಿಕೆ ನೆಪ ಮಾಡಿಕೊಂಡು ಮುಸ್ಲಿಮರ ಮೇಲೆ ಹಲ್ಲೆ ಮಾಡುವುದು ನೈತಿಕ ಪೊಲೀಸ್‌ಗಿರಿಯ ಚೆಡ್ಡಿ ಪಟಾಲಂನ ಕಾಯಂ ಪ್ರವೃತ್ತಿ. ದೂರದ ಕರಾವಳಿಯಿಂದ ಆಗಿಂದಾಗ್ಗೆ ಇಂತಹ ಪ್ರಕರಣಗಳು ಬೆಳಕಿಗೆ ಬರುತ್ತಲೇ ಇರುತ್ತವೆ. ಆದರೆ ಇತ್ತೀಚೆಗೆ ಈ ದುಷ್ಟಪಡೆ ಕರಾವಳಿ ಮಾತ್ರವಲ್ಲದೆ ರಾಜ್ಯವ್ಯಾಪಿ ವ್ಯಾಪಿಸುತ್ತಿದೆ. ಈಗ ಮಂಡ್ಯಕ್ಕೂ ಈ ವಿಕೃತಿ ಕಾಲಿಟ್ಟಿರುವುದು ದುರದೃಷ್ಟಕರ. ಲವ್ ಜಿಹಾದ್ ಹೆಸರಿನಲ್ಲಿ ಗಣ್ಯರೆನಿಸಿಕೊಂಡ ಹಿಂದೂ-ಮುಸ್ಲಿಂ ಕುಟುಂಬದ ಮಾನಮರ್ಯಾದೆ ತೆಗೆಯಲು ಇನ್ನಿಲ್ಲದ ಪ್ರಯತ್ನ ನಡೆಸಿದ್ದಾರೆ. ಹಿಂದೂ ಹುಡುಗಿ, ಮುಸ್ಲಿಂ ಹುಡುಗ ಪರಸ್ಪರ ಪ್ರೀತಿಸಿ ಎರಡು ಕುಟುಂಬಗಳನ್ನು ಒಪ್ಪಿಸಿ ಮದುವೆಯಾಗಲು ಹೊರಟರೆ ಧರ್ಮ ರಕ್ಷಣೆಯ ಗುತ್ತಿಗೆ ಹಿಡಿದಿರುವ ಚೆಡ್ಡಿ ಪುಂಡರು ಆ ಮದುವೆಗೆ ಕಲ್ಲು ಹಾಕಲು ಹೊರಟಿದ್ದರು. ಕೋಮು ಸೌಹಾರ್ದತೆಗೆ ಹೆಸರುವಾಸಿಯಾಗಿರುವ ಮಂಡ್ಯದಲ್ಲೂ ಚೆಡ್ಡಿ ಪುಂಡರು ಲವ್ ಜಿಹಾದ್ ಹೆಸರಿನಲ್ಲಿ ಗಲಬಿಚ್ಚಲು ಎಲ್ಲಾ ಸಿದ್ಧತೆಗಳನ್ನು ನಡೆಸಿದ್ದರು. ಮುಸ್ಲಿಂ ಯುವಕರು ಹಣಕ್ಕಾಗಿ ಲವ್ ಜಿಹಾದ್ ನಡೆಸುತ್ತಿದ್ದಾರೆ; ಇದು ಕೂಡ ಲವ್ ಜಿಹಾದ್ ಎಂದೆಲ್ಲಾ ಆರೋಪಗಳನ್ನು ಸೃಷ್ಟಿಸಿದ ಚೆಡ್ಡಿಗಳ ವಿಕೃತ ಪಟಾಲಂ ಮದುವೆ ಮುರಿಯಲು ಸಂಚು ರೂಪಿಸಿತ್ತು. ಆದರೆ ಮದುವೆಯಾಗುವ ಹುಡುಗಿಯ ತಂದೆ-ತಾಯಿ "ನಮ್ಮ ಮಗಳು ಕಳೆದ 12 ವರ್ಷಗಳಿಂದ ಮುಸ್ಲಿಂ ಯುವಕನನ್ನು ಪ್ರೀತಿಸುತ್ತಿದ್ದಾಳೆ. ಅವಳ ಇಚ್ಛೆಯಂತೆ ನಾವೆಲ್ಲಾ ಮನಸಾರೆ ಒಪ್ಪಿಗೆ ಸೂಚಿಸಿಯೇ ಸಂತೋಷದಿಂದ ಆಕೆ ಪ್ರೀತಿಸಿದ ಹುಡುಗನೊಂದಿಗೆ ಮದುವೆ ಮಾಡುತ್ತಿದ್ದೇವೆ. ಲವ್ ಜಿಹಾದ್ ಏನೂ ನಡೆದಿಲ್ಲ" ಎನ್ನುವ ಮೂಲಕ ಚೆಡ್ಡಿ ಪಟಾಲಂನ ಚೆಡ್ಡಿ ಉದುರಿಹೋಗುವಂತೆ ಮಾಡಿದ್ದಾರೆ. ಇಷ್ಟಾದರೂ ನಾಚಿಕೆಗೆಟ್ಟ ಚೆಡ್ಡಿಗಳು ಲವ್ ಜಿಹಾದ್ ನಡೆದಿದೆ, ನಷ್ಟ ಹೀಗಿದ್ದರೂ ಮದುವೆ ಮಾಡಬೇಡಿ ಎಂದೆಲ್ಲಾ ಹುಚ್ಚು ನಾಯಿಗಳಂತೆ ಬೊಗಳುತ್ತಿವೆ.

ಆಗಿದ್ದಿಷ್ಟು

ಮಳವಳ್ಳಿ ಕ್ಷೇತ್ರದ ಮಾಜಿ ಶಾಸಕ ಎಚ್.ಪಿ.ವೀರೇಗೌಡರ ಮಗ ಡಾ.ನರೇಂದ್ರಬಾಬು ಮಂಡ್ಯ ಮಿಮ್ಸ್‌ನಲ್ಲಿ ಮಕ್ಕಳ ವೈದ್ಯರಾಗಿದ್ದಾರೆ. ಮಂಡ್ಯದ ಅಶೋಕನಗರದ 2ನೇ ಕ್ರಾಸ್‌ನಲ್ಲಿ ವಾಸವಾಗಿರುವ ಡಾ.ನರೇಂದ್ರಬಾಬು ಹಾಗೂ ಉಮಾದೇವಿ ದಂಪತಿಗಳ ಪುತ್ರಿ ಆಶಿತಾಳೇ ಈ ಪ್ರಕರಣದ ಕೇಂದ್ರಬಿಂದು. ಎಂಬಿಎ ಪದವೀಧರೆಯಾದ ಆಶಿತಾ ತನ್ನ ತಂದೆ ನರೇಂದ್ರಬಾಬುರವರ ಸ್ನೇಹಿತ ಮುಕ್ತಾರ್ ಅಹಮದ್ ಎಂಬುವರ ಮಗ ಶಕೀಲ್‌ನನ್ನು ಕಳೆದ 12 ವರ್ಷಗಳಿಂದ ಪ್ರೀತಿಸುತ್ತಿದ್ದಳು. ಮುಸ್ಲಿಂ ಧರ್ಮದ ಶಕೀಲ್ ಕೂಡ ಎಂಬಿಎ ಪದವೀಧರನಾಗಿದ್ದು ಹಿಂದೂ ಧರ್ಮದ ಆಶಿತಾಳನ್ನು ತುಂಬಾ ಪ್ರೀತಿಸುತ್ತಿದ್ದ. ಇವರಿಬ್ಬರ ಗಾಢ ಪ್ರೀತಿಯನ್ನು ಒಪ್ಪಿದ ಎರಡು ಕುಟುಂಬಗಳು ಒಪ್ಪಿಗೆ ಸೂಚಿಸಿ ಏಪ್ರಿಲ್ 17ರಂದು ಮೈಸೂರಿನ ತಾಜ್ ಕಲ್ಯಾಣಮಂಟಪದಲ್ಲಿ ಮದುವೆ ನಡೆಸಲು ಸಕಲ ರೀತಿಯಲ್ಲೂ ಸಿದ್ಧತೆ ನಡೆಸಿದ್ದವು. ಆದಾಗಲೇ ಎಲ್ಲಾ ಕಡೆ ಎರಡು ಕುಟುಂಬಗಳು ಲಗ್ನಪತ್ರಿಕೆ ಹಂಚಿ ಮದುವೆಯ ಸಂಭ್ರಮದಲ್ಲಿ ಮುಳುಗಿದ್ದವು. ಈ ವಿಚಾರ ತಿಳಿದು. ಮಂಡ್ಯದಲ್ಲಿ ಬೆರಳೆಣಿಕೆಯಷ್ಟಿರುವ ಚೆಡ್ಡಿ ಪಡೆ ಸಾಕಷ್ಟು ಕನಲಿಹೋಗಿತ್ತು. ಹೇಗಾದರೂ ಮಾಡಿ ಮದುವೆ ನಿಲ್ಲಿಸಲೇಬೇಕೆಂದು ಹೊರಟ ಚೆಡ್ಡಿ ಪಡೆ ಹಿಂದೂ-ಮುಸ್ಲಿಂ ಹುಡುಗಿಯ ಪ್ರೀತಿಗೆ 'ಲವ್ ಜಿಹಾದ್' ಹೆಸರಿನ ಬಣ್ಣಕಟ್ಟಿ ಮದುವೆ ಮುರಿಯಲು ಸಂಚು ಹೂಡಿತ್ತು. ಚೆಡ್ಡಿ ಪಡೆಯ ಪುಂಡರಾದ ಸಿ.ಟಿ.ಮಂಜುನಾಥ್, ರವಿಶಂಕರ್, ಮಂಜು, ಸಿದ್ದರಾಜೇಗೌಡ, ಪಂಚಾಕ್ಷರಿ ಮೊದಲಾದವರು ಡಾ.ನರೇಂದ್ರಬಾಬು ಮನೆ ಮುಂದೆ ಏಪ್ರಿಲ್ 12ರ ಬೆಳಗ್ಗೆ ಪ್ರತಿಭಟನೆಗೆ ಮುಂದಾದರು. ಚೆಡ್ಡಿ ನಾಯಕ ಸಿ.ಟಿ.ಮಂಜುನಾಥ್ "ಇದು ಪಕ್ಕಾ ಲವ್ ಜಿಹಾದ್ ಆಗಿದ್ದು, ಹುಡುಗಿಯ ಬ್ರೈನ್‌ವಾಶ್ ಮಾಡಲಾಗಿದೆ. ಉತ್ತರಭಾರತದಲ್ಲಿ ಲವ್ ಜಿಹಾದ್ ಮಾಡುವ ಮುಸ್ಲಿಂ ಯುವಕರಿಗೆ ಮುಸ್ಲಿಂ ಸಂಘಟನೆಗಳು 5ರಿಂದ 10 ಲಕ್ಷ ಹಣ ಕೊಡುತ್ತಿದ್ದಾರೆ" ಎಂದೆಲ್ಲಾ ಸುಳ್ಳು ಬೊಗಳುತ್ತಾ ಅರಚುತ್ತಿದ್ದ. ಚೆಡ್ಡಿ ಪುಂಡರ ಪ್ರತಿಭಟನೆಗೆ ಸಾಥ್ ನೀಡಿದ ಬಿಜೆಪಿ ಮುಖಂಡರಾದ ರವಿಶಂಕರ್, ಮ.ಸಿ.ರವಿ, ಮಲ್ಲಿಕಾರ್ಜುನ್ ಮೊದಲಾದವರು ಲವ್ ಜಿಹಾದ್ ನಡೆಸಿದ್ದಾರೆ ಎಂದು ಬೊಬ್ಬೆ ಹೊಡೆಯಲಾರಂಭಿಸಿದರು.

ಈ ವಿಚಾರ ತಿಳಿದ ಮಾಧ್ಯಮದವರು ಯಾವಾಗ ಸ್ಥಳಕ್ಕೆ ಭೇಟಿ ನೀಡಿದರೋ ವಿಎಚ್‌ಪಿ, ಭಜರಂಗದಳಕ್ಕೆ ಸೇರಿದ ಪುಂಡ ಚೆಡ್ಡಿ ಗುಂಪು ತನ್ನ ಪ್ರತಿಭಟನೆಯನ್ನು ಮತ್ತಷ್ಟು ಹೆಚ್ಚಿಸಿತು. ಪುಂಡಚೆಡ್ಡಿ ಪಟಾಲಂನ ಆರ್ಭಟ ಹೆಚ್ಚಾಗಿದ್ದರಿಂದ ಸರ್ಕಲ್‌ಇನ್ಸ್‌ಪೆಕ್ಟರ್ ಪ್ರೀತಂ, ಎಸ್‌ಐಗಳಾದ ಶಿವರುದ್ರ, ಬ್ಯಾಟರಾಯಿಗೌಡ ತಮ್ಮ ಪಡೆಯೊಂದಿಗೆ ಬಂದು ಚೆಡ್ಡಿ ಪಟಾಲಂನ ಆರ್ಭಟವನ್ನು ಕಡಿಮೆ ಮಾಡಿದರು.

ಚೆಡ್ಡಿ ಪಡೆಯ ಮಸಲತ್ತನ್ನು ಅರ್ಥ ಮಾಡಿಕೊಂಡ ಡಾ.ನರೇಂದ್ರಬಾಬು ಹಾಗೂ ಉಮಾದೇವಿ "ನಮ್ಮ ಮಗಳು ಆಶಿತಾ ಕಳೆದ 12 ವರ್ಷಗಳಿಂದ ಬಾಲ್ಯ ಸ್ನೇಹಿತ ಶಕೀಲ್ ಎಂಬಾತನನ್ನು ಪ್ರೀತಿಸುತ್ತಿದ್ದಳು. ನಮ್ಮ ಮಗಳು ಮುಸ್ಲಿಂ ಧರ್ಮಕ್ಕೆ ಮತಾಂತರವಾಗಿಲ್ಲ. ಮಗಳ ಆಸೆ ಈಡೇರಿಸುವುದು ಪ್ರತಿಯೊಬ್ಬ ತಂದೆ-ತಾಯಿಯ ಜವಾಬ್ದಾರಿ. ಹಾಗಾಗಿ 2 ಕುಟುಂಬಗಳು ಒಪ್ಪಿಯೇ ಮದುವೆ ಮಾಡುತ್ತಿದ್ದೇವೆ. ಹಿಂದೂ ಸಂಘಟನೆಯ ಮುಖಂಡರಿಗೆ ಈ ವಿಚಾರ ಗೊತ್ತಿಲ್ಲ. ನಮ್ಮ ಮಗಳ ಆಸೆಯಂತೆ ಈ ಮದುವೆ ನಡೆಯುತ್ತಿದ್ದು ಲವ್ ಜಿಹಾದ್ ಎಲ್ಲಾ ಸುಳ್ಳು. ದಯಮಾಡಿ ವಾಸ್ತವಾಂಶ ತಿಳಿದು ನಮ್ಮ ಮಗಳ ಮದುವೆ ಸುಸೂತ್ರವಾಗಿ ನಡೆಯಲು ಅವಕಾಶ ಮಾಡಿಕೊಡಿ" ಅಂತ ಮಾಧ್ಯಮಗಳೆದುರೇ ಕೇಳಿಕೊಂಡರು.

ಇತ್ತ ಹುಡುಗ ಶಕೀಲ್‌ನ ತಂದೆ ಮುಕ್ತಾರ್ ಅಹಮದ್ ಕೂಡ "ನಾನು ಮತ್ತು ಡಾ.ನರೇಂದ್ರಬಾಬು 40 ವರ್ಷ ಗಳಿಂದ ಸ್ನೇಹಿತರು. ನಮ್ಮ ಮಕ್ಕಳಿಬ್ಬರೂ ವಿದ್ಯಾವಂತರಾಗಿದ್ದು ಅವರೇ ಮದುವೆ ಬಗ್ಗೆ ನಿರ್ಧಾರ ತೆಗೆದುಕೊಂಡಿದ್ದಾರೆ. ಮುಸ್ಲಿಂ ಧರ್ಮಕ್ಕೆ ಮತಾಂತರ ಆಗುವಂತೆ ಹೇಳಿಲ್ಲ. ಮದುವೆಗೂ ಯಾವ ಷರತ್ತನ್ನು ವಿಧಿಸಿಲ್ಲ. ಅವರಿಬ್ಬರೂ ಎಂಬಿಎ ಮಾಡಿಕೊಂಡಿದ್ದಾರೆ. ಅವರ ಪ್ರೀತಿಗೆ ಬೆಲೆ ನೀಡಿ ಎರಡು ಕುಟುಂಬಗಳೂ ಒಪ್ಪಿ ಮದುವೆ ಮಾಡುತ್ತಿದ್ದೇವೆ. ದಯಮಾಡಿ ಅಡ್ಡಿಪಡಿಸಬೇಡಿ" ಅಂತ ಮಾಧ್ಯಮಗಳ ಮೂಲಕ ಕೇಳಿಕೊಂಡರು.

ಅಲ್ಲಿಗೆ ಲವ್ ಜಿಹಾದ್ ಹೆಸರಿನಲ್ಲಿ ಕೋಮುಗಲಭೆ ಸೃಷ್ಟಿಸುವ ಹುನ್ನಾರದೊಂದಿಗೆ ಬಂದಿದ್ದ ಚೆಡ್ಡಿ ಪಟಾಲಂಗೆ ಭಾರೀ ಮುಖಭಂಗವೇ ಆಗಿತ್ತು. ಪುಂಡರ ಗುಂಪಿನ ನಾಯಕ ಚೆಡ್ಡಿ ಸಿ.ಟಿ.ಮಂಜುನಾಥ್ ಮತ್ತಿತರರು ಬಂದ ದಾರಿಗೆ ಸುಂಕವಿಲ್ಲ ಎಂದೇಳಿ ಮಧ್ಯಾಹ್ನದ ಹೊತ್ತಿಗೆ ಅಲ್ಲಿಂದ ಜಾಗ ಖಾಲಿ ಮಾಡಿದರು.

ಮತ್ತೆ ರಾತ್ರಿ ಪ್ರತ್ಯಕ್ಷ

ಬೆಳಗ್ಗೆಯಿಂದ ಸಂಜೆವರೆಗೆ ಸಿ.ಟಿ.ಮಂಜುನಾಥ್, ರವಿಶಂಕರ್ ಪಂಚಾಕ್ಷರಿ ಇವರೆಲ್ಲರ ಆರ್ಭಟ ಮುಗಿದ ನಂತರ ಮತ್ತೆ ರಾತ್ರಿ ಭಜರಂಗದಳದ ಮುಖಂಡ ಎಚ್.ಬಿ.ಮಂಜುನಾಥ್ ಎಂಬಾತ ತನ್ನ ಒಂದಷ್ಟು ಪುಂಡರ ಗುಂಪಿನ ಜೊತೆ ಪ್ರತ್ಯಕ್ಷನಾದ. ಆತ ಕೂಡ "ಈ ಮದುವೆ ಲವ್ ಜಿಹಾದ್ ಆಗಿದೆ. ಹಿಂದೂ ಧರ್ಮದ ಹುಡುಗಿಯನ್ನು ಮುಸ್ಲಿಂ ಧರ್ಮದ ಹುಡುಗ ಬ್ರೈನ್‌ವಾಶ್ ಮಾಡಿಯೇ ಮದುವೆಯಾಗುತ್ತಿದ್ದಾನೆ" ಎಂದು ಬಾಯಿಗೆ ಬಂದಂತೆ ಬೊಗಳು ಶುರುಮಾಡಿದ್ದ. ಸ್ಥಳದಲ್ಲಿ ಸಿಪಿಐ ಪ್ರೀತಂ, ಎಸ್‌ಐಗಳಾದ ಶಿವರುದ್ರ, ಬ್ಯಾಟರಾಯಿಗೌಡ, ಜಯಲಕ್ಷ್ಮಿ ಎಲ್ಲರೂ ಇದ್ದುದ್ದರಿಂದ ಯಾವುದೇ ಗಲಾಟೆ ಆಗಿಲ್ಲ.



ಈ ಮಧ್ಯೆ ಶಕೀಲ್ ಹಾಗೂ ಆಶಿತಾ "ನಾವಿಬ್ಬರೂ ಕಳೆದ ಹಲವು ವರ್ಷಗಳಿಂದ ಪ್ರೀತಿಸುತ್ತಿದ್ದೇವೆ. ನಮ್ಮ ನಡುವೆ ಉತ್ತಮ ಹೊಂದಾಣಿಕೆ ಇದೆ. ಎರಡು ಕುಟುಂಬ ದವರು ನಮ್ಮ ಪ್ರೀತಿಗೆ ಬೆಲೆ ನೀಡಿ ಸಂತೋಷದಿಂದ ಮದುವೆ ಮಾಡುತ್ತಿದ್ದಾರೆ. ಆದರೆ ಕೆಲವು ಸಂಘಟನೆಗಳು ಏಕೆ ಈ ರೀತಿ ಮಾಡುತ್ತಿವೆ ಎಂಬುದು ತಿಳಿಯುತ್ತಿಲ್ಲ. ದಯಮಾಡಿ ನಮ್ಮನ್ನು ಬದುಕಲು ಬಿಡಿ" ಎಂದು ಕೇಳಿಕೊಂಡರು.

ಮಾಧ್ಯಮಗಳಲ್ಲಿ ವಾಸ್ತವ ಬೆಳಕಿಗೆ ಬಂದದ್ದೇ ತಡ ಜನವಾದಿ ಮಹಿಳಾ ಸಂಘಟನೆ, ಕರ್ನಾಟಕ ಜನಶಕ್ತಿ ಸೇರಿದಂತೆ ಹಲವು ಸಂಘಟನೆಗಳ ಮುಖಂಡರು ಶಕೀಲ್ ಮತ್ತು ಆಶಿತಾ ಪರ ನಿಂತಿದ್ದಾರೆ. ಜನರಿಂದ ಸಿಕ್ಕ ಈ ಬೆಂಬಲದಿಂದ ಧೈರ್ಯ ತಂದುಕೊಂಡ ಎರಡೂ ಕುಟುಂಬಗಳು ಪೂರ್ವ ನಿಗದಿಯಂತೆ ಏಪ್ರಿಲ್ 17ರಂದು ಮದುವೆ ನಡೆಸಲು ಸಿದ್ಧತೆಗಳನ್ನು ಮುಂದುವರಿಸಿದ್ದಾರೆ.

ಸುಖಾಸುಮ್ಮನೆ ಲವ್ ಜಿಹಾದ್ ಹೆಸರಿನಲ್ಲಿ ಮಂಡ್ಯದಲ್ಲಿ ಕೋಮುದಳ್ಳುರಿ ಸೃಷ್ಟಿಸಲು ಮುಂದಾದ ಪುಂಡ ಚೆಡ್ಡಿಗಳ ಮೇಲೆ ಜಿಲ್ಲಾಡಳಿತ ಯಾವುದೇ ಕೇಸ್ ಹಾಕಿಲ್ಲ. ಮಾತೆತ್ತಿದರೆ ನಮ್ಮದು ಜಾತ್ಯತೀತ ಜನತಾದಳ ಎಂದೇಳುವ ಜೆಡಿಎಸ್ ನಾಯಕರ್‍ಯಾರು ಇತ್ತ ಸುಳಿಯಲೇ ಇಲ್ಲ. ಜೆಡಿಎಸ್‌ನ ಜಿಲ್ಲಾಧ್ಯಕ್ಷ ಡಿ.ರಮೇಶ್ ಯಾವುದಕ್ಕೂ ಪ್ರಯೋಜನವಿಲ್ಲದ ಆಸಾಮಿ. ಇಂತಹವನ ಅಧ್ಯಕ್ಷತೆಯ ಜೆಡಿಎಸ್ ನಾಯಕರು ಅದೆಲ್ಲಿದ್ದಾರೋ ತಿಳಿಯದಾಗಿದೆ. ಇನ್ನು ಗೆಲುವಿಗಷ್ಟೇ ಮುಸಲ್ಮಾನರನ್ನು ವೋಟ್‌ಬ್ಯಾಂಕ್ ಮಾಡಿಕೊಂಡಿರುವ ಕಾಂಗ್ರೆಸ್ ಪಕ್ಷದವರು ಮುಸ್ಲಿಂ ಧರ್ಮದ ಯುವಕನೊಬ್ಬನ ಮೇಲೆ ಬಿಜೆಪಿ ಕೃಪಾಪೋಷಿತ ಭಜರಂಗದಳ, ವಿಎಚ್‌ಪಿ, ಆರ್‌ಎಸ್‌ಎಸ್ ಮುಖಂಡರು ಅಷ್ಟೆಲ್ಲಾ ಕಿತಾಪತಿ ಮಾಡುತ್ತಿದ್ದರೂ ಗುಮ್ಮನಗುಸಕರಂತೆ ನೋಡಿಕೊಂಡು ಸುಮ್ಮನಿದ್ದಾರೆ. ಕಾಂಗ್ರೆಸ್‌ನ ನಾಯಕರಿಗೆ ಅದೇನು ಮಂಕು ಬಡಿದಿದೆಯೋ ಗೊತ್ತಿಲ್ಲ. ಜಿಲ್ಲಾ ಉಸ್ತುವಾರಿ ಸಚಿವ ಅಂಬರೀಶ್ ಇತ್ತ ಗಮನಹರಿಸಿ ಕೋಮುಗಳ ನಡುವೆ ಕಲಹ ತಂದಿಟ್ಟು ಗಲಭೆ ಎಬ್ಬಿಸುವ ಕೆಲಸ ಮಾಡುತ್ತಿರುವ ಚೆಡ್ಡಿ ಪಟಾಲಂ ಮೇಲೆ ಕೇಸು ಹಾಕಿ ಜೈಲಿಗಟ್ಟುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಿ ಕಿಂಚಿತ್ತಾದರೂ ಉಳಿದಿರುವ ಮರ್ಯಾದೆಯನ್ನು ಉಳಿಸಿಕೊಳ್ಳಬೇಕಿದೆ.

■ ವರದಿಗಾರ




ಆಶಿತಾ ತಾಯಿ ಉಮಾದೇವಿ- ತಂದೆ ನರೇಂದ್ರಬಾಬು ಜೊತೆ...



ಪ್ರತಿಭಟನೆ ಮಾಡುತ್ತಿರುವ ಚೆಡ್ಡಿ ಪಟಾಲಂ....

ಮೈಸೂರು: ದಂಧೆವಾಲ ಸ್ಯಾಂಟ್ರೊ ರವಿಯ ಉಪಟ



ಸ್ಯಾಂಟ್ರೋ ರವಿ; ಸಾಂಸ್ಕೃತಿಕ ನಗರಿ ಮೈಸೂರು ಪಾಲಿಗೆ ಈ ಹೆಸರು ಹೊಲಸು ಸೂತಕವಿದ್ದಂತೆ. ಅಮಾಯಕ ಹೆಣ್ಮಕ್ಕಳನ್ನು ಅಸಹಾಯಕತೆಯ ಅಡಕತ್ತರಿಗೆ ಸಿಲುಕಿಸಿ ಹೈಟೆಕ್ ವೇಶ್ಯಾವಾಟಿಕೆ ದಂಧೆ ನಡೆಸುವ ಇಂತವನು ಹೊಲಸಲ್ಲದೆ ಮತ್ತೇನು. ಪೊಲೀಸ್ ಇಲಾಖೆಯಿಂದ ಘಟಾನುಘಟಿ ಪೊಲಿಟಿಪಿಯನ್‌ಗಳನ್ನು ಪಳಗಿಸಿಟ್ಟು ಕೊಂಡಿರುವ ಸ್ಯಾಂಟ್ರೊ ರವಿಯ ದಂಧೆ ಯಾರಿಗೂ ಕ್ಯಾರೆ ಎನ್ನದೆ ನಡೆಯುತ್ತಿದೆ. ಇಂಥಾ ಸ್ಯಾಂಟ್ರೊ ಕಿರಾತಕನನ್ನು ಮೊನ್ನೆ ಮಾರ್ಚ್ ಇಪ್ಪತ್ತೈದರಂದು ಬೆಂಗಳೂರಿನ ಸಂಜಯನಗರದ ಪೊಲೀಸರು ಎತ್ತಾಕಿಕೊಂಡು ಹೋಗಿದ್ದು ಬಹಳಷ್ಟು ಸುದ್ದಿಯೇ ಆಗಲಿಲ್ಲ, ಯಾಕೆಂದರೆ ಹಾಗೆ ಎತ್ತೊಯ್ದ ಪೊಲೀಸರು ಸಣ್ಣದೊಂದು ಮುಚ್ಚಳಿಕೆ ಬರೆಸಿಕೊಂಡು ಹೀಗೆ ಕಳಿಸಿಬಿಟ್ಟಿದ್ದರು. ಜೈಲಿನಲ್ಲಿ ಹಾಕಿ ಹಿಗ್ಗಾಮುಗ್ಗಾ ಗುಮ್ಮಬೇಕಿದ್ದ ಪಾಪಿಷ್ಟನೊಬ್ಬ ತನ್ನ ಕರಾಳ ಪ್ರಭಾವ ಬಳಸಿ ಸಲೀಸಾಗಿ ಆಚೆ ಬಂದಿದ್ದಾನೆ.

ಅದು ಪೊಲೀಸ್ ಅಧಿಕಾರಿಯ ಮನೆ

ಅಸಲಿಗೆ ಅವತ್ತು ಹೊಯ್ಸಳ ಪೊಲೀಸರು ಸ್ಯಾಂಟ್ರೊ ರವಿಯನ್ನು ಎತ್ತಾಕಿಕೊಂಡ ಹೋದದ್ದು ಮಾಜಿ ಪೊಲೀಸ್ ಅಧಿಕಾರಿಯೊಬ್ಬರ ಮನೆಯಿಂದ. ಆ ಪೊಲೀಸ್ ಅಧಿಕಾರಿಯ ಸೊಸೆ ಲಕ್ಷ್ಮಿ (ಹೆಸರು ಬದಲಿಸಲಾಗಿದೆ) ಎಂಬ ಅಮಾಯಕ ಹೆಂಗಸೊಬ್ಬಳಿಗೆ ಗಂಟುಬಿದ್ದಿದ್ದ ಸ್ಯಾಂಟ್ರೊ ರವಿ ಆಕೆಯ ಮನೆಗೆ ನುಗ್ಗಿ ದಾಂಧಲೆ ನಡೆಸುತ್ತಿದ್ದಾಗಲೇ ಪೊಲೀಸರು ಎತ್ತೊಯ್ದದ್ದು.

ಒಡನಾಡಿ ಸಂಸ್ಥೆಯ ಸ್ಟ್ಯಾನ್ಲಿ ಹಾಗೂ ಪರಶುರವರ ದಿಟ್ಟತನದಿಂದಾಗಿ ಸಾಕಷ್ಟು ಹೆಣ್ಮಕ್ಕಳು ಸ್ಯಾಂಟ್ರೋ ರವಿಯಂತಹ ಪಾಖಂಡಿ ಪಿಂಪುಗಳಿಂದ ಬಚಾವಾಗಿ ತಮ್ಮ ಮಾನ-ಪ್ರಾಣ ಎರಡನ್ನೂ ಉಳಿಸಿಕೊಂಡು ಬದುಕು ಕಟ್ಟಿಕೊಂಡಿದ್ದಾರೆ. ಅಂಥವರ ಪೈಕಿ ಈ ಲಕ್ಷ್ಮಿ ಕೂಡಾ ಒಬ್ಬಳು. ಗೌರಿಬಿದನೂರಿನವಳಾದ ಈ ಲಕ್ಷ್ಮಿಯ ತಾಯಿ ಸಣ್ಣದೊಂದು ಗೂಡಂಗಡಿ ನಡೆಸುತ್ತಾರೆ. ಸ್ಯಾಂಟ್ರೊ ರವಿಯ ದುಷ್ಟ ಕಣ್ಣು ಬಿದ್ದಾಗ ಲಕ್ಷ್ಮಿಗಿನ್ನು ಹದಿನೈದು ವರ್ಷವಷ್ಟೇ. ತನ್ನ ದಂಧೆಗೆ ಬಂಡವಾಳವಾಗಬಲ್ಲ ಅಮಾಯಕ ಹುಡುಗಿಯರನ್ನು ಹುಡುಕಿ ತರಲೆಂದೇ ಸ್ಯಾಂಟ್ರೊ ರವಿ ಒಂದಷ್ಟು ತಲೆಮಾಸಿದ ಹೆಂಗಸರನ್ನು ಅಖಾಡಕ್ಕಿಳಿಸಿದ್ದಾನೆ. ಅಂಥವರ ಪೈಕಿ ಲಾವಣ್ಯ ಎಂಬಾಕೆಯೂ ಒಬ್ಬಳು. ಆಶಾ, ಗೀತಾ ಸೇರಿದಂತೆ ನಾಲ್ಕೈದು ಹೆಸರುಗಳಿಂದ ಕರೆಸಿಕೊಳ್ಳುವ ಆಕೆ ಅದೊಮ್ಮೆ ಲಕ್ಷ್ಮಿಯ ಅಸಹಾಯಕತೆಯನ್ನು ಅಳೆದು ಸ್ಕೆಚ್ಚು ಹಾಕಿದಳು. ಮನೆಯಲ್ಲಿ ಚೂರು ಬಡತನ. ಆಗಷ್ಟೇ ಎಸ್ಸೆಸ್ಸೆಲ್ಸಿ ಮುಗಿಸಿದ್ದ ಲಕ್ಷ್ಮಿಯನ್ನು ಮೈಸೂರಿನಲ್ಲಿ ನರ್ಸಿಂಗ್ ತರಬೇತಿ ಕೊಡಿಸುತ್ತೇನೆಂದು ಪುಸಲಾಯಿಸಿದ ಲಾವಣ್ಯ ಹುಣಸೂರು ರಸ್ತೆಯಲ್ಲಿರುವ 'ಡ್ಯೂ ಡ್ರಾಪ್' ಹೊಟೇಲ್‌ಗೆ ಕರೆತಂದು ಇಪ್ಪತ್ತೈದು ಸಾವಿರ ರೂಪಾಯಿಗೆ ಸ್ಯಾಂಟ್ರೋ ರವಿಗೆ ಮಾರಾಟ ಮಾಡಿದಳು.

ಬದುಕು ನೀಡಿದ ಒಡನಾಡಿ

ಅವತ್ತೇನಾದರು ಒಡನಾಡಿ ಸಂಸ್ಥೆಯ ಸ್ಟ್ಯಾನ್ಲಿ ಮತ್ತು ಪರಶು ಧಾವಿಸಿ ಬರದಿದ್ದರೆ ಲಕ್ಷಾಂತರ ನತದೃಷ್ಟ ಹೆಣ್ಮಕ್ಕಳಂತೆ ಆಕೆಯೂ ದೇಹ ಮಾರಿಕೊಂಡ ಬದುಕುವ ಹೀನಸ್ಥಿತಿಗೆ ಇಳಿಯಬೇಕಿತ್ತು, ಲಕ್ಷ್ಮಿಯನ್ನು ದಂಧೆಯ ಕೂಪಕ್ಕೆ ತಳ್ಳಲು ಸ್ಯಾಂಟ್ರೊ ರವಿ ಸಜ್ಜಾಗಿದ್ದ ಸಮಯದಲ್ಲೇ ಸುಳಿವರಿತ ಸ್ಟ್ಯಾನ್ಲಿ ಮತ್ತು ಪರಶು ಇಲವಾಲ ಪೊಲೀಸರ ಸಮೇತ ರವಿಯ ಕಾರಿನ ಮೇಲೆ ದಾಳಿ ಮಾಡಿದ್ದರು. ದಾಳಿಯ ಸುಳಿವರಿತ ರವಿ ವೇಗವಾಗಿ ಕಾರು ಚಲಾಯಿಸಿಕೊಂಡು ಅಲ್ಲಿಂದ ಪೇರಿ ಕಿತ್ತಿದ್ದ. ಆ ಸಮಯದಲ್ಲಿ ಕಾರು ತಡೆಯಲು ಹೋದ ಸ್ಟ್ಯಾನ್ಲಿಯ ಮೇಲೆ ಕಾರು ಗುದ್ದಿಸಿ ಕೊಲ್ಲುವುದಕ್ಕೂ ರವಿ ಯತ್ನಿಸಿದ್ದ ಆದರೆ ಸ್ವಲ್ಪದರಲ್ಲೇ ಸ್ಟ್ಯಾನ್ಲಿ ಬಚಾವಾಗಿದ್ದರು.

ಹಾಗೆ ರಕ್ಷಿಸಲ್ಪಟ್ಟ ಲಕ್ಷ್ಮಿಯನ್ನು ಶಕ್ತಿಧಾಮದ ಆಶ್ರಯಕ್ಕೆ ಬಿಡಲಾಗಿತ್ತು. ಆದರೆ, ಆಕೆಯ ತಾಯಿಯನ್ನು ಸಂಪರ್ಕಿಸಿದ ರವಿ "ನಿಮ್ಮ ಮಗಳು ಆಪತ್ತಿನಲ್ಲಿದ್ದಾಳೆ. ಅವಳನ್ನು ಪೊಲೀಸರು ಬಂಧಿಸಿದ್ದಾರೆ. ಬಿಡಿಸಬೇಕೆಂದರೆ ಐವತ್ತು ಸಾವಿರ ರೂಪಾಯಿ ಬೇಕು. ಅಷ್ಟು ಹಣ ನನ್ನಲ್ಲಿಲ್ಲ" ಎಂದು ಪೀಡಿಸಿದ್ದ. ಇವನ ಪೇಚಾಟವನ್ನು ನಿಜವೆಂದೇ ನಂಬಿದ ಆ ತಾಯಿ ಆಶ್ರಯ ಮನೆಯ ಪತ್ರವನ್ನು ತಂದು ಕೈಗಿಟ್ಟು ಮಗಳನ್ನು ಬಿಡಿಸಿಕೊಂಡು ಹೋಗಿದ್ದಳು. ಆ ಪತ್ರವನ್ನು ಮುಂದಿಟ್ಟುಕೊಂಡು ಆಟ ಶುರುಮಾಡಿದ ನಸುಗುನ್ನಿ ಸ್ಯಾಂಟ್ರೋ ರವಿ ಮತ್ತೊಮ್ಮೆ ಲಕ್ಷ್ಮಿಯನ್ನು ಕರೆತಂದು ಪಳಗಿಸಲು ನೋಡಿದ್ದ. ಆಗಲೂ ಒಡನಾಡಿ ಸಂಸ್ಥೆ ದಾಳಿಯಿಂದ ಅವಳು ಕಿರಾತಕನ ಕೈಲಿಂದ ತಪ್ಪಿಸಿ ಕೊಂಡಿದ್ದಳು.

ನಂತರ ಈಗ್ಗೆ ಏಳು ವರ್ಷದ ಹಿಂದೆ ಅಂದರೆ, 2009ರಲ್ಲಿ ನಿವೃತ್ತ ಪೊಲೀಸ್ ಅಧಿಕಾರಿಯೊಬ್ಬರ ಮಗನನ್ನು ಮದುವೆಯಾದ ಲಕ್ಷ್ಮಿ ಬೆಂಗಳೂರಿನಲ್ಲಿ ನೆಲೆಸಿದ್ದಳು. ಆಕೆಗೆ ಮುದ್ದಾದ ಎರಡು ಮಕ್ಕಳೂ ಇವೆ. ಜೀವನದುದ್ದಕ್ಕೂ ಕಷ್ಟವನ್ನೇ ಹೊತ್ತು, ನೋವನ್ನೇ ಉಂಡಿರುವ ಆ ಹೆಣ್ಣು ಮಗಳು ಗಂಡನ ಆಸರೆಯಲ್ಲಿ, ಅತ್ತೆ-ಮಾವನ ಆರೈಕೆಯಲ್ಲಿ ತನ್ನ ಬದುಕು ಹಸನಾಯಿತಲ್ಲ ಎಂದು ನಿಟ್ಟುಸಿರು ಬಿಡುವ ವೇಳೆಗೆ ಸ್ಯಾಂಟ್ರೊ ಎಂಬ ಕಿರಾತಕ ಮತ್ತೆ ವಕ್ಕರಿಸಿದ.

ಮದುವೆ ಆಗು ಅಂತ ಗಂಟುಬಿದ್ದ

ಇಲ್ಲಿಗೆ ಸತತ ಮೂರು ವರ್ಷದಿಂದ ಲಕ್ಷ್ಮಿ ಬೆನ್ನಿಗೆ ವಕ್ಕರಿಸಿದ ಸ್ಯಾಂಟ್ರೊ ರವಿ "ನಿನ್ನ ಗಂಡನಿಗೆ ವಿಚ್ಛೇದನ ನೀಡಿ ಬಂದುಬಿಡು, ನಾನು ಮದುವೆಯಾಗುತ್ತೇನೆ. ನಿನ್ನ ಹೆಸರಿನಲ್ಲಿ ಐವತ್ತು ಲಕ್ಷ, ನಿನ್ನ ಇಬ್ಬರು ಮಕ್ಕಳ ಹೆಸರಲ್ಲಿ ತಲಾ ಹತ್ತು ಲಕ್ಷ ಠೇವಣಿ ಇಡುತ್ತೇನೆ. ಐಷಾರಾಮಿ ಬಂಗಲೆಯಲ್ಲಿರಿಸಿ ರಾಣಿಯಂತೆ ಮೆರೆಸುತ್ತೇನೆ. ಓಡಾಡಲು ಕಾರು ಕೊಡಿಸುತ್ತೇನೆ" ಅಂತ ಗಂಟು ಬಿದ್ದ. ಇವನ ಈ ವಿಕೃತ ಬೇಡಿಕೆಗೆ ಲಕ್ಷ್ಮಿ ಕ್ಯಾರೇ ಅನ್ನಲಿಲ್ಲ. ಜಿದ್ದಿಗೆ ಬಿದ್ದ ರವಿ ಕಿರುಕುಳ ಆರಂಭಿಸಿದ. ಗೌರಿಬಿದನೂರಿನಲ್ಲಿ ಗೂಡಂಗಡಿ ನಡೆಸುತ್ತಿರುವ ಅವಳ ತಾಯಿಯ ವಿರುದ್ಧ ಮಸಲತ್ತು ಮಾಡಿ, ಮೈಸೂರಿನ ನಯಾಜ್ ಪಾಷಾ ಎಂಬಾತನ ಮೂಲಕ ಗಾಂಜಾ ಕೇಸು ಹಾಕಿಸಿ ಹದಿನೈದು ದಿವಸ ಜೈಲಿನಲ್ಲಿರುವಂತೆ ಮಾಡಿದ.


ಅಷ್ಟಕ್ಕೇ ಸುಮ್ಮನಾಗದ ಪಾಪಿಷ್ಠ ರವಿ, ಬೆಂಗಳೂರಿನ ವೈಟ್‌ಫೀಲ್ಡ್ ಪೊಲೀಸ್ ಠಾಣೆಯಲ್ಲಿ ಲಕ್ಷ್ಮಿ ವಿರುದ್ಧವೂ ಗಾಂಜಾ ಕೇಸು ದಾಖಲಿಸಿ ಐದು ದಿವಸ ಜೈಲಿನಲ್ಲಿರುವಂತೆ ನೋಡಿಕೊಂಡ. ದುರದೃಷ್ಟವೆಂದರೆ, ಆಕೆ ಆಗ ಹಸಿಹಸಿ ಬಾಣಂತಿ. ಆದರೂ ಲಕ್ಷ್ಮಿ ಅದ್ಯಾವುದಕ್ಕೂ ಕ್ಯಾರೆ ಎನ್ನಲಿಲ್ಲ, ರವಿಯ ಹಿಕ್ಮತ್ತಿಗೆ ಬಗ್ಗಲಿಲ್ಲ, ಆಗ ಸೃಷ್ಟಿಯಾಗಿದ್ದೇ ಅಟ್ರಾಸಿಟಿ ಕೇಸು. ಅದಕ್ಕೆ ನೆರವಾದವನು ಅಖಿಲ ಭಾರತ ಅಂಬೇಡ್ಕರ್ ಕ್ರಾಂತಿದಳದ ಅಧ್ಯಕ್ಷ ರಾಜು. ಅದಕ್ಕೆ ರಾಷ್ಟ್ರಾಧ್ಯಕ್ಷ ಎಂದು ಬೋರ್ಡು ಬರೆಸಿದವನೇ ಈ ಸ್ಯಾಂಟ್ರೋ ರವಿ. ರಾಜು ಸಹಕಾರದಲ್ಲಿ ಸಂಘಟನೆಯ ಲೆಟರ್‌ಹೆಡ್ ಉಪಯೋಗಿಸಿ ಲಕ್ಷ್ಮಿ ಮತ್ತವಳ ಅತ್ತೆ, ಮಾವ, ಗಂಡ, ತಾಯಿ ವಿರುದ್ಧ ಸಂಜಯನಗರ ಠಾಣೆಯಲ್ಲಿ ಎಸ್ಸಿ-ಎಸ್ಟಿ ಕಾಯ್ದೆಯಡಿ ಅಟ್ರಾಸಿಟಿ ಕೇಸು ಅಂಟಿಸಿದ. ಅದು ಸಾಲದೆಂಬಂತೆ ಎಚ್.ಡಿ. ಕೋಟೆ ಪಟ್ಟಣ ಪೊಲೀಸ್ ಠಾಣೆಯಲ್ಲೂ ಅವರ ವಿರುದ್ಧ ಕೇಸು ದಾಖಲಿಸಿದ.


ಅವತ್ತು ಅಂತಹದೇ ಪ್ರಯತ್ನಕ್ಕೆಂದು ಬೆಂಗಳೂರಿನ ಸಂಜಯನಗರದಲ್ಲಿರುವ ಆಕೆಯ ಮನೆಗೆ ನುಗ್ಗಿ ಮನೆಯಲ್ಲಿದ್ದ ಲಕ್ಷ್ಮಿಯ ಅತ್ತೆಯೊಂದಿಗೆ ಅನುಚಿತವಾಗಿ ವರ್ತಿಸಿದ್ದಲ್ಲದೆ ಸೊಸೆಯನ್ನು ಕಳಿಸಿಕೊಡುವಂತೆ ಧಮಕಿ ಹಾಕಿದ್ದ. ಅದೇ ಸಮಯಕ್ಕೆ ಹೊಯ್ಸಳ ಪೊಲೀಸರು ಬಂದು ಆತನನ್ನು ಹೊತ್ತೊಯ್ದು ಮುಚ್ಚಳಿಕೆ ಬರೆಸಿಕೊಂಡು ಕಳಿಸಿದ್ದಾರೆ. ಇವನ ಕಾಟ ಸಹಿಸುವುದು ಅಸಾಧ್ಯ ಎಂದು ಮನವರಿಕೆಯಾಗಿದ್ದರಿಂದ ಮೈಸೂರಿಗೆ ಬಂದ ಲಕ್ಷ್ಮಿ ಒಡನಾಡಿ ಸಂಸ್ಥೆಯ ಸ್ಟ್ಯಾನ್ಲಿ ಮತ್ತು ಪರಶು ಅವರನ್ನು ಸಂಪರ್ಕಿಸಿ ತನ್ನ ಗೋಳು ಹೇಳಿಕೊಂಡು ಕಣ್ಣೀರಾಗಿದ್ದಾಳೆ. ಅವರು ಸೀದಾ ಪೊಲೀಸ್ ಆಯುಕ್ತ ಬಿ.ದಯಾನಂದ್ ಅವರ ಬಳಿ ಕರೆದೊಯ್ದು ದೂರು ಕೊಡಿಸಿದ್ದಾರೆ. ಆಯುಕ್ತರು ಪ್ರಕರಣದ ವಿಚಾರಣೆಯನ್ನು ಸಿಸಿಬಿ ಪೊಲೀಸರಿಗೆ ಒಪ್ಪಿಸಿದ್ದಾರೆ. ಸಿಸಿಬಿ ಎಸಿಪಿ ಗೋಪಾಲ್ ಅವರು ತನಿಖೆ ನಡೆಸಿದ್ದಾರೆ.

ಅದೇನೇ ಇರಲಿ, ಒಬ್ಬ ಅಮಾಯಕ ಹೆಣ್ಣುಮಗಳನ್ನು ಈ ಪರಿ ಕಾಡುತ್ತಿರುವ ಸ್ಯಾಂಟ್ರೋ ರವಿಗೆ ಬುದ್ಧಿ ಕಲಿಸುವವರ್ಯಾರು? ಅವನ ಹೀನ ದಂಧೆಗೆ ಕಡಿವಾಣ ಹಾಕುವವರ್ಯಾರು? ಕೆಲ ರಾಜಕಾರಣಿಗಳು ಹಾಗೂ ಹಿರಿಯ ಪೊಲೀಸ್ ಅಧಿಕಾರಿಗಳೇ ಅವನ ಬೆಂಬಲಕ್ಕಿದ್ದಾರೆ. ಅವನ ಅಮೇಧ್ಯ ತಿಂದು ಅರಗಿಸಿಕೊಳ್ಳಲಾಗದೇ ಹಾಸಿಗೆ ಹಾಸಿಕೊಂಡು ಮಲಗಿಬಿಟ್ಟಿದ್ದಾರೆ. ಬೆಂಗಳೂರಿನ ಶಾಸಕರ ಭವನದ ಕೊಠಡಿಯಲ್ಲಿ ಇವನು ಒಂದಿಷ್ಟು ದಿವಸ ವಾಸ್ತವ್ಯ ಹೂಡಿದ್ದನೆಂದರೆ ರಾಜಕಾರಣಿಗಳ ಕೃಪಾಶೀರ್ವಾದ ಎಷ್ಟಿದೆ ಎಂದು ಅರ್ಥವಾದೀತು! ಈ ಪ್ರಕರಣದಲ್ಲಿ ಸಮಾಧಾನಕರ ಅಂಶವೆಂದರೆ ಲಕ್ಷ್ಮಿಯ ಬೆಂಬಲಕ್ಕೆ ಆಕೆಯ ಮನೆಯವರು ನಿಂತಿದ್ದಾರೆ. ಅದು ಅವರ ಹೃದಯವಂತಿಕೆಯನ್ನು ತೋರಿಸುತ್ತದೆ. ಅದೇ ಹೃದಯವಂತಿಕೆ ಪೊಲೀಸರಿಗೂ ಇದ್ದರೆ ಲಕ್ಷ್ಮಿಯಂತಹ ಸಾವಿರಾರು ಹೆಣ್ಮಕ್ಕಳ ಬದುಕು ಹಸನಾಗಬಹುದಲ್ಲವೇ?

ಸಭ್ಯ ತಂದೆಯ ಹೀನ ಮಗ

ಈ ಸ್ಯಾಂಟ್ರೊ ರವಿ ಮೂಲತಃ ಮಂಡ್ಯ ಜಿಲ್ಲೆಯ ಹೊಳಲು ಗ್ರಾಮದವನು. ಅಬಕಾರಿ ಇಲಾಖೆಯಲ್ಲಿ ಡಿವೈಎಸ್ಪಿಯಾಗಿದ್ದ ಸಿದ್ಧಶೆಟ್ಟಿ ಎಂಬುವವರ ಸುಪುತ್ರ. ಇವನ ಮೂಲ ಹೆಸರು ಕೆ.ಎಸ್.ಮಂಜುನಾಥ. ನಿಜ ಹೇಳಬೇಕೆಂದರೆ ಸಿದ್ಧಶೆಟ್ಟಿ ಸಭ್ಯರು. ಅವರ ಮೊದಲ ಹಾಗೂ ಕೊನೆಯ ಮಕ್ಕಳೂ ಸಭ್ಯರೇ. ಆದರೆ ಎರಡನೇ ಮಗನಾದ ಸ್ಯಾಂಟ್ರೋ ರವಿಯದ್ದೇ ಹೀನ ಸುಳಿ ಮತ್ತು ಹೀನ ಚಾಳಿ. ಚಿಕ್ಕಂದಿನಿಂದಲೇ ಕಲಿಯಬಾರದ ಶೋಕಿ-ಚಟಗಳನ್ನೆಲ್ಲಾ ಕಲಿತ ಈತ, ಸಮಾಜದ ದೃಷ್ಟಿಯಲ್ಲಷ್ಟೇ ಅಲ್ಲ, ಹೆತ್ತವರ ದೃಷ್ಟಿಕೋನದಲ್ಲೂ ಖಳನಾಯಕನಾಗಿ ಹೊರಹೊಮ್ಮಿದ್ದ. ಚಟಭಯಂಕರನ ಕಾಟಕ್ಕೆ ಮನೆಯವರು ತತ್ತರಿಸಿದರು. ಹೆತ್ತಪ್ಪ ಸಿದ್ಧಶೆಟ್ಟಿ ಅದೇ ಕೊರಗಿನಿಂದ ಪ್ರಾಣಬಿಟ್ಟರು. ಉಳಿದವರು ಮಂಡ್ಯದ ಸುಭಾಷ್‌ನಗರದಲ್ಲಿದ್ದ ಮನೆ ಮಾರಿಕೊಂಡು ಬೇರೆ ಕಡೆ ಹೋಗಿ ನೆಲೆಸಿದರು. ಮಂಡ್ಯ ತೊರೆದು ಮೈಸೂರಿಗೆ ಬಂದು ತೊಗಲು ದಂಧೆ ಆರಂಭಿಸಿದ ಸ್ಯಾಂಟ್ರೋ ರವಿಗೆ ಕೆಲವು ಪೊಲೀಸ್ ಅಧಿಕಾರಿಗಳು ಆತ್ಮೀಯರಾದರು. ರಾಜಕಾರಣಿಗಳು ನೆಂಟಸ್ಥಿಕೆ ಬೆಳೆಸಿದರು. ವಾಲೆ ಮಹೇಶ, ಪಲಾವ್ ಮಹದೇವ, ರಘು ಮತ್ತಿತರರು ಸಹಾಯಕ್ಕೆ ನಿಂತರು. ಹುಡುಗಿಯರನ್ನು ಪಟಾಯಿಸಲೆಂದೇ ಕೆಲವು ಸ್ಮಾರ್ಟ್ ಹುಡುಗರಿಗೆ ಬೈಕು ಕೊಡಿಸಿ ಫೀಲ್ಡಿಗಿಳಿಸಿದ ಸ್ಯಾಂಟ್ರೋ ರವಿ, ಆ ಹುಡು ಓಡಿಸಿಕೊಂಡು ಬಂದ ಹುಡುಗಿಯರನ್ನು ಪಳಗಿಸಿ ದಂ ಬಳಸಿದ. ಇದರ ಪರಿಣಾಮ, ಮೈಸೂರು-ಮಂಡ್ಯ ಜಿಲ್ಲೆ ಸಾಕಷ್ಟು ಅಮಾಯಕ ಹೆಣ್ಣುಮಕ್ಕಳು ಕಣ್ಮರೆಯಾಗಿಬಿಟ್ಟ






ಕಸ್ತೂರಿರಂಗನ್ ಮೈಸೂರು ಪೊಲೀಸ್ ಆಯುಕ್ತ ಸಮಯದಲ್ಲಿ, ತನ್ನ ಸಂಬಂಧಿಕರ ಹುಡುಗಿಯೊಬ್ಬ ಕರೆತಂದು ವೇಶ್ಯಾವಾಟಿಕೆ ನಡೆಸಿ ಪೊಲೀಸರ ತಗಲಾಕಿಕೊಂಡ ಸ್ಯಾಂಟ್ರೋ ರವಿ, ನೋಡನೋಡುತ್ತ ಪ್ರವರ್ಧಮಾನಕ್ಕೆ ಬಂದುಬಿಟ್ಟ. ಮಾನವ ಕಳ್ಳ ಸಾಗಾ ವೇಶ್ಯಾವಾಟಿಕೆ ಮತ್ತು ಅತ್ಯಾಚಾರಗಳಂತಹ ಕೇಸು ಅನಾಯಾಸವಾಗಿ ಮೈಗಂಟಿಕೊಂಡವು. ಕುವೆಂಪುನ ಇಲವಾಲ, ವಿಜಯನಗರ, ಲಕ್ಷ್ಮೀಪುರಂ, ವಿದ್ಯಾರಣ್ಯಪು ಸೇರಿದಂತೆ ಮೈಸೂರಿನ ಬಹುತೇಕ ಪೊಲೀಸ್ ಠಾಣೆಗ ಇವನ ವಿರುದ್ಧ ಕೇಸುಗಳು ಜಮೆಯಾಗುತ್ತಲೇ ಬಂದ ನಗರದ ಆಯಕಟ್ಟಿನ ಜಾಗದಲ್ಲಿ, ಪ್ರತಿಷ್ಠಿತ ಬಡಾವಣೆಗ ಐಷಾರಾಮಿ ಬಂಗಲೆಗಳನ್ನು ಬಾಡಿಗೆಗೆ ಹಿಡಿದು ದ ಆರಂಭಿಸಿದ ಸ್ಯಾಂಟ್ರೋ ರವಿ, ಹೋದಲ್ಲೆಲ್ಲಾ ಒಬ್ಬೊಬ್ಬ ಮದುವೆ ಮಾಡಿಕೊಂಡು ಗೃಹಿಣಿ ಗೆಟಪ್ಪಿನಲ್ಲಿ ಮನೆಗಳಲ್ಲಿರಿಸಿದ. ದೂರದ ಮುಂಬೈ, ದೆಹಲಿ, ಕೋ ಮದರಾಸು ಮುಂತಾದ ನಗರಗಳಿಂದ ವಾರದ ಬಾ ಲೆಕ್ಕದಲ್ಲಿ ಹುಡುಗಿಯರನ್ನು ಕರೆತಂದು ಗುಡ್ಡೆ ಹಾ ಗೃಹಿಣಿ ಗೆಟಪ್ಪಿನ ಆ 'ಪತ್ನಿ'ಯರು ಮನೆಗೆ ಬ ಗಿರಾಕಿಗಳಿಗೆ ಕಾಸಿಗೆ ತಕ್ಕ ಕಜ್ಜಾಯದಂತೆ 'ಸೇವೆ' ಕಲ್ಪಿಸಿದ ಅಂತಹ ಪತ್ನಿಯರ ಪೈಕಿ ಚಂದ್ರಿಕಾ, ಮಂಡ್ಯ ಪೂ ಪೊಲೀಸು ಠಾಣೆಯಲ್ಲಿ ತನ್ನ ಗಂಡನ ವಿರುದ್ಧ ದೈಹಿಕ-ಮಾನಸಿಕ ಹಿಂಸೆ, ಕೊಲೆ ಬೆದರಿಕೆ ಹಾಗೂ ಮಗಳ ಅಪಹರಣದಂಥ ಕೇಸು ದಾಖಲಿಸಿದ್ದಳು. ಚಂದ್ರಿಕಾ ಕೊಲೆಯಾಗಿ ಪಾಂಡವಪುರದ ವಿಸಿ ನಾಲೆಯ ಹೆಣವಾಗಿ ತೇಲಿದಳೆಂದು ಸುದ್ದಿಯಾಗಿತ್ತು. ಅ ಹಿಂದೆಯೇ ಅವಳು ಸತ್ತಿಲ್ಲ ಬದುಕಿದ್ದಾಳೆ ಅಂತ ಸುದ್ದಿಯಾಯಿತು. ಅವಳು ಸತ್ತಿಲ್ಲವಾದರೆ, ನಾಲೆಯ ತೇಲಿಬಂದ ಹೆಣ ಯಾರದ್ದು ಎಂಬುದು ಇಂದಿ ನಿಗೂಢವಾಗಿಯೇ ಉಳಿದಿದೆ.

ಅಮೇಧ್ಯ ಬಯಸುವ ಪೊಲೀಸರಿಗೆ ಹೊ ಬರಿಯುವಷ್ಟು 'ಬಿರಿಯಾನಿ' ತಿನ್ನಿಸಿ ಪ್ರತಿ ಠಾಣೆಯ ಒಬ್ಬೊಬ್ಬ ಪೊಲೀಸು ಅಧಿಕಾರಿಯನ್ನು ಋಣದಲ್ಲಿರಿಸಿಕೊಂಡಿರುವ ಸ್ಯಾಂಟ್ರೋ ರವಿ, ಲವಲೇ ಭಯವೂ ಇಲ್ಲದೆ ತೊಗಲು ದಂಧೆ ನಡೆಸುತ್ತಾ ಬಂದಿದ್ದಾ ಇವನ ದಂಧೆಗೆ ಆಯಾ ಏರಿಯಾದ ಪೊಲೀಸರೇ ರಕ್ಷಕ ಆದರೆ ಇವನ ದಂಧೆಗೆ ಎಳ್ಳು-ನೀರು ಬಿಡ ಹಪಾಹಪಿಯಿಂದ ಇವನ ವಿರುದ್ಧ ದಶಕದಿಂದಲ ಹೋರಾಟ ಮಾಡುತ್ತ ಬಂದವರು ಒಡನಾಡಿ ಸೇ ಸಂಸ್ಥೆಯ ನಿರ್ದೇಶಕರಾದ ಕೆ.ವಿ.ಸ್ಟ್ಯಾನ್ಲಿ ಹಾಗ ಎಂ.ಎಲ್.ಪರಶುರಾಮ್.

ಸಿಎಂ ಸಿದ್ದರಾಮಯ್ಯನವರು ತಮ್ಮ ತವರು ಜಿಲ್ಲೆಯ ಹುಲುಸಾಗಿ ಬೆಳೆಯುತ್ತಿರುವ ಈ ಹೊಲಸ ಮಟ್ಟಹಾಕಲು ಪೊಲೀಸರಿಗೆ ಖಡಕ್ಕಾಗಿ ಸೂಚ ನೀಡದಿದ್ದಲ್ಲಿ ಮೈಸೂರಿನ ಹೆಸರಿಗೆ ಮಸಿ ಬೀಳುವು ಗ್ಯಾರಂಟಿ. ಕಡೇಪಕ್ಷ ಆ ಅಮಾಯಕ ಹೆಣ್ಣಗಳು ಲಕ್ಷ್ಮಿ ಬವಣೆ ಬಗೆಹರಿಸುವುದಕ್ಕಾದರೂ ಮೈಸೂರು ಪೊಲೀ ಆಯುಕ್ತ ದಯಾನಂದ್‌ರು ಇವನನ್ನು ತಡವಿಕೊಂಡು ಒದ್ದೆ ಮಾಡಿಸಬೇಕಿದೆ.

■ ಮೋಹನ್ ಮೈಸೂರ



2⇦ ವೈದ್ಯನೂ ಸಂತನೂ

ವ್ಯವಸ್ಥೆಯಲ್ಲಿ ನಂಬಿಕೆಯಿದ್ದರೂ ಸಹ ಒಬ್ಬ ವ್ಯಕ್ತಿಯ ನಿರ್ಧಾರವಾಗಬೇಕಾಗಿರುವುದು ಯೋಗ್ಯತೆಯಿಂದಲೇ ರತು ಜಾತಿಯಿಂದಲ್ಲ ಎಂದಿದ್ದರು (ಆರ್ಯಸಮಾಜದ ವೂ ಅದೇ ಆಗಿತ್ತು). ಅಂಬೇಡ್ಕರ್ ಅಂತಹ ನಿಲುವಿನ ಬದ್ಧತೆಯ ಬಗ್ಗೆ ಪ್ರಶ್ನೆಯೆತ್ತಿದ್ದರು. "ಹುಟ್ಟಿದ ಜಾತಿಯ ರದ ಮೇಲೆಯೆ ಉತ್ತಮ ಸ್ಥಿತಿಯಲ್ಲಿ ಇರುವವರನ್ನು ಗ್ಯತೆಯ ಪ್ರಶ್ನೆಯನ್ನು ಆಚೆಯಿಟ್ಟು ಆ ಉತ್ತಮ ಮನ್ನು ಬಿಟ್ಟುಕೊಡುವಂತೆ ಹೇಗೆ ಮಾಡುತ್ತೀರಿ? ಯಿಂದ ಕೆಳಗಿರುವ ಒಬ್ಬ ವ್ಯಕ್ತಿಯ ಯೋಗ್ಯತೆಯನ್ನು ಪ್ರಶ್ನೆಯನ್ನು ಆಚೆಗಿಟ್ಟು ಗುರುತಿಸುವಂತೆ ಹೇಗೆ ಡಬಲ್ಲಿರಿ?" ಅಂಬೇಡ್ಕರ್ ಇನ್ನೂ ಮುಂದೆ ಹೋಗಿ ಗಸರ ಸ್ಥಿತಿಯನ್ನು ಹೇಗೆ ಅಳೆಯುತ್ತೀರಿ? ಅವರ ಗ್ಯತೆಯ ಮೇಲೋ ಅಥವಾ ಅವರ ಗಂಡನ ಗ್ಯತೆಯ ಮೇಲೋ?" ಎಂದು ಕೇಳಿದ್ದರು.

ಗಾಂಧಿಯ ಅಸ್ಪೃಶ್ಯರ ಬಗೆಗಿನ ಪ್ರೀತಿ ಮತ್ತು ಕಾಳಜಿಯ ಮತ್ತು ಅವರು ಹಾಜರಿದ್ದ ಅಂತರಜಾತಿ ವಿವಾಹಗಳ ಅವರ ಅನುಯಾಯಿಗಳು ಹೇಳಿದ ಕತೆಗಳು ಗಗಳು ಹಲವಿರಬಹುದು. ತೊಂಬತ್ತೆಂಟು ಸಂಪುಟಗಳ ರ ಬರಹಗಳಲ್ಲಿ ಎಲ್ಲೂ ಗಾಂಧಿ ಚತುರ್ವರ್ಣ ಸ್ಥೆಯಲ್ಲಿ ತಮಗಿದ್ದ ಒಲವನ್ನು ಸ್ಪಷ್ಟವಾಗಿ ಮತ್ತು ರ್ಣಯಕವಾಗಿ ನಿರಾಕರಿಸಿಲ್ಲ, ಲೈಂಗಿಕ ಬಯಕೆಗಳನ್ನು ಂತ್ರಿಸುವ ದಿಕ್ಕಿನಲ್ಲಿ ತಾವು ಹೇಗೆ ಆಗಾಗ ಸೋತಿದ್ದಿದೆ ಮು ಆಪ್ತವಾಗಿ ಮತ್ತು ಬಹಿರಂಗವಾಗಿ ಗಾಂಧಿ ತೀವ್ರ ವಿನಿಂದ ಒಪ್ಪಿಕೊಂಡಿದ್ದಿದೆ ಮತ್ತು ಕ್ಷಮೆ ಕೇಳಿದ್ದೂ ಆದರೆ ಜಾತಿಯ ಬಗೆಗಿನ ತಮ್ಮ ನಿಲುವಿನಿಂದ ರುವ ಅನಾಹುತಗಳ ಬಗ್ಗೆ ಗಾಂಧಿಗೆ ನೋವಾದದ್ದು ಯೂ ಇಲ್ಲ.

ಸರಿ, ಗಾಂಧಿಯ ಬಗೆಗಿನ ನೇತ್ಯಾತ್ಮಕ ಅಂಶಗಳನ್ನೇ ಆಡುವ ಬದಲು ಗಾಂಧಿಯ ಜನಪರ ಕಾಳಜಿಗಳ ಯಾಕೆ ಮಾತನಾಡಬಾರದು? ಒಳ್ಳೆಯ ಪ್ರಶ್ನೆಯೇ. ಧಿಗೆ ಗುಡಿಗೋಪುರಗಳನ್ನು ಕಟ್ಟುವವರು ಅದಕ್ಕೆ ರವನ್ನು ತಮ್ಮ ತಮ್ಮಲ್ಲಿಯೆ ಕೊಟ್ಟುಕೊಂಡಿದ್ದಾರೆ. ಕೂ ಕವಿಗಳ, ಲೇಖಕರ, ವಾಸ್ತುಶಿಲ್ಪಿಗಳ, ಸಂಗೀತಗಾರರ, ಗಾರರ ಅಭಿಪ್ರಾಯಗಳು ನಮ್ಮದಕ್ಕೆ ತಾಳೆಯಾಗದಿದ್ದರೂ ಅವರ ಸಾಧನೆಯನ್ನು ಮೆಚ್ಚಿ ಹಾಡಿ ಹೊಗಳುವುದಕ್ಕೆ ದ್ದಿ? ವ್ಯತ್ಯಾಸವಿಷ್ಟೇ, ಗಾಂಧಿ ಬರೀ ಆದ್ದಾವುದೂ ಅತ ನಮಗೆ ಕಾಣಿಸಿಕೊಂಡಿದ್ದು ಒಬ್ಬ ದಾರ್ಶನಿಕನಾಗಿ, ಭಾವಿಯಾಗಿ, ನೀತಿನಿಷ್ಠನಾಗಿ, ಮಹಾ ನವತಾವಾದಿಯಾಗಿ ಮತ್ತು ಮಹಾಸಾಮ್ರಾಜ್ಯವನ್ನು ಮತ್ತು ನೀತಿಯ ಬಲದಿಂದ ಮಣಿಸಿದವನಾಗಿ. ಂಸಾವಾದಿ ಗಾಂಧಿ, ಸಾಮ್ರಾಜ್ಯಶಕ್ತಿಗಳೊಂದಿಗೆ ಸತ್ಯದ ಯಲ್ಲೇ ಮಾತಾಡುತ್ತಿದ್ದ ಗಾಂಧಿ, ಅನ್ಯಾಯವನ್ನು ವತ್ತೂ ಸಹಿಸದ ಗಾಂಧಿ, ಮೃದು ಮನಸ್ಸಿನ ಗಾಂಧಿ, ಹೃದಯದ ಗಾಂಧಿ, ರಾಜಕೀಯವನ್ನು ಸ್ತ್ರೀತ್ವಗೊಳಿಸಿ ಗೆ ರಾಜಕೀಯ ಜಗತ್ತಿನ ಬಾಗಿಲನ್ನು ತೆರೆದ ಗಾಂಧಿ, ರವಾದಿ ಗಾಂಧಿ, ಚಾಟುಮಾತಿನ ಬುದ್ಧಿಮತ್ತೆಯ ಧಿ —— ಈ ಗಾಂಧಿಯನ್ನು ಅವರ ಜಾತಿಪರ ಕೆಗಳಿಗೆ ಮತ್ತು ಆಚರಣೆಗಳಿಗೆ ಹೋಲಿಸಿ ಮಾಡಿಕೊಳ್ಳುವುದಾದರೂ ಹೇಗೆ? ಸಾಂಸ್ಥೀಕರಿಸಿದ ರ ಅನ್ಯಾಯದ ತಳಗಟ್ಟಿನ ಮೇಲೆ ಹಾಯಾಗಿ ರುವ ಈ ನೈತಿಕ ಸದಾಚಾರದ ರಚನೆಯ ಜೊತೆ ಯಾಗುವುದು ಹೇಗೆ? ಗಾಂಧಿಯದು ಅರ್ಥವಾಗದ ರ್ಣ ವ್ಯಕ್ತಿತ್ವ ಎಂದು ಹೇಳಿದರೆ ಆಯಿತೆ? ಗಾಂಧಿ ಅಸಾಧಾರಣ ಮತ್ತು ಆಕರ್ಷಕ ವ್ಯಕ್ತಿ ಎನ್ನುವುದರಲ್ಲಿ ು ಮಾತಿಲ್ಲ, ಆದರೆ ಸ್ವಾತಂತ್ರ್ಯಕ್ಕಾಗಿ ಭಾರತ ನಡೆಸಿದ ರಾಟದಲ್ಲಿ ಗಾಂಧಿ ನಿಜವಾಗಿಯೂ ಸತ್ಯದ ಬಲದ ಶಕ್ತಿಗೆ ಮುಖಾಮುಖಿಯಾದರೆ? ನಿಜವಾಗಿಯೂ ಬಡವರಲ್ಲಿ ಬಡವನ ಮತ್ತು ದುರ್ಬಲರಲ್ಲಿ ದುರ್ಬಲನ ಯಾಗಿ ನಿಂತರೆ?

'ಕಾಂಗ್ರೆಸ್ ಭಾರತದ ಸ್ವಾತಂತ್ರ್ಯಕ್ಕೆ ಹೋರಾಡುತ್ತಿದೆ ಮಾತ್ರಕ್ಕೆ, ಭಾರತದ ಜನರ ಸ್ವಾತಂತ್ರ್ಯಕ್ಕೆ, ಮತ್ತು ಲರಲ್ಲಿ ದುರ್ಬಲರ ಸ್ವಾತಂತ್ರ್ಯಕ್ಕೆ ಹೋರಾಡುತ್ತಿದೆ ಸಮಾಧಾನಪಟ್ಟುಕೊಳ್ಳುವುದು ಮೂರ್ಖತನ" ದು ಅಂಬೇಡ್ಕರ್. "ಕಾಂಗ್ರೆಸ್ ಸ್ವಾತಂತ್ರ್ಯಕ್ಕೆ ಹೋರಾಡುತ್ತಿದೆಯೆ ಇಲ್ಲವೆ ಎನ್ನುವುದು ಮುಖ್ಯವಲ್ಲ, ಯಾರ ಸ್ವಾತಂತ್ರ್ಯಕ್ಕೆ ಹೋರಾಡುತ್ತಿದೆ ಎನ್ನುವುದು ಮುಖ್ಯ."

1931 ರಲ್ಲಿ ಅಂಬೇಡ್ಕರ್ ಗಾಂಧಿಯನ್ನು ಮೊದಲ ಬಾರಿಗೆ ಭೇಟಿ ಮಾಡಿದಾಗ ಕಾಂಗ್ರೆಸ್ ವಿರುದ್ಧ ಇಷ್ಟೊಂದು ಕಟುವಾದ ಟೀಕೆ ಏಕೆ ಎಂದು (ತಾಯ್ನೆಲಕ್ಕೆ ಹೋರಾಟ ಮಾಡುವುದರ ವಿರುದ್ಧ ಟೀಕಿಸುವುದು ಸರಿಯೆ ಎಂಬರ್ಥದಲ್ಲಿ) ಕೇಳಿದರಂತೆ. "ಗಾಂಧೀಜಿ, ನನಗೆ ತಾಯ್ನೆಲವೆಂಬುದೇ ಇಲ್ಲ" ಎನ್ನುವುದು ಅಂಬೇಡ್ಕರರ ಸುಪ್ರಸಿದ್ಧ ಉತ್ತರವಾಗಿತ್ತು, "ತನ್ನ ಸ್ಥಿತಿಯ ಅರಿವಿರುವ ಯಾವ ಅಸ್ಪೃಶ್ಯನೂ ಇಂಥ ತಾಯ್ನೆಲದ ಬಗ್ಗೆ ಹೆಮ್ಮೆಪಡಲಾರ."

ಇತಿಹಾಸ ಅಂಬೇಡ್ಕರರಿಗೆ ಇನ್ನಿಲ್ಲದಂತೆ ಅನ್ಯಾಯ ಮಾಡಿದೆ. ಮೊದಲು ಅವರನ್ನು ಅಡಗಿಸುವ ಮೂಲಕ ಮತ್ತು ನಂತರ ವೈಭವೀಕರಿಸುವ ಮೂಲಕ. ಅದು ಅವರನ್ನು ಅಸ್ಪೃಶ್ಯರ ನಾಯಕನನ್ನಾಗಿ ಮಾಡಿ ಅವರಿಗೆ ಕೇರಿಯ ರಾಜನ ಪಟ್ಟ ಕಟ್ಟಿದೆ. ಇತಿಹಾಸ ಅವರ ಬರಹಗಳನ್ನು ಮರೆಯಾಗಿಸಿ ಅವರ ಪ್ರಖರವಾದ ಬುದ್ಧಿಮತ್ತೆಯನ್ನು, ಚುರ್ರೆನ್ನಿಸುವ ಸ್ವಾಭಿಮಾನವನ್ನು ಕಳಚಿ ನಿಲ್ಲಿಸಿದೆ.

ಆದರೂ ಅಂಬೇಡ್ಕರರ ಪರಂಪರೆಯನ್ನು ಅವರ ಬೆಂಬಲಿಗರು ಹಲವಾರು ಸೃಜನಶೀಲ ರೀತಿಗಳಲ್ಲಿ ಜೀವಂತವಾಗಿಟ್ಟಿದ್ದಾರೆ. ರಾಶಿಗಟ್ಟಲೆ ಉತ್ಪಾದಿಸಿದ ಅಂಬೇಡ್ಕರರ ಪ್ರತಿಮೆ ಅದರ ಒಂದು ರೀತಿ. ಆ ಪ್ರತಿಮೆ ಒಂದು ಸಜೀವ ಕ್ರಾಂತಿಯ ಸ್ವರೂಪ. ದಲಿತರಿಗೆ ಭೌತಿಕ ಮತ್ತು ವಾಸ್ತವದ ನೆಲೆಯಲ್ಲಿ ಹಾಗೂ ವೈಯಕ್ತಿಕ ಮತ್ತು ಸಾರ್ವಜನಿಕ ನೆಲೆಯಲ್ಲಿ ನ್ಯಾಯವಾಗಿ ಸಿಗಬೇಕಾದ ಸ್ಥಾನವನ್ನು ಹಕ್ಕಿನಿಂದ ಪಡೆದುಕೊಳ್ಳುವಂತೆ ಹುರಿದುಂಬಿಸುವ ರೂಪವೇ ಈ ಪ್ರತಿಮೆ. ತಮ್ಮ ಹಕ್ಕಿನ ನೀರು, ಭೂಮಿ ಮತ್ತಿತರ



There is much opposition to Dr. Ambedkar's Hindu Code Bill.

ನಾಗರಿಕ ಸೌಕರ್ಯಗಳನ್ನು ಪಡೆದುಕೊಳ್ಳುವ ಹೋರಾಟದಲ್ಲಿ ದಲಿತರು ಅಂಬೇಡ್ಕರರ ಪ್ರತಿಮೆಯನ್ನು ಬಳಸಿಕೊಂಡಿದ್ದಾರೆ. ಸಾರ್ವಜನಿಕ ಸ್ಥಳಗಳಲ್ಲಿ ಪ್ರತಿಷ್ಠಾಪಿಸಿದ ಮತ್ತು ಸಂಘಟನಾ ಪ್ರಯತ್ನಗಳಲ್ಲಿ ಕಾಣಸಿಗುವ ಪ್ರತಿಮೆಯಲ್ಲಿ ಅಂಬೇಡ್ಕರರ ಕೈಯಲ್ಲಿ ಯಾವಾಗಲೂ ಒಂದು ಪುಸ್ತಕವಿರುತ್ತದೆ. ಅರ್ಥಗರ್ಭಿತವಾಗಿಯೇ, ಆ ಪುಸ್ತಕ ಕ್ರಾಂತಿಕಾರಿ ಕ್ರೋಧದ ಅಥವಾ ಬಿಡುಗಡೆಯನ್ನು ಬಯಸುವ 'ಜಾತಿವಿನಾಶ'ವಂತೂ ಅಲ್ಲ, ಬದಲಾಗಿ ಯಾವ ಸಂವಿಧಾನವನ್ನು ಗ್ರಹಿಸುವ, ಅರ್ಥೈಸುವ ಮತ್ತು ರೂಪಿಸುವ ಪ್ರಯತ್ನದಲ್ಲಿ ಅಂಬೇಡ್ಕರ್ ಮಹತ್ವದ ಪಾತ್ರವನ್ನು ವಹಿಸಿದರೋ ಆ ಸಂವಿಧಾನದ ಪ್ರತಿಯೇ ಅದು. ಒಳ್ಳೆಯದಕ್ಕೋ, ಕೆಟ್ಟದ್ದಕ್ಕೋ, ಅದೇ ಸಂವಿಧಾನ ಇಂದು ಪ್ರತಿಯೊಬ್ಬ ಭಾರತೀಯ ಪ್ರಜೆಯ ಬದುಕನ್ನು ರೂಪಿಸಿ ಆಳುತ್ತಿದೆ.

ಸಂವಿಧಾನವನ್ನೇ ಒಂದು ವಿದ್ರೋಹಿ ಸಾಧನವಾಗಿ ಬಳಸುವುದು ಬೇರೆ. ಅದರಿಂದ ನಿಯಂತ್ರಿಸಲ್ಪಡುವುದೇ ಬೇರೆ. ಅಂಬೇಡ್ಕರರ ಸ್ಥಿತಿಗತಿಗಳು ಅವರನ್ನು ಕ್ರಾಂತಿಕಾರಿಯನ್ನಾಗಿ ಮಾಡುವ ಜೊತೆಯೇ ಅವಕಾಶ ಸಿಕ್ಕಾಗೆಲ್ಲಾ ವ್ಯವಸ್ಥೆಯ ಹೊಸಿಲನ್ನೂ ಮೆಟ್ಟುವಂತೆ ಮಾಡಿತು. ಅವರ ಅಗಾಧ ಪ್ರತಿಭೆಯಿದ್ದದ್ದೇ ಅವೆರಡನ್ನೂ ಚಾಣಾಕ್ಷತನದಿಂದ ಪರಿಣಾಮಕಾರಿಯಾಗಿ ಬಳಸಿಕೊಳ್ಳುವಲ್ಲಿ. ವರ್ತಮಾನದ ಮಸೂರದಿಂದ ನೋಡಿದಾಗ ದಾರಿ ತಪ್ಪಿಸಬಲ್ಲ ಶಕ್ತಿಯಿದ್ದ ದ್ವಂದ್ವವೊಂದು ಗೋಚರಿಸುತ್ತದೆ. ಕ್ರಾಂತಿಕಾರಿ ಅಂಬೇಡ್ಕರ್ ಮತ್ತು ಸಂವಿಧಾನಶಿಲ್ಪಿ ಅಂಬೇಡ್ಕರ್. ಸಂವಿಧಾನೀಯತೆಯೇ ಕ್ರಾಂತಿಯ ದಾರಿಗೆ ಅಡ್ಡ ಬರಬಹುದಲ್ಲ? ಅದಕ್ಕೇ ಏನೋ, ದಲಿತ ಕ್ರಾಂತಿ ಇನ್ನೂ ನಡೆದೇ ಇಲ್ಲ, ಕಾಯುತ್ತಲೇ ಇದ್ದೇವೆ. ಅದಕ್ಕೂ ಮುಂಚೆ ಯಾವ ಕ್ರಾಂತಿಯೂ, ಭಾರತದ ಮಟ್ಟಿಗೆ, ನಡೆಯುವ ಸಾಧ್ಯತೆಯೇ ಇಲ್ಲ.

ಹಾಗಂತ ಸಂವಿಧಾನವನ್ನು ರೂಪಿಸುವುದು ಕ್ರಾಂತಿಕಾರಿ ಕ್ರಿಯೆ ಆಗಬಾರದು ಎಂದೇನಿಲ್ಲ, ಆಗಬಹುದು. ಆಗಬಹುದಿತ್ತು ಅಂಬೇಡ್ಕರ್ ಆಗಿಸಲೂ ತಮ್ಮ ಕೈಲಾದಷ್ಟು



ಪ್ರಯತ್ನಿಸಿದರು. ಅವರೇ ಒಪ್ಪಿಕೊಂಡಿರುವಂತೆ ಪೂರ್ತಿಯಾಗಿ ಯಶಸ್ವಿಯಾಗಲಿಲ್ಲ.

ಭಾರತ ಸ್ವಾತಂತ್ರ್ಯದ ಕಡೆಗೆ ಚಿಮ್ಮಿದಾಗ ಅಂಬೇಡ್ಕರ್ ಮತ್ತು ಗಾಂಧಿ ಇಬ್ಬರೂ ಅಲ್ಪಸಂಖ್ಯಾತರ, ಅದರಲ್ಲೂ ಮುಸ್ಲಿಮ್ ಮತ್ತು ಅಸ್ಪೃಶ್ಯರ ಭವಿಷ್ಯದ ಬಗ್ಗೆ ತೀವ್ರ ಕಾಳಜಿಯನ್ನು ಹೊಂದಿದ್ದರು. ಆದರೂ ಹೊಸ ರಾಷ್ಟ್ರದ ಹುಟ್ಟಿಗೆ ಇಬ್ಬರೂ ಭಿನ್ನವಾಗಿಯೇ ಪ್ರತಿಕ್ರಿಯಿಸಿದರು. ಗಾಂಧಿ ರಾಷ್ಟ್ರವನ್ನು ಕಟ್ಟುವ ಕ್ರಿಯೆಯಿಂದ ಹೆಚ್ಚು ಹೆಚ್ಚು ದೂರದಲ್ಲಿ ಉಳಿದರು. ಅವರ ಪ್ರಕಾರ ಕಾಂಗ್ರೆಸ್ಸಿನ ಹೊಣೆ ಮುಗಿದಿತ್ತು, ಪಕ್ಷವೇ ವಿಸರ್ಜನೆಯಾಗಬೇಕಿತ್ತು, ಅವರು ಸರಿಯಾಗಿಯೇ ಗ್ರಹಿಸಿದಂತೆ ಪ್ರಭುತ್ವವೆನ್ನುವುದು ಅ-ಮಾನವೀಯವಾದ, ಆತ್ಮವಿಲ್ಲದ ಒಂದು ವ್ಯವಸ್ಥೆ, ಅದು ರೂಪ ಪಡೆದುಕೊಳ್ಳುವುದೇ ಹಿಂಸೆಯ ಮೂಲಕವಾದ್ದರಿಂದ ಅದು ಸಾವಯವಗೊಳಿಸಿದ ಮತ್ತು ಸಾಂದ್ರೀಕರಿಸಿದ ಹಿಂಸೆಯನ್ನೇ ಪ್ರತಿನಿಧಿಸುತ್ತದೆ. ಗಾಂಧಿಯ ಪ್ರಕಾರ ಸ್ವರಾಜ್ಯವೆನ್ನುವುದು ನಮ್ಮ ನೈತಿಕ ಹೃದಯದ ಆಳದಲ್ಲಿ ಇರುವಂತದ್ದು, 'ನಾವು' ಎಂದರೆ ಬರೀ ಬಹುಸಂಖ್ಯಾತ ಸಮುದಾಯವಲ್ಲ ಎಂದು ಗಾಂಧಿ ಸ್ಪಷ್ಟಪಡಿಸಿದ್ದರು:


"ಸ್ವರಾಜ್ಯ ಎಂದರೆ ಭಾರತದ ಬಹುಸಂಖ್ಯಾತ ಸಮುದಾಯದ ಅಂದರೆ ಹಿಂದೂಗಳ ಆಳ್ವಿಕೆ ಎಂಬ ಭಾವನೆ ಇದ್ದಂತಿದೆ. ಅದಕ್ಕಿಂತ ದೊಡ್ಡ ತಪ್ಪು ಇನ್ನೊಂದಿರಲಾರದು. ಅದು ನಿಜವೇ ಆದಲ್ಲಿ ನಮ್ಮದು ಸ್ವರಾಜ್ಯ ಎಂದು ಕರೆಯಲು ನಾನು ಸಿದ್ಧನಿಲ್ಲ, ಅಷ್ಟೇ ಅಲ್ಲ, ಅದರ ವಿರುದ್ಧ ಹೋರಾಡುವುದಕ್ಕೆ ನನ್ನ ಇಂತಿಷ್ಟೂ ಸಾಮರ್ಥ್ಯವನ್ನು ಬಳಸಿಕೊಳ್ಳುತ್ತೇನೆ. ನನ್ನ ಪ್ರಕಾರ ಹಿಂದ್ ಸ್ವರಾಜ್ ಎಂದರೆ ಎಲ್ಲ ಜನರ ಆಳ್ವಿಕೆ, ನ್ಯಾಯದ ಆಳ್ವಿಕೆ."

ಅಂಬೇಡ್ಕರರಿಗೆ 'ಜನ' ಎನ್ನುವುದು ಸಹಜವಾದ ಸದಾಚಾರದ ಬೆಳಕಿನಲ್ಲಿ ಹೊಳೆಯುವ ಏಕರೂಪದ ವರ್ಗವಲ್ಲ, ಗಾಂಧಿ ಏನೇ ಹೇಳಿದರೂ ಸ್ವರಾಜ್ಯವೆಂಬ ಪರಿಕಲ್ಪನೆ ಕೊನೆಗೂ ಬಹುಸಂಖ್ಯಾತ ಸಮುದಾಯದ ಮೂಗಿನ ನೇರಕ್ಕೇ ಬಾಗುತ್ತದೆ ಎನ್ನುವುದು ಅಂಬೇಡ್ಕರರಿಗೆ ಚೆನ್ನಾಗಿ ಗೊತ್ತಿತ್ತು, ಈ ದೇಶದ ಅಸ್ಪೃಶ್ಯರು ಬಹುಸಂಖ್ಯಾತ ಹಿಂದೂ ಮಂದಿಯ 'ನೈತಿಕಹೃದಯ'ದ ಕೃಪೆಯಲ್ಲಿ ಬದುಕಬೇಕಾಗುತ್ತದೆ ಎಂಬ ಪ್ರತೀಕ್ಷೆಯೇ ಅವರನ್ನು ಆಳವಾದ ಚಿಂತೆಗೆ ಗುರಿ ಮಾಡಿತ್ತು, ಆ ತಲ್ಲಣ ಮತ್ತು ತಹತಹದಲ್ಲಿ ಅಂಬೇಡ್ಕರ್ ಸಾಂವಿಧಾನಿಕ ಶಾಸನ ಸಭೆಯ ಸದಸ್ಯರಾಗಲು ಏನೆಲ್ಲಾ ಉಪಾಯವನ್ನು ಮಾಡುವ ಸ್ಥಿತಿಯನ್ನೂ ತಲುಪಿದ್ದರು. ಸದಸ್ಯರಾದರೆ ಮಾತ್ರ ಆಗತಾನೆ ಆವಿರ್ಭವಿಸುತ್ತಿದ್ದ ರಾಷ್ಟ್ರದ ಸಂವಿಧಾನದ ಚೇತನವನ್ನು ನಿಜವಾದ ಮತ್ತು ಕಾರ್ಯರೂಪದ ವಿಧಾನಗಳಲ್ಲಿ ರೂಪಿಸುವುದು ಸಾಧ್ಯವಿತ್ತು? ಅದಕ್ಕೋಸ್ಕರ ತನ್ನ ಸ್ವಾಭಿಮಾನವನ್ನೂ ತನ್ನ ಹಳೆಯ ವೈರಿಯಾದ ಕಾಂಗ್ರೆಸ್ ಬಗ್ಗೆ ಇದ್ದ ಸಂಶಯವನ್ನೂ ಬದಿಗೊತ್ತಿ ಕೆಲಸ ಮಾಡಲು ತಯಾರಿದ್ದರು.

ಅಂಬೇಡ್ಕರರ ಮುಖ್ಯ ಕಾಳಜಿ ಇದ್ದದ್ದು ಜಾತಿಪದ್ಧತಿಯ ಸಾಮಾಜಿಕ ನೈತಿಕತೆಗಿಂತ 'ಸಾಂವಿಧಾನಿಕ ನೈತಿಕತೆ'ಯನ್ನು ಎತ್ತಿ ಹಿಡಿದು ಅದನ್ನು ಕಾನೂನುಬದ್ಧಗೊಳಿಸುವ ಕಡೆಗೆ. 1946 ರ ಡಿಸೆಂಬರ್ 17 ರಂದು ನಡೆದ ಸಾಂವಿಧಾನಿಕ ಶಾಸನ ಸಭೆಯಲ್ಲಿ ಅವರು ಹೀಗೆ ಹೇಳಿದರು: "ಸಾಂವಿಧಾನಿಕ ನೈತಿಕತೆ ಎನ್ನುವುದು ಸಹಜವಾಗಿ ಬರುವಂಥದ್ದಲ್ಲ, ಅದನ್ನು ಪ್ರಜ್ಞಾಪೂರ್ವಕವಾಗಿ ಬೆಳೆಸಬೇಕು. ನಮ್ಮ ಜನರು ಅದನ್ನಿನ್ನೂ ಕಲಿಯಬೇಕಿದೆ. ಸಮಾನತೆಯನ್ನು ಎತ್ತಿ ಹಿಡಿಯುವ ಪ್ರಜಾಪ್ರಭುತ್ವವೆಂಬ ಪರಿಕಲ್ಪನೆ ಅಂತಃಸತ್ವದಲ್ಲಿ ಮಹಾ ಪ್ರಜಾಪ್ರಭುತ್ವವಿರೋಧಿಯಾದ ಭಾರತದ ಮೇಲ್ಪದರದ ಸಿಂಗರಿಕೆ ಅಷ್ಟೇ."

ಅಂಬೇಡ್ಕರರಿಗೆ ಸಂವಿಧಾನದ ಅಂತಿಮ ಕರಡಿನ ಬಗ್ಗೆ ಮಹಾ ಅಸಮಾಧಾನವಿತ್ತು, ಆದರೂ ಸಹ ಅಧೀನ ಜಾತಿಗಳಿಗೆ ಸಂಬಂಧಪಟ್ಟಂತೆ ಕೆಲವು ಹಕ್ಕು ಮತ್ತು ರಕ್ಷಣೋಪಾಯಗಳನ್ನು ಸಂವಿಧಾನದಲ್ಲಿ ಸೇರಿಸುವಲ್ಲಿ ಮತ್ತು ಯಾವ ಸಮುದಾಯಕ್ಕೆ ಆ ದಾಖಲೆಯನ್ನು ರೂಪಿಸುವ ಹೊಣೆಯನ್ನು ಹೊತ್ತಿದ್ದರೋ ಆ ಸಮುದಾಯದ ಪ್ರಬುದ್ಧತೆಯನ್ನು ಮೀರಿದ ದಾಖಲೆಯನ್ನು ನಿರ್ಮಿಸುವಲ್ಲಿ ಯಶಸ್ವಿಯಾಗಿದ್ದರು. (ಆದಿವಾಸಿಗಳಂತ ಜನರಿಗೆ ಈ ಸಂವಿಧಾನವೂ ವಸಾಹತುಶಾಹಿ ಆಚರಣೆಯ ವಿಸ್ತೃತ ರೂಪವಾಗಿತ್ತು ಅಷ್ಟೇ. ಆ ವಿಷಯಕ್ಕೆ ನಂತರ ಬರೋಣ.) ಅಂಬೇಡ್ಕರರಿಗೆ ಸಂವಿಧಾನವೆನ್ನುವುದು ಪೂರ್ತಿಯಾಗಿ ಸಿದ್ಧಗೊಳಿಸಿದ ಪಠ್ಯವಾಗಿರಲಿಲ್ಲ, ಬದಲಾಗಿ ಪ್ರಗತಿಯಲ್ಲಿರುವ ಕೆಲಸವಾಗಿತ್ತು, ಥಾಮಸ್ ಜೆಫರ್ಸನ್‌ರಂತೆ ಅಂಬೇಡ್ಕರ್ ಸಹ ಪ್ರತಿಯೊಂದು ಪೀಳಿಗೆಯೂ ತನ್ನ ಸಂವಿಧಾನವನ್ನು ರೂಪಿಸಿಕೊಳ್ಳದಿದ್ದರೆ ಈ ಭೂಮಿ "ಬದುಕಿರುವವರಿಗಿಂತಲೂ ಸತ್ತವರಿಗೇ ಹೆಚ್ಚು ಸೇರಿರುತ್ತದೆ" ಎಂದಿದ್ದರು. ಆದರೆ ಬದುಕಿರುವವರು ಸತ್ತವರಿಗಿಂತಲೂ ಪ್ರಗತಿಪರರು ಮತ್ತು ಪ್ರಬುದ್ಧರು ಅಂತೇನೂ ಇಲ್ಲವಲ್ಲ? ಇಂದು ಸಂವಿಧಾನವನ್ನು ತಿರೋಗಾಮಿಯಾಗಿ ಪುನರೂಪಿಸುವ ಪ್ರಯತ್ನಗಳನ್ನು ಮಾಡುತ್ತಿರುವ ಹಲವಾರು ರಾಜಕೀಯ ಮತ್ತು ವಾಣಿಜ್ಯ ಶಕ್ತಿಗಳನ್ನು ನಮ್ಮ ಕಣ್ಣೆದುರಿಗೆ ಕಾಣುತ್ತಿದ್ದೇವೆ.

ಅಂಬೇಡ್ಕರ್ ವಕೀಲರಾಗಿದ್ದರೂ ಕಾನೂನು ಮಾಡುವ ಬಗ್ಗೆ ಅವರಿಗೆ ಯಾವ ಭ್ರಮೆಗಳೂ ಇರಲಿಲ್ಲ, ಸ್ವತಂತ್ರ ಭಾರತದ ಕಾನೂನುಮಂತ್ರಿಯಾಗಿ ಅವರು ಹಿಂದೂ ಸಂಹಿತೆ ಮಸೂದೆಯ ಕರಡನ್ನು ತಯಾರಿಸುವುದಕ್ಕೆ ತಿಂಗಳುಗಟ್ಟಲೆ ಕೆಲಸ ಮಾಡಿದ್ದರು. ಅಂಬೇಡ್ಕರರ ಪ್ರಕಾರ ಜಾತಿಪದ್ಧತಿ ತನ್ನ ಅಸ್ತಿತ್ವವನ್ನು ಉಳಿಸಿ ಬೆಳೆಸಿಕೊಳ್ಳುವುದು ಹೆಣ್ಣನ್ನು ನಿಯಂತ್ರಿಸುವ ಮೂಲಕವೇ. ಹಾಗಾಗಿ ಹಿಂದೂ ವೈಯಕ್ತಿಕ ಕಾನೂನನ್ನು ಹೆಣ್ಣಿಗೆ ನ್ಯಾಯಸಮ್ಮತವಾಗುವಂತೆ ರೂಪಿಸುವುದು ಅವರ ಪ್ರಮುಖ ಕಾಳಜಿಗಳಲ್ಲಿ ಒಂದಾಗಿತ್ತು, ಅವರು ಪ್ರಸ್ತಾಪಿಸಿದ ಮಸೂದೆಯಲ್ಲಿ ವಿವಾಹ ವಿಚ್ಛೇದನಕ್ಕೆ ಮತ್ತು ಮಗಳು ಹಾಗೂ ವಿಧವೆಗೆ ಆಸ್ತಿಯ ಹಕ್ಕು ಇತ್ತು, ಸಾಂವಿಧಾನಿಕ ಶಾಸನಸಭೆ ಅದರ ಬಗ್ಗೆ ನಾಲ್ಕು ವರುಷಗಳಷ್ಟು ಕಾಲ (1947 ರಿಂದ 1951ರ ತನಕ) ಕಾಲೆಳೆಯುತ್ತಾ ಕೊನೆಗೆ ಅದನ್ನು ನಿರೋಧಿಸಿತು. ಅಧ್ಯಕ್ಷ ರಾಜೇಂದ್ರ ಪ್ರಸಾದರು ಮಸೂದೆ ಕಾನೂನಾಗಲು ತಾವೆಂದೂ ಆಸ್ಪದ ಕೊಡುವುದಿಲ್ಲವೆಂದು ಬೆದರಿಸಿದರು. ಹಿಂದೂ ಸಾಧುಗಳು ಪಾರ್ಲಿಮೆಂಟಿಗೆ ಮುತ್ತಿಗೆ ಹಾಕಿದರು. ಕೈಗಾರಿಕೋದ್ಯಮಿಗಳು ಮತ್ತು ಜಮೀನುದಾರರು ಮುಂಬರುವ ಚುನಾವಣೆಯಲ್ಲಿ ತಮ್ಮ ಬೆಂಬಲವನ್ನು ಹಿಂತೆಗೆದುಕೊಳ್ಳುತ್ತೇವೆಂಬ ಬೆದರಿಕೆಯನ್ನು ಹಾಕಿದರು. ಕೊನೆಗೆ ಅಂಬೇಡ್ಕರ್ ಕಾನೂನು ಮಂತ್ರಿಯ ಸ್ಥಾನಕ್ಕೆ ರಾಜೀನಾಮೆ ನೀಡಬೇಕಾಯಿತು. ತಮ್ಮ ರಾಜೀನಾಮೆ ಭಾಷಣದಲ್ಲಿ ಅವರು "ಹಿಂದೂ ಸಮಾಜದ ಆತ್ಮವೇ ಆದ ವರ್ಗಗಳ ನಡುವಿನ ಮತ್ತು ಲಿಂಗಗಳ ನಡುವಿನ ಅಸಮಾನತೆಯನ್ನು ಉದ್ದೇಶಿಸುವುದನ್ನು ಬಿಟ್ಟು ಆರ್ಥಿಕ ಸಮಸ್ಯೆಗಳಿಗೆ ಸಂಬಂಧಪಟ್ಟಂತೆ ಮಾತ್ರ ಒಂದಾದ ಮೇಲೊಂದರಂತೆ ಕಾಯಿದೆಗಳನ್ನು ಜಾರಿ ಮಾಡುತ್ತಾ ಹೋಗುವುದು ಸಂವಿಧಾನವನ್ನೇ ಗೇಲಿ ಮಾಡುವುದಷ್ಟೇ ಅಲ್ಲ, ಸಗಣಿ ರಾಶಿಯ ಮೇಲೆ ಅರಮನೆಯನ್ನು ಕಟ್ಟುವ ಪ್ರಯತ್ನವೂ ಹೌದು" ಎಂದಿದ್ದರು.



ಎಲ್ಲಕ್ಕಿಂತ ಹೆಚ್ಚಾಗಿ, ಅಂಬೇಡ್ಕರ್ ಮಾಡಿದ್ದು ಸಾಕಷ್ಟು ಪಂಥೀಯ ಮನೋಭಾವ, ಪ್ರಗತಿ- ವಿರೋಧಿ ಧೋರಣೆ ಮತ್ತು ವಂಚನೆಗಳು ತುಂಬಿದ್ದ ಸಂಕೀರ್ಣವಾದ ಬಹುಮುಖ ರಾಜಕೀಯ ಹೋರಾಟಕ್ಕೆ ಬುದ್ಧಿಸೂಕ್ಷ್ಮತೆಯನ್ನೂ ಅರಿವನ್ನೂ ತಂದಿದ್ದು.

ಇಂಗ್ಲಿಷ್ ಮೂಲ: ಅರುಂಧತಿ ರಾಯ್
ಕನ್ನಡಕ್ಕೆ : ಸುಕನ್ಯಾ ಕನಾರಳ್ಳಿ

ಮತ್ತೆ ವಕ್ಕರಿಸಿದ ಪೀಡೆ

ಸಿದ್ದು ನೇತೃತ್ವದ ಕಾಂಗ್ರೆಸ್ ಸರ್ಕಾರದ ಬಹುತೇಕ ಮಂತ್ರಿಗಳೆಲ್ಲ ಭ್ರಷ್ಟಾಚಾರದಲ್ಲಿ ಮುಳುಗಿದ್ದಾರೆಂದು ಇತ್ತೀಚೆಗಷ್ಟೇ ಆರೋಪಿಸಿದ್ದು ರಾಜ್ಯ ಬಿಜೆಪಿಯ ನಿರ್ಗಮಿತ ಅಧ್ಯಕ್ಷ ಪ್ರಹ್ಲಾದ್ ಜೋಷಿ. ಇದೇ ಬಿಜೆಪಿಯ ವಿರೋಧಿ ನಾಯಕ ಶೆಟ್ಟರ್ ಮೊನ್ನೆಯಷ್ಟೇ ವಿಧಾನಮಂಡಲದ ಅಧಿವೇಶನದಲ್ಲಿ ಮುಖ್ಯಮಂತ್ರಿ ಸಿದ್ದು ನೇತೃತ್ವದ ಸರ್ಕಾರದ ಭ್ರಷ್ಟಾಚಾರ ಬಿಟ್ಟರೆ ಬೇರೇನೂ ಮಾಡುತ್ತಿಲ್ಲ ಎಂದೇ ಬೊಬ್ಬೆಯಿಟ್ಟರು ತಾನೆ? ವೀರಾಗ್ರೇಸರ ಸೀಟಿ ರವಿಯಿಂದಾದಿಯಾಗಿ ಹರಕುಬಾಯಿ ಈಶ್ವರಪ್ಪನತನಕ ವಾಚ್ ಹಗರಣವಂತೆ, ಸಮಾಜ ಕಲ್ಯಾಣ ಮಂತ್ರಿ ಆಂಜನಪ್ಪನ ರಾಜಿನಾಮೆಯಂತೆ, ಕಾಂಗ್ರೆಸ್ ನಾಯಕರೆಲ್ಲ ವಕ್ಫ್ ಆಸ್ತಿ ದೋಚಿದರೆಂಬಂತೆ ಭ್ರಷ್ಟಾಚಾರದ ಗೂಬೆ ಕೂರಿಸಲೆತ್ನಿಸಿದ್ದರ ಆರ್ಭಟವೇನು ಅಬ್ಬರವೇನು?


ಸರಿ, ಶೆಟ್ಟರ್, ಜೋಷಿ, ಈಶ್ವರಪ್ಪ, ಸೀಟಿ ರವಿ ಇತ್ಯಾದಿ ಬಿಜೆಪಿ ನಾಯಕರಿಗೆ ಭ್ರಷ್ಟಾಚಾರದ ವಿರುದ್ಧ ಭಯಾನಕ ಆಕ್ರೋಶವೆಂದೇ ನಂಬೋಣ. ಮುಖ್ಯಮಂತ್ರಿ ಸಿದ್ದು ಸಂಪುಟ ಮತ್ತು ಕಾಂಗ್ರೆಸ್ ಸರ್ಕಾರದ ವಿರುದ್ಧದ ಅವರ ಆರೋಪಗಳ ಹಿಂದೆ ಕನಿಷ್ಠ ನೈತಿಕತೆಯಾದರೂ ಇದ್ದೀತೆಂದೇ ಭಾವಿಸೋಣ. ಇಂಥ ಹುಡಿಪುಡಿ ನೈತಿಕತೆಯೇ ರಾಜ್ಯ ಬಿಜೆಪಿಯ ಆತ್ಮಗತ ಅಂತರ್ಯವಿದ್ದೀತೆಂದೇ ನಿರೀಕ್ಷಿಸೋಣ. ಏಕೆಂದರೆ ಪ್ರಧಾನಿ ಮೋದಿಯೇ 'ಸ್ವಚ್ಛ ಭಾರತ್' ಅಭಿಯಾನದ ರೂವಾರಿಯಾದ ಮೇಲೆ ಮೋದಿಯ ಮನೋಸಂಜಾತರಾದ ರಾಜ್ಯ ಬಿಜೆಪಿಯವರ ಅಸ್ತಿತ್ವಕ್ಕಾದರೂ ಕನಿಷ್ಠ ಲೆಕ್ಕದ ಆದರ್ಶವಿರದಿದ್ದರೆ ಹೆಂಗೆ?

ಮೋದಿಯ ಸ್ವಚ್ಛ ಭಾರತ್‌ನ ವಿಕಟವೋ ಎಂಬಂತೆ ಇಡೀ ರಾಜ್ಯ ಬಿಜೆಪಿ ಭ್ರಷ್ಟಾಚಾರದ ವಿರುದ್ಧ ಬೊಬ್ಬೆ ಹಾಕುವ ತನ್ನ ನೈತಿಕತೆಯ ರವಷ್ಟನ್ನೂ ಉಳಿಸಿಕೊಳ್ಳದ ಹಾಗೆ ಯಡ್ಡಿಯನ್ನು ನಿವಾಳಿಸಿದೆ ಅದರ ಹೈಕಮಾಂಡ್. ರಾಜ್ಯ ಬಿಜೆಪಿಗೀಗ ಭ್ರಷ್ಟಾವತಾರದ ಸೌಭಾಗ್ಯ! ಯಾರು ರಾಜ್ಯದ ಇತಿಹಾಸ ಕಂಡರಿಯದಂತೆ ಮುಖ್ಯಮಂತ್ರಿಯಾಗಿ ಭ್ರಷ್ಟಾಚಾರದ ಆರೋಪ ಹೊತ್ತು ಜೈಲು ಭಾಗ್ಯಕ್ಕೆ ಕಾರಣರಾದರೋ, ಯಾರು ಸರ್ಕಾರಿ ಭೂಮಿಯನ್ನು ಡಿನೋಟಿಫಿಕೇಷನ್ ಮೂಲಕ ದೋಚಲೆತ್ನಿಸಿ ಒಂದಲ್ಲ ಇಪ್ಪತ್ತು ಪ್ರಕರಣಗಳಲ್ಲಿ ಜಾಮೀನಿನ ಮೇಲಿದ್ದಾರೋ, ಯಾರು ಗಣಿ ಲೂಟಿಯಲ್ಲಿ ಕೈಜೋಡಿಸಿದ ಆರೋಪಿಯೋ, ಯಾರು ಗಣಿಲಂಚಕ್ಕೆ ಕೈಚಾಚಿದ ಜನದ್ರೋಹಿಯೋ, ಯಾರು ಅರಣ್ಯ ಭೂಮಿ ಕಬಳಿಸಿದ ಖದೀಮನೋ, ಯಾರು ಮಕ್ಕಳ ಹೆಸರಲ್ಲಿ ಸೈಟು ಲಪಟಾಯಿಸಿದ ಸ್ವಜನ ಪಕ್ಷಪಾತಿಯೋ ಆತನೇ ರಾಜ್ಯ ಬಿಜೆಪಿಯ ಅಧ್ಯಕ್ಷ ಅರ್ಥಾತ್ ಮುಂದಿನ ಮುಖ್ಯಮಂತ್ರಿ ಹುದ್ದೆಯ ಘೋಷಿತ ಭೂಪತಿ ಯಡಿಯೂರಪ್ಪ!

21 ಭ್ರಷ್ಟ ಪ್ರಕರಣಗಳು

ಬಿಜೆಪಿಯ ನೈತಿಕ ದಾರಿದ್ರ್ಯ, ಮೇಲ್ಜಾತಿ ಲಿಂಗಾಯತ ವರ್ಗದ ಆಧಿಪತ್ಯ ಮತ್ತು ಅದರ ನಿರ್ಲಜ್ಜ ಆತ್ಮಘಾತುಕ ವಂಚನೆಯ ಸಂಕೇತವೇ ಯಡಿಯೂರಪ್ಪ. 2011ರಲ್ಲಿ ಬಿಜೆಪಿಯೇ ನಿಂತು ಮುಖ್ಯಮಂತ್ರಿ ಗಾದಿಯಿಂದ ಯಡ್ಡಿಯನ್ನು ಕಿತ್ತೊಗೆದದ್ದು ಭ್ರಷ್ಟಾಚಾರದ ಕಾರಣಕ್ಕೇ. ತನ್ನ ಸಂಪುಟದ ಮತ್ತಿಬ್ಬರು ಮಂತ್ರಿಗಳಾದ ಕಟ್ಟಾಸಾಯ್ದು ಮತ್ತು ಕೃಷ್ಣಯ್ಯ ಶೆಟ್ಟಿಯ ಜೊತೆ ಪರಪ್ಪನ ಅಗ್ರಹಾರ ಜೈಲಿನಲ್ಲಿ ಕಂಬಿ ಎಣಿಸಿದ ಯಡ್ಡಿಯನ್ನು ಯಾವ ಕಾರಣಕ್ಕೆ ಬಿಜೆಪಿ ಮುಖ್ಯಮಂತ್ರಿ ಗಾದಿಯಿಂದ ಪದಚ್ಯುತಿಗೊಳಿಸಿತೋ ಈಗ ಅದೇ ಕಾರಣಕ್ಕೆ ಘಾತ ಬಗೆದು ಆತ್ಮವಂಚನೆಗಿಳಿದಿದೆ.


ಸದ್ಯ ಯಡ್ಡಿ ವಿರುದ್ಧ ಸಿಬಿಐ, ಲೋಕಾಯುಕ್ತ ಸೇರಿದಂತೆ ವಿವಿಧ ತನಿಖಾ ಸಂಸ್ಥೆಗಳ ವತಿಯಿಂದ ಅಧಿಕಾರ ದುರುಪಯೋಗ, ಅರಣ್ಯ ಭೂಮಿ ಕಬಳಿಕೆ ಮತ್ತು ಭ್ರಷ್ಟಾಚಾರದ ಪ್ರಕರಣಗಳ ಒಟ್ಟು ಸಂಖ್ಯೆ ಇಪ್ಪತ್ತೊಂದು. ಈ ಪೈಕಿ ಯಡ್ಡಿಯನ್ನು ಜೈಲುಪಾಲು ಮಾಡಿದ್ದ 2011 ರಲ್ಲಿ ರಾಜ್ಯಪಾಲರಾಗಿದ್ದ ಭಾರದ್ವಾಜ್



ಯಡ್ಡಿಯ ಅಧಿಕಾರ ದರ್ಪ

ಮುಖ್ಯಮಂತ್ರಿ ವಿರುದ್ಧ ಮೊಕದ್ದಮೆ ದಾಖಲಿಸಲೆಂದು ಅನುಮತಿಸಿದ ಹದಿನೈದು ಡಿನೋಟಿಫಿಕೇಷನ್ ಪ್ರಕರಣಗಳಿವೆ. ಸದ್ಯಕ್ಕಿದು ಸುಪ್ರೀಂಕೋರ್ಟಿನ ವಿಚಾರಣೆಯಲ್ಲಿದೆ. 2015ರಲ್ಲಿ ರಾಜ್ಯ ಹೈಕೋರ್ಟ್ ಯಡ್ಡಿಯನ್ನು ಜೈಲುಪಾಲು ಮಾಡಿದ್ದ ಈ ಹದಿನೈದೂ ಡೀನೋಟಿಫಿಕೇಷನ್ ಪ್ರಕರಣಗಳ ವಿಚಾರಣೆಗೆ ಆಗಿನ ರಾಜ್ಯಪಾಲರು ನೀಡಿದ್ದ ಅನುಮತಿಯನ್ನು ಅನೂರ್ಜಿತಗೊಳಿಸುವ ಮೂಲಕ ಯಡ್ಡಿಯನ್ನು ಬಚಾವು ಮಾಡಿತ್ತಾದರೂ ಸುಪ್ರೀಂಕೋರ್ಟ್ ಇನ್ನೂ ಯಡ್ಡಿಯನ್ನು ನಿರ್ದೋಷಿಯೆಂದು ಘೋಷಿಸಿಲ್ಲ.

ಇದರ ಹೊರತಾಗ್ಯೂ ಯಡ್ಡಿಯನ್ನು ಮತ್ತೆಂದಾದರೂ ಜೈಲಿಗೆ ಸಾಗಿಸಬಲ್ಲ ಎರಡನೇ ಪ್ರಕರಣ ದಾಖಲಾಗಿದ್ದು 2011ರ ಜುಲೈ ತಿಂಗಳಲ್ಲಿ. ಬಳ್ಳಾರಿಯಲ್ಲಿ ಸೌತ್‌ವೆಸ್ಟ್ ಮೈನಿಂಗ್ ಕಂಪೆನಿಗೆ ಅಕ್ರಮ ಗಣಿ ಲೂಟಿಗೆ ಅವಕಾಶ ಕಲ್ಪಿಸುವ ಮೂಲಕ ಮುಖ್ಯಮಂತ್ರಿ ಯಡ್ಡಿ ಅಧಿಕಾರ ದುರುಪಯೋಗಿಸಿಕೊಂಡ ಬಗ್ಗೆ ಲೋಕಾಯುಕ್ತ ಸಂತೋಷ್ ಹೆಗ್ಡೆಯವರೇ ತಮ್ಮ ವರದಿಯಲ್ಲಿ ಸ್ಪಷ್ಟಪಡಿಸಿದ್ದರು. ಲೋಕಾಯುಕ್ತ ತನಿಖೆಯಲ್ಲೇ ಸಾಬೀತಾದ ಮೇಲೆ ಈ ಬಗ್ಗೆ ಸಿಬಿಐ



ಸದಾನಂದಗೌಡ

ತನಿಖೆಯಾಗಬೇಕೆಂದು ಆದೇಶಿಸಿದ್ದು ಸುಪ್ರೀಂಕೋರ್ಟ್. ಸಿಬಿಐ ಕೂಡ ಸೌತ್‌ವೆಸ್ಟ್ ಮೈನಿಂಗ್ ಕಂಪೆನಿಯ ಗಣಿಲೂಟಿಗೆ ಮುಖ್ಯಮಂತ್ರಿ ಯಡ್ಡಿ ಶಾಮೀಲಾದ ಬಗ್ಗೆ ಸಾಕಷ್ಟು ಸಾಕ್ಷ್ಯಾಧಾರಗಳನ್ನು ಕಲೆ ಹಾಕಿಯೇ ಚಾರ್ಜ್‌ಶೀಟ್ ಸಲ್ಲಿಸಿತ್ತು. ಈ ಪ್ರಕರಣದಲ್ಲಿ ಯಡ್ಡಿಗೆ ಜಾಮೀನೇನೋ ಮಂಜೂರಾಯಿತಾದರೂ ನಿರ್ದೋಷಿಯೆಂದೇನೂ ತೀರ್ಪು ನೀಡಿಲ್ಲ. ಸದ್ಯ ಈ ಪ್ರಕರಣವೂ ಹೈಕೋರ್ಟಿನ ವಿಚಾರಣೆಯಲ್ಲಿದೆ.


ಅರಣ್ಯ ಭೂಮಿಗೇ

ಮೂರನೇಯದ್ದು ಶಿವಮೊಗ್ಗದ ವಕೀಲ ವಿನೋದ್ ದಾಖಲಿಸಿರುವ ಅರಣ್ಯ ಭೂಮಿ ಒತ್ತುವರಿ ಹಗರಣ. ಭದ್ರಾವತಿ ತಾಲೂಕು ಹುಣಸೇಕಟ್ಟೆಯಲ್ಲಿ ಯಡಿಯೂರಪ್ಪ ಇನ್ನಿತರರು ಸೇರಿಕೊಂಡು ಭದ್ರಾ ಅಭಯಾರಣ್ಯದ ನೂರು ಎಕರೆಗೂ ಅಧಿಕ ಭೂಮಿಗೆ ಕನ್ನ ಹಾಕಿದ್ದಾರೆಂದು ಶಿವಮೊಗ್ಗದ ಲೋಕಾಯುಕ್ತ ಕೋರ್ಟಿನಲ್ಲಿ ದಾಖಲಾಗಿರುವ ಕೇಸಿನಲ್ಲಿ ಯಡ್ಡಿಯೇ ಪ್ರಮುಖ ಆರೋಪಿ. ಏಪ್ರಿಲ್ 12ಕ್ಕೆ ಅದರ ವಿಚಾರಣೆಗೆ ಖುದ್ದು ಯಡ್ಡಿಯೇ ಕೋರ್ಟಿಗೆ ಹೋಗಿ ಕಟಕಟೆಯಲ್ಲಿ ನಿಂತು ಬಂದಿದ್ದಾರೆ. ಇದಲ್ಲದೆ ಶಿವಮೊಗ್ಗದ ಹೌಸಿಂಗ್ ಬೋರ್ಡ್ ನಿವೇಶನಗಳ ಹಂಚಿಕೆಯಲ್ಲಿ ಅಧಿಕಾರ ದುರುಪಯೋಗದ ಮತ್ತೊಂದು ಪ್ರಕರಣವನ್ನೂ ವಕೀಲ ವಿನೋದ್ ಶಿವಮೊಗ್ಗದ ಲೋಕಾಯುಕ್ತ ಕೋರ್ಟಿನಲ್ಲಿ ದಾಖಲಿಸಿದ್ದಾರೆ. ಹೌಸಿಂಗ್ ಬೋರ್ಡ್ ನಿವೇಶನಗಳ ಪೈಕಿ ನಾಲ್ಕು ನಿವೇಶನಗಳನ್ನು ತನ್ನ ಮಗಳ ಹೆಸರಲ್ಲಿ ಲಪಟಾಯಿಸಿದ ಕೇಸಿನಲ್ಲೂ ಯಡ್ಡಿಯೇ ಮೊದಲ ಆರೋಪಿ. ಆದರೆ ತನ್ನ ಅಧಿಕಾರ ಬಳಸಿದ ಯಡ್ಡಿ ಈ ಪ್ರಕರಣದಲ್ಲಿ ವ್ಯವಸ್ಥಿತವಾಗಿ 'ಬಿ' ರಿಪೋರ್ಟ್ ಸಲ್ಲಿಸುವಂತೆ ನೋಡಿಕೊಂಡರು. ಅದಕ್ಕೆಂದು ಲೋಕಾಯುಕ್ತ ಪೊಲೀಸರನ್ನೇ ಬಳಸಿಕೊಂಡರು. ಇದರ ವಿರುದ್ಧ ವಕೀಲ ವಿನೋದ್ ಅಪೀಲು ಹೋದರಾದರೂ ಸದ್ಯ ಕೋರ್ಟ್ ಯಡ್ಡಿ ಪರವಾಗಿ ಮಧ್ಯಂತರ ತಡೆ ನೀಡಿದೆಯಾದರೂ ಇದರಿಂದ ಪೂರ್ತಿಯಾಗಿ ಯಡ್ಡಿಯಿನ್ನೂ ಹೊರಬಂದಿಲ್ಲ.


ಅರಣ್ಯ ಭೂಮಿ ಕಬಳಿಕೆ ಮತ್ತು ಹೌಸಿಂಗ್ ಬೋರ್ಡ್ ನಿವೇಶನದ ಪ್ರಕರಣಗಳು ಅಂತಹ ಗಂಭೀರ ಸ್ವರೂಪದ್ದೇನಲ್ಲವಾದರೂ ಇದರಿಂದ ಸುಲಭಕ್ಕೆ ಯಡ್ಡಿ ಬಚಾವಾಗುವುದು ಕಷ್ಟವೇ. ಇದೆಲ್ಲಕ್ಕೂ ಮಿಗಿಲಾಗಿ ಯಡ್ಡಿ ಪಾಲಿಗೆ ತಲೆನೋವಾಗಿರುವುದು ಸಿಎಜಿ ವರದಿಯನ್ನಾಧರಿಸಿ 2015ರ ಮೇ ಮತ್ತು ಜೂನ್ ತಿಂಗಳ ಮಧ್ಯೆ ಲೋಕಾಯುಕ್ತ ಪೊಲೀಸರು ದಾಖಲಿಸಿರುವ ಹದಿನೈದು ಎಫ್‌ಐಆರ್‌ಗಳು. ಬೆಂಗಳೂರು ಸುತ್ತಮುತ್ತ ನೂರಾರು ಕೋಟಿ ರೂಪಾಯಿಗಳ ಬೆಲೆಬಾಳುವ ಹದಿನೈದಕ್ಕೂ ಅಧಿಕ ಸರ್ಕಾರಿ ಭೂಮಿಯನ್ನು ಯಡ್ಡಿ ಮುಖ್ಯಮಂತ್ರಿಯಾಗಿ ದ್ದಾಗಲೇ



ಯತ್ನಾಳ್



ಲೆಹರ್‌ಸಿಂಗ್



ಧನಂಜಯ್‌ಕುಮಾರ್


ಹಸಿದುಕೂತ ಹಿಂಡಿಗೆ ಹಂಡೆಕೂಳು ಸಿಗುತ್ತಾ?

ಬಿರಗೆಟ್ಟವರೆಲ್ಲ ಪರಕ್ಕೆ ಒಟ್ಟಾದರು ಎಂಬಂತೆ ಯಡ್ಡಿ ಅಧ್ಯಕ್ಷಗಾದಿಗೇರುತ್ತಿದ್ದಂತೆ ಬಿಜೆಪಿ ಬಸ್ಸು ಹತ್ತಲು ಕಾದು ಕೂತವರ ಹಿಂಡೇ ಥೈತಕ ಕುಣಿಯಲಾರಂಭಿಸಿದೆ. ಈ ಪೈಕಿ ಮುಂಚೂಣಿಯ ಹೆಸರೇ ಬಸನಗೌಡ ಯತ್ನಾಳ್. ಅನಂತ್ ಪಿತೂರಿಗೆ ರೋಸತ್ತು ಬಿಜೆಪಿಯಿಂದ ಹೊರಬಿದ್ದು ಜೆಡಿಎಸ್ ಸೇರಿ ಅಲ್ಲೂ ಬರಕತ್ತಾಗದೆ ಅಂತರಪಿಶಾಚಿಯಂತಾಗಿದ್ದ ಯತ್ನಾಳ್ ಮತ್ತೆ ಗತಿಗೆಟ್ಟೇ ಬಿಜೆಪಿ ಸೇರಿದ್ದರಾದರೂ ಪರಿಷತ್ ಚುನಾವಣೆಯಲ್ಲಿ ಬರೆದ್ದು ಜಾತಿಮಂತ್ರದಿಂದಲೇ ಗೆದ್ದುಬಿಟ್ಟರು.

ಅದೇನು ಬಂಡಾಟವೋ ಗೆದ್ದ ಮರುಕ್ಷಣಕ್ಕೇ ಯತ್ನಾಳ್ ಗುಡುಗಿದ್ದು 'ಯಡಿಯೂರಪ್ಪ ರಾಜ್ಯ ಬಿಜೆಪಿ ಅಧ್ಯಕ್ಷರಾದರೆ ಮಾತ್ರ ನಾನು ಬಿಜೆಪಿ ಬೆಂಬಲಿಸ್ತೀನಿ...' ಎಂದು. ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದಂತೆ ಈಗ ಯತ್ನಾಳ್ ಶುಕ್ರದೆಸೆ ಕುದುರಿದೆ. ಮತ್ತೆ ಬಿಜೆಪಿಗೇನೋ ಬರಬಹುದು. ಆದರೆ ಯಡ್ಡಿ ಬೆಳೆಸುತ್ತಾನೆಂಬ ಗ್ಯಾರಂಟಿಯಿಲ್ಲ. ಯಡ್ಡಿಯ ತಲೆಯಲ್ಲೇನಿದೆಯೊ!


ಇದೇ ದುರ್ಗತಿ ಧನಂಜಯ್‌ಕುಮಾರರದ್ದು. ಒಲ್ಲದ ಮನಸ್ಸಲ್ಲೇ ಜೆಡಿಎಸ್ ಹೊಕ್ಕರೂ ರಕ್ತಗತವಾಗಿದ್ದ ಸಂಘಸಂಸ್ಕಾರ ಬಿಡಬೇಕಲ್ಲ? ಮತ್ತೆ ಬಿಜೆಪಿಗೆ ಬರುತ್ತೇನೆಂದು ಗತಿಗೆಟ್ಟ ದೈನೇಸಿಯಂತೆ ಯಡ್ಡಿ ಮನೆಬಾಗಿಲು ಕಾಯುತ್ತಿದ್ದಾರೆ. ಬಂದಾಕ್ಷಣ ಕರೆದು ಮಣೆಹಾಕಲು ಈಗಿನದ್ದು ಹಿಂದಿನ ಬಿಜೆಪಿಯಲ್ಲ, ಧನಂಜಯ್ ಕೂಡ ಹಿಂದಿನ ಧನಂಜಯ್ ಆಗುಳಿದಿಲ್ಲ. ಕುಂದಾಪುರದ ಹಾಲಾಡಿ ಶೆಟ್ಟರದ್ದೂ ಇದೇ ಪಾಡು. ಯಡ್ಡಿಗೆ ವಿಧಿಯಿಲ್ಲ ಹಾಲಾಡಿಗೆ ಗತಿಯಿಲ್ಲ. ಆದರೆ ಚಾಲಾಕಿ ಮಾರ್ವಾಡಿ ಲೆಹರ್‌ಸಿಂಗ್ ಯಡ್ಡಿಯನ್ನೇ ಬೇಕಾದರೂ ಮಾರುವಂಥ ಕಲೆಗಾರ. ಯಡ್ಡಿ ಜೊತೆ ಕೆಜೆಪಿಗೆ ಹಾರಿ ಮೆರೆದ ಸ್ವಾಮಿ ನಿಷ್ಠೆಯನ್ನೇ ಬಂಡವಾಳ ಮಾಡಿಕೊಂಡು ಮುಂದೊಮ್ಮೆ ಯಡ್ಡಿಯನ್ನೇ ಕೈವಶ ಮಾಡಿಕೊಳ್ಳುವ ಕಲೆಗಾರ. ಮತ್ತೆ ಬಿಜೆಪಿಗೆ ಖಜಾಂಚಿಯಾಗುತ್ತಾನಾ ಅಥವಾ ಯಡ್ಡಿಯೇನಾದರೂ ಮತ್ತೆ ಮುಖ್ಯಮಂತ್ರಿಯಾದರೆಂದರೆ ಸರ್ಕಾರದ ಖಜಾನೆಗೇ ಕಂಟಕನಾಗುತ್ತಾನಾ ಬಲ್ಲವರ್‍ಯಾರು?

ಹಸಿದು ಕೂತ ಮಾಜಿ ಬಿಜೆಪಿಗಳ ಪಾಲಿಗೆ ಸದ್ಯ ಯಡ್ಡಿಯೇ ಅನ್ನದಾತ ಆಶ್ರಯದಾತ!



ಜಾತಿಗಣತಿಯ ಸುಳ್ಳಾಟ ಲಿಂಗವಂತರ ಕಳ್ಳಾಟ!

'ಇನ್ನೂ ಹತ್ತು ಸಾರಿ ಜೈಲಿಗೆ ಹೋದರೂ ನಮಗೆ ಯಡಿಯೂರಪ್ಪನೇ ಪ್ರಶ್ನಾತೀತ ನಾಯಕ!'



ಸಾಮಾನ್ಯವಾಗಿ ಯಾರೇ ಲಿಂಗಾಯತರನ್ನು ನಿಲ್ಲಿಸಿ ಯಡ್ಡಿ ಜೈಲಿಗೆ ಹೋದವರಲ್ವಾ? ಅಂಥವರನ್ನು ನೀವು ಒಪ್ಪೀರಾ? ಎಂದು 'ಕೇಳಿದರೆ ಬರುವುದು ಇಂಥದ್ದೇ ಟೈಪಿನ ಉತ್ತರ. ಯಡ್ಡಿ ಲಿಂಗಾಯತರ ಪ್ರಶ್ನಾತೀತ ನಾಯಕನೆಂಬುದರಲ್ಲಿ ಎರಡು ಮಾತಿಲ್ಲ. ಆದರೆ ಆ ಜನಾಂಗದ ಆತ್ಮವಂಚನೆ ಇಷ್ಟೊಂದು ಅಸಹ್ಯದ ಮಟ್ಟ ತಲುಪಬಹುದೆಂಬ ನಿರೀಕ್ಷೆ ತಾನೇ ಯಾರಿಗಿತ್ತು.

ಇದು ಜಾತಿ ವ್ಯಾಧಿಯ ಪರಿಣಾಮ. ಇದಕ್ಕೆ ತಕ್ಕಂತೆ ಚೆಡ್ಡಿ ಕೂಟವೊಂದು ಜಾತಿ ಗಣತಿಯ ಅಂಕಿಅಂಶ ಸೋರಿಕೆಯಾಯಿತೆಂದು ವಿಚಿತ್ರ ಪಟ್ಟಿಯೊಂದನ್ನು ತೇಲಿಬಿಟ್ಟಿದೆ. ಆ ಪ್ರಕಾರ ದಲಿತರು ಕರ್ನಾಟಕದ ಅತೀ ದೊಡ್ಡ ಜನಾಂಗವಾದರೆ ಎರಡನೇ ಸ್ಥಾನ ಮುಸ್ಲಿಮರದಂತೆ!

ಅಂದರೆ ಲಿಂಗಾಯತರು ಮೂರನೇ ದೊಡ್ಡ ಸಮೂಹ, ನಂತರವಷ್ಟೇ ಒಕ್ಕಲಿಗರು. ಜಾತಿಗಣತಿಯ ಪ್ರಾಥಮಿಕ ಅಂಕಿಅಂಶಗಳೇ ಇನ್ನೂ ಸಿದ್ಧಗೊಂಡಿಲ್ಲ. ಆಗಲೇ ಅಂತಿಮಪಟ್ಟಿ ಸಿದ್ಧಪಡಿಸಿದ್ದಾರು? ಅದನ್ನು ವಾಟ್ಸಪ್‌ಗಳಲ್ಲಿ ತೇಲಿಬಿಟ್ಟವರ್ಯಾರು? ಇದು ವ್ಯವಸ್ಥಿತ ಚೆಡ್ಡಿ ತಂತ್ರ. ಅಂದರೆ ದಲಿತರ ಸಂಖ್ಯೆ ಹೆಚ್ಚಾಯಿತೆಂದು ಇತರೇ ವರ್ಗಗಳ ಕಣ್ಣು ಕೆಂಪಾಗಬೇಕು. ಲಿಂಗಾಯತರಿಗಿಂತಲೂ ಮುಸ್ಲಿಮರು ಸಂಖ್ಯಾವಾರು ಪ್ರಾಬಲ್ಯ ಗಳಿಸಿದರೆಂದು ಹಿಂದೂಗಳ ಪಿತ್ಥ ಕೆರಳಬೇಕು. ಇದರ ಪರಿಣಾಮವೆಂಬಂತೆ ಕಾಂಗ್ರೆಸ್ ಮತ್ತು ಸಿದ್ದು ಸರ್ಕಾರದ ವಿರುದ್ಧ ಅಹಿಂದ ಸಮೂಹಗಳೂ ಕುದಿಯಬೇಕು.

ಯಡ್ಡಿಯ ಭ್ರಷ್ಟ ಮುಖವನ್ನು ಮುಚ್ಚಿಕೊಳ್ಳಲು ಸಂಘ ಪರಿವಾರ ಏನೆಲ್ಲಾ ಷಡ್ಯಂತ್ರ ಹೆಣೆಯುತ್ತದೆಯೆಂಬುದಕ್ಕೆ ಇದೊಂದು ಸಣ್ಣ ಸ್ಯಾಂಪಲ್ಲಷ್ಟೆ. ಅದರ ಬತ್ತಳಿಕೆಯಲ್ಲಿ ಇಂಥ ಅದೆಷ್ಟು ಹಾವುಗಳಿವೆಯೋ...? ಅಥವಾ ಇದು ಅಮಿತ್ ಷಾನ ಪ್ರಳಯಾಂತಕ ತಲೆಗಾರಿಕೆಯೊ!


ಟಿಫಿಕೇಷನ್ ಮೂಲಕ ಲಪಟಾಯಿಸ ಲಾಗಿತ್ತು, ಮುಖ್ಯ ಲೆಕ್ಕ ಪರಿಶೋಧಕರು 2014ರ ವಾರ್ಷಿಕ ವರದಿಯಲ್ಲಿ ಪತ್ತೆ ಹಚ್ಚಿ ಸ್ಪಷ್ಟವಾಗೇ ...ತೆ ವ್ಯಕ್ತಪಡಿಸಿದ್ದರು. ಸಿದ್ದು ಸರ್ಕಾರ ಈ ಬಗ್ಗೆ ...ಾಯುಕ್ತ ವಿಚಾರಣೆ ಮಾಡದೇ ವಿಧಿಯೇ ...ಲ್ಲ. ಏಕೆಂದರೆ ಕೋರ್ಟು ಸ್ಪಷ್ಟವಾಗೇ ಲೋಕಾ...ಗೆ ಆದೇಶ ನೀಡಿತ್ತು.

...ಗೆ ಲೋಕಾಯುಕ್ತ ಪೊಲೀಸರ ಮೂಲಕ ...ಾದ ಹದಿನೈದು ಎಫ್‌ಐಆರ್‌ಗಳನ್ನು ರಾಜ್ಯ ...ೋರ್ಟ್ 2016ರ ಜನವರಿಯಲ್ಲಿ ವಿಶೇಷ ...ದ ಮೂಲಕ ವಜಾಗೊಳಿಸಿತ್ತು. ಹಾಗೆಂದು ...ೇ ಇದು ಮುಗಿಯಲಿಲ್ಲ. ಹೈಕೋರ್ಟ್ ಕ್ರಮದ

ಎಫ್‌ಐಆರ್‌ನಲ್ಲಿ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿಯ ಜತೆ ಯಡ್ಡಿಯೂ ಪ್ರಮುಖ ಆರೋಪಿ. ಇದಿನ್ನೂ ತನಿಖಾವಸ್ಥೆಯಲ್ಲಿದೆ. ಇಂಥ ಇಪ್ಪತ್ತೊಂದು ಪ್ರಕರಣಗಳಲ್ಲಿ ಸೌತ್‌ವೆಸ್ಟ್ ಮೈನಿಂಗ್ ಕಂಪೆನಿಯಿಂದ ತನ್ನ ಪ್ರೇರಣಾ ಟ್ರಸ್ಟ್‌ಗೆ ಲಂಚ ಪಡೆದು ಗಣಿ ಲೂಟಿಯಲ್ಲಿ ಕೈಜೋಡಿಸಿದ ಆರೋಪ ಬಿಟ್ಟರೆ ಮಿಕ್ಕೆಲ್ಲವೂ ಭೂಹಗರಣಗಳೇ.' ಬಹುತೇಕ ಪ್ರಕರಣಗಳಲ್ಲಿ ಯಡ್ಡಿ ಜಾಮೀನು ಗಿಟ್ಟಿಸಿದ ಫಲದಿಂದಾಗಿ ಜೈಲು ಪಾಲಾಗು ವುದೇನೋ ತಪ್ಪಿರಬಹುದು. ಕೇಂದ್ರದ ಮೋದಿ ಸರ್ಕಾರದ ಮೂಲಕ ಸಿಬಿಐ ಪಳಗಿಸಿಕೊಂಡು ಗಣಿ ಲಂಚದಲ್ಲೇನೋ ಬಚಾವಾಗಬಹುದು. ಆದರೆ ಅರಣ್ಯ










...ದ್ಧ ಈ ಬಗ್ಗೆ ರಾಜ್ಯ ಸರ್ಕಾರವೇನಾದರೂ ...ಂಕೋರ್ಟ್ ಮೆಟ್ಟಿಲೇರಿತೆಂದರೆ ಯಡ್ಡಿ ನೀರು ...ುಲೇಬೇಕು!

...ತ್ತೀಚೆಗೆ ಲೋಕಾಯುಕ್ತ ಪೊಲೀಸರು ಯಡ್ಡಿ ...ದ್ಧ ಸಿಎಜಿ ವರದಿಯನ್ನಾಧರಿಸಿ ದಾಖಲಿಸಿದ 15 ...ಐಆರ್‌ಗಳಲ್ಲದೆ ಇದೇ ಸಾಲಿಗೆ ಸೇರುವ 16ನೇ ...ಐಆರ್ ಕಾಚರಕನಹಳ್ಳಿ ಭೂಹಗರಣಕ್ಕೆ ಸಂಬಂಧ ...ದ್ದು. 2015ರ ಡಿಸೆಂಬರ್ 20ರಂದು ...ಕಾಯುಕ್ತ ಪೊಲೀಸರು ದಾಖಲಿಸಿದ ಪ್ರಕರಣದಲ್ಲಿ ...ರಕನಹಳ್ಳಿಯ ಒಂದೆಕರೆ ಭೂಮಿಯನ್ನು ...ೋಟಿಫಿಕೇಷನ್ ಮಾಡುವ ಮೂಲಕ ಸರ್ಕಾರಿ ...ನ್ನು ಲಪಟಾಯಿಸಿದ ಆರೋಪ ಯಡ್ಡಿ ಮೇಲಿದೆ. ...ಫ್‌ಐಆರ್ ಅನ್ನು ಅನೂರ್ಜಿತಗೊಳಿಸು ವಂತೆ ... ಹೈಕೋರ್ಟ್ ಮೊರೆ ಹೊಕ್ಕಿದ್ದಾರೆ ನಿಜ. ಆದರೆ ...ರ್ಟನ್ನೂ ನಿರ್ದೋಷಿಯೆಂದು ತೀರ್ಪಿತ್ತಿಲ್ಲವಲ್ಲ? ...ಇದೇ ರೀತಿಯ ಮತ್ತೊಂದು ಭೂಹಗರಣ ...ನಹಳ್ಳಿಯ ಒಂದೆಕರೆ 11 ಗುಂಟೆಗೆ ...ಂಧಿಸಿದ್ದು. 2015ರ ಮೇ 7ರಂದು ...ಕಾಯುಕ್ತ ಪೊಲೀಸರು ದಾಖಲಿಸಿದ

ಭೂಮಿ ಕಬಳಿಕೆ, ಹೌಸಿಂಗ್ ಬೋರ್ಡ್ ನಿವೇಶನಗಳ ಹಗರಣ ಮತ್ತು ಅಸಂಖ್ಯ ಡಿನೋಟಿಫಿಕೇಷನ್ ಪ್ರಕರಣಗಳಿಂದ ಯಡ್ಡಿಯಿನ್ನೂ ಮುಕ್ತರಾಗಿಲ್ಲ. ಇವತ್ತಲ್ಲ ನಾಳೆ ಅಪಾಯ ಕಟ್ಟಿಟ್ಟಬುತ್ತಿಯೇ.

ಆದರೆ ಇಷ್ಟೆಲ್ಲ ಅನಾಹುತವೆಸಗಿ ಜೈಲು ಪಾಲಾಗಿ ಆ ಕಾರಣಕ್ಕೆ ತನ್ನ ಪಕ್ಷದಿಂದಲೇ ಮುಖ್ಯಮಂತ್ರಿ ಗಾದಿಯಿಂದ ಪದಚ್ಯುತಿಗೊಂಡಿದ್ದ ಯಡ್ಡಿಯನ್ನು ಈಗ ಅದೇ ಪಕ್ಷ ಗೋಗರೆದು ರಾಜ್ಯ ಬಿಜೆಪಿ ಅಧ್ಯಕ್ಷ ಪದವಿಗೇರಿಸುತ್ತದೆಯೆಂದರೆ ಅದಿನ್ನೆಂಥಾ ದಾರಿದ್ರ್ಯವಿರಬೇಡ?

ಸಮಸ್ಯೆಯಿದ್ದದ್ದು ಬಿಜೆಪಿಯಲ್ಲೇ. ಸದಾನಂದಗೌಡ, ಶೆಟ್ಟರ್, ಅನಂತ್‌ಕುಮಾರ್, ಈಶ್ವರಪ್ಪಾದಿಗಳ ಪೈಕಿ ಯಾರೊಬ್ಬರೂ ಮಾಸ್ ಲೀಡರ್‌ಗಳಲ್ಲ. ಕನಿಷ್ಠ ತಮ್ಮದೇ ಜನಾಂಗದ ನಾಯಕರಾಗಿ ಹೊಮ್ಮುವಷ್ಟೂ ಯೋಗ್ಯತೆಯಿಲ್ಲ. ಮೊದಮೊದಲು ಬಿಜೆಪಿ, ರೈತನಾಯಕ ಎಂದೆಲ್ಲ ಪೋಜು ಕೊಟ್ಟುಕೊಂಡೇ ರಾಜ್ಯ ಬಿಜೆಪಿಯ ಚುಕ್ಕಾಣಿ ಹಿಡಿದ ಯಡ್ಡಿ ಬರುಬರುತ್ತ ಜಾತಿ ಜಂತುವಾಗಿ ರೂಪುಗೊಂಡಿದ್ದೇ ಇಂಥಾದ್ದೊಂದು ಅನಿವಾರ್ಯಕ್ಕೆ ಬಿಜೆಪಿಯನ್ನು ತಂದು



ನಿಲ್ಲಿಸಿತು. ತಾನು ಮುಖ್ಯಮಂತ್ರಿಯಾದ ಮರುಕ್ಷಣದಿಂದಲೇ ಲಿಂಗಾಯತರ ಸಾಮ್ರಾಜ್ಯ ಸ್ಥಾಪಿಸಿದ ಯಡ್ಡಿ ಬೊಕ್ಕಸದ ದುಡ್ಡನ್ನು ಸಿಕ್ಕಸಿಕ್ಕ ಲಿಂಗಾಯತ ಮಠಗಳಿಗೆ ಧಾರೆಯೆರೆದರು. ಸರ್ಕಾರದ ಆಯಕಟ್ಟಿನ ಹುದ್ದೆಗಳಿಗೆಲ್ಲ ತನ್ನ ಜಾತಿಬಾಂಧವ ಅಧಿಕಾರಿಗಳನ್ನೇ ತಂದರು. ಜಾತಿಯಲ್ಲಿ ಲಿಂಗಾಯತನಾಗಿದ್ದರೆ ಸಾಕು ಆತ ಯಾವ ಪಕ್ಷದ ರಾಜಕಾರಣಿಯಾದರೂ ಸೈ ಕರೆಕರೆದು ನೆರವಿತ್ತರು. ಒಂದಾನೊಂದು ಕಾಲಕ್ಕೆ ರಾಜ್ಯದ ಲಿಂಗಾಯತರಿಗೆ ಬೊಮ್ಮಾಯಿ, ಪಟೇಲ್, ಮುದ್ನಾಳ್ ಥರದವರ ನಾಯಕತ್ವವಿದ್ದದ್ದು, ಕ್ರಮೇಣ ರಾಜಶೇಖರ ಮೂರ್ತಿ, ಶಾಮನೂರು ಥರದ ಕಾಂಗ್ರೆಸ್ಸಿಗರ ಪಾಲಾಗಿ ಆಯಾ ಪಕ್ಷಗಳ ಸಾಮಾಜಿಕ ನ್ಯಾಯದ ಬದ್ಧತೆಯ ಫಲವಾಗಿ ಲಿಂಗವಂತರ ಅಸಹನೆ ಹೆಚ್ಚುತ್ತಲೇ ಬಂತು. ಇದರ ಲಾಭ ಪಡೆದದ್ದು ವೈದಿಕಶಾಹಿ.

ಲಿಂಗಾಯತ ಲಾಬಿ!

ಬರುಬರುತ್ತ ಸಂಘ ಪರಿವಾರದ ತೆಕ್ಕೆಗೆ ಬಂದ ಲಿಂಗಾಯತ ಸಮೂಹಕ್ಕೊಬ್ಬ ಒರಟನ ಅಗತ್ಯವಿತ್ತು. ಅದನ್ನು ತುಂಬಿದ್ದು ಯಡ್ಡಿ. ಬಿಜೆಪಿಯಿಂದ ಹೊರಬಿದ್ದು ಕೆಜೆಪಿ ಕಟ್ಟಿದ ಯಡ್ಡಿಯ ಕೈಹಿಡಿದವರೂ ಲಿಂಗಾಯತರೇ. ಹೆಚ್ಚೂಕಮ್ಮಿ ನಲವತ್ತು ಕ್ಷೇತ್ರಗಳಲ್ಲಿ ಬಿಜೆಪಿಯನ್ನು ಹಿಂದಿಕ್ಕಿ ಎರಡನೇ ಸ್ಥಾನಕ್ಕೆ ಬಂದ ಕೆಜೆಪಿಯ ಇಪ್ಪತ್ತಕ್ಕೂ ಅಧಿಕ ಅಭ್ಯರ್ಥಿಗಳು ಸೋತಿದ್ದು ಸಾವಿರದಿಂದ ಒಂದೂವರೆ ಸಾವಿರ ಮತಗಳ ಅಂತರದಿಂದ. ಯಡ್ಡಿಯೇನಾದರೂ ಕೆಜೆಪಿ ಸ್ಥಾಪಿಸದೇ ಹೋಗಿದ್ದರೆ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುವುದು ಸಾಧ್ಯವೇ ಇರಲಿಲ್ಲವೆಂಬ ವಾಸ್ತವ ಬಿಜೆಪಿಯ ಬಹುತೇಕ ನಾಯಕರ ನಿದ್ದೆಗೆಡಿಸಿತ್ತು.

ಸಂಘ ಪರಿವಾರ, ಬಿಜೆಪಿ, ಅದರ ಮೇಲ್ಜಾತಿ ಓಟ್‌ಬ್ಯಾಂಕ್ ಯಾವುದೂ ಯಡ್ಡಿಯ ತಾಕತ್ತಿನ ಮುಂದೆ ಪ್ರಯೋಜನಕ್ಕೆ ಬರಲಿಲ್ಲ. ಹಾಗಂತ ಯಡ್ಡಿಗೂ ಅಂತಾ ಲಾಭವೇನಾಗಲಿಲ್ಲ. ಹಿಟ್ಟು ಹಳಸಿತ್ತು ಬಿಜೆಪಿಯೂ ಹಸಿದಿತ್ತು ಎಂಬಂತೆ ಸಿದ್ದು ಮುಖ್ಯಮಂತ್ರಿಯಾದ ಶುರುವಿನಲ್ಲೇ ಯಡ್ಡಿ ಬಿಜೆಪಿಗೆ ವಾಪಸ್ಸಾಗಿದ್ದಕ್ಕೂ ಕಾರಣವಿತ್ತು. ಅದು ಮೋದಿ ...

ಅಡ್ವಾಣಿ, ಅನಂತ್‌ಕುಮಾರ್ ಪಿತೂರಿಯ ಫಲವಾಗೇ ತಾನು ಜೈಲು ಪಾಲಾಗಿದ್ದು ಎಂಬ ರಹಸ್ಯವನ್ನು ಯಡ್ಡಿ ಚೆನ್ನಾಗಿಯೇ ಅರಿತಿದ್ದರ ಫಲವಿದು. ಮೋದಿಯನ್ನು ಪ್ರಧಾನಿ ಮಾಡೋದಕ್ಕೆ ತಾನು ಮತ್ತೆ ಬಿಜೆಪಿಗೇ ವಾಪಸ್ಸಾಗುತ್ತಿದ್ದೇನೆಂಬ ಯಡ್ಡಿಯ ಪಿಳ್ಳೇ ನೆಪದ ಹಿಂದಿದ್ದದ್ದೂ ಅಧಿಕಾರ ದಾಹವೇ. ಶಿವಮೊಗ್ಗದಿಂದ ಗೆದ್ದು ಲೋಕಸಭೆಗೆ ಆಯ್ಕೆಯಾದ ಮೇಲೂ ಯಡ್ಡಿ ತೆಪ್ಪಗಿದ್ದಂತೆ ನಟಿಸಿಕೊಂಡಿದ್ದಕ್ಕೂ ಬೇರೆಯದೇ ಕಾರಣವಿತ್ತು. ಅದು ತನ್ನ ಅನಿವಾರ್ಯತೆಯೇನೆಂಬುದನ್ನು ಹೈಕಮಾಂಡಿಗೆ ಅರ್ಥ ಮಾಡಿಸುವುದು!


ಯಡ್ಡಿ ತಟಸ್ಥನಾಗಿದ್ದ ಕಾರಣಕ್ಕೇ ಲೋಕಸಭಾ ಸ್ಥಾನಗಳನ್ನು ಬಿಜೆಪಿ ಕಳಕೊಂಡಿತೆಂದೂ ತದನಂತರದ ಜಿಲ್ಲಾ ಪಂಚಾಯ್ತಿ, ತಾಲೂಕು ಪಂಚಾಯ್ತಿ ಚುನಾವಣೆಯಲ್ಲೂ ಆ ಮಟ್ಟದ ಲಾಭವಾಗದೇ ಇದ್ದುದಕ್ಕೂ ದುರ್ಬಲ ನಾಯಕತ್ವವೇ ಕಾರಣವೆಂದೂ ಸಾಬೀತಾಗಿಹೋಗಿತ್ತು. ಅದಕ್ಕೂ ಯಡ್ಡಿ ತಟಸ್ಥವಾಗಿದ್ದುದೇ ಕಾರಣವೆಂಬಂತೆ ಬಿಂಬಿಸಲಾಯ್ತು. ಇದೆಲ್ಲವನ್ನೂ ಸೂಕ್ಷ್ಮವಾಗೇ ಗಮನಿಸಿದ ಹೈಕಮಾಂಡ್ ಅಂತಿಮವಾಗಿ ಯಡ್ಡಿಗೆ ಶರಣಾಗಿತ್ತು. ಶತಗತಾಯ ಕರ್ನಾಟಕದಲ್ಲಿ ಅಧಿಕಾರ ಹಿಡಿಯಬೇಕೆಂದರೆ ಲಿಂಗಾಯತರ ಧ್ರುವೀಕರಣವಾಗಬೇಕು ಮತ್ತದಕ್ಕೆ ಯಡ್ಡಿಯೇ ಆಗಬೇಕು!

ಕರ್ನಾಟಕದಂಥ ಸಮೃದ್ಧ ರಾಜ್ಯವೊಂದನ್ನು ಆಕ್ರಮಿಸಬೇಕೆಂದರೆ ತನ್ನ ಸ್ವಚ್ಛ ಭಾರತ್, ಭ್ರಷ್ಟಾಚಾರರಹಿತ ಭಾರತ ಘೋಷಣೆಗಳೆಲ್ಲ ಅರ್ಥ ಕಳಕೊಂಡರೆಷ್ಟು ದೇಶಾದ್ಯಂತ ಅಪನಿಂದೆ ಬಂದರೆಷ್ಟು? ಅಲ್ಲಿಗೆ ಒಂದಂತೂ ಸಾಬೀತಾಗಿದೆ. ಬಿಜೆಪಿಯ ಮುಖವಾಡ ಕಳಚಿ ಬಿದ್ದಿದೆ. ಅಸಲೀ ಆತ್ಮಘಾತುಕ ಮುಖ ಅನಾವರಣಗೊಂಡಿದೆ. ಇನ್ನು ರಾಜ್ಯ ಬಿಜೆಪಿ ನಾಯಕರು ಯಾವ ಮುಖ ಹೊತ್ತು ಸರ್ಕಾರದ ಭ್ರಷ್ಟಾಚಾರದ ವಿರುದ್ಧ ಮಾತಾಡುತ್ತಾರೆ? ಯಾವ ಬಾಯಿಂದ ತಾವು ಭ್ರಷ್ಟಾಚಾರರಹಿತ ಸರ್ಕಾರ ಕೊಡುತ್ತೇವೆಂದು ಭಾಷಣ ಬಿಗಿಯುತ್ತಾರೆ?

ಭೂತದ ಬಾಯಲ್ಲಿ ಭಗವದ್ಗೀತೆ....?

■ ರಾ.ಸೋಮನಾಥ್

'ಪಂಚತೀರ್ಥ'ವಲ್ಲ 'ಪಂಚಮುಕ್ತ' ಬೇಕು



ಭಾರತದೆಲ್ಲೆಡೆ ಅಂಬೇಡ್ಕರ್ ಅವರ 125ನೇ ಜಯಂತಿಯ ಸಂಭ್ರಮ. ಎಲ್ಲರ ಬಾಯಲ್ಲೂ ಬಾಬಾಸಾಹೇಬ್ ಅಂಬೇಡ್ಕರ್‌ರವರದೇ ಹೆಸರು. ಎಲ್ಲಾ ರಾಜಕೀಯ ಪಕ್ಷಗಳ ಕಾರ್ಯಕ್ರಮ ಪಟ್ಟಿಗಳಲ್ಲೂ ಅಂಬೇಡ್ಕರ್ ಜಯಂತಿ ಆಚರಣೆ ಕಡ್ಡಾಯ. ಅದೂ ವಿಜೃಂಭಣೆಯಿಂದ ಆಚರಿಸುವುದು ಕಡ್ಡಾಯ. ಭಾರತ ರತ್ನ ನೀಡಲೂ ಹಿಂದೂ ಮುಂದೂ ನೋಡಿ ಸಂವಿಧಾನ ಜಾರಿಯಾದ 40 ವರ್ಷಕ್ಕೆ ನೀಡಿದ ಕಾಂಗ್ರೆಸ್ ರಾಹುಲ್ ಗಾಂಧಿಯವರನ್ನು ಅಂಬೇಡ್ಕರರ ಹುಟ್ಟೂರು 'ಮಾವ್'ಗೆ ಭೇಟಿ ನೀಡಲು ಕಳಿಸುತ್ತದೆ. ಅಂಬೇಡ್ಕರರೆಂದರೆ ಉರಿದು ಬೀಳುತ್ತಿದ್ದ ಸುಳ್ಳು ದೇವರೆಂದು ಪ್ರಚಾರ ಮಾಡುತ್ತಿದ್ದ ಬಿಜೆಪಿಯವರು ಇಂದು ತಮ್ಮ 56 ಇಂಚಿನ ಎದೆಯ ಪ್ರಧಾನಿ ನರೇಂದ್ರ ಮೋದಿಯವರಿಂದ 'ಪಂಚತೀರ್ಥ' ಯೋಜನೆ ಘೋಷಣೆ ಮಾಡಿಸಿದೆ. 'ಬೂರ್ಷ್ವಾಯಿಸ್ಟ್' ಎನ್ನುತ್ತಿದ್ದ ಕಮ್ಯುನಿಸ್ಟರು ಅಂಬೇಡ್ಕರ್‌ರವರ ಸಿದ್ಧಾಂತಗಳನ್ನು ಪುನರ್ ಪರಿಶೀಲಿಸುತ್ತಾ 'ಲಾಲ್ ಸಲಾಮ್' ಜೊತೆಗೆ 'ಜೈ ಭೀಮ್' ಎನ್ನುತ್ತಿದ್ದಾರೆ. ಇದರ ಜೊತೆಗೆ ಅಂಬೇಡ್ಕರರ ಆಲೋಚನೆಗಳನ್ನು ಸಮಾಜದಲ್ಲಿ ಬಿತ್ತುತ್ತಾ, ಅವರ ಪ್ರತಿಮೆಯನ್ನು ಆರಾಧಿಸುತ್ತಾ ಬರುತ್ತಿರುವ ದಲಿತರು ಒಂದು ಕಡೆ ಇದ್ದರೆ ಮತ್ತೊಂದು ಕಡೆ ಅಂಬೇಡ್ಕರರ ಹೆಸರನ್ನು ಬಳಸಿಕೊಂಡು ಅವರ ತತ್ವಗಳನ್ನು ಪಾಲಿಸದೇ ಮೇಲ್ಜಾತಿ ಡಾಮಿನೆಂಟ್ ಇರುವ ವಿವಿಧ ರಾಜಕೀಯ ಪಕ್ಷಗಳಲ್ಲಿ ಸೀಟಿಗಾಗೋ, ನೋಟಿಗಾಗೋ, ವೋಟಿಗಾಗೋ ದುಡಿಯುತ್ತಿರುವ ದಲಿತರೂ ಇದ್ದಾರೆ. ಇವರೆಲ್ಲರನ್ನೂ ಹೊರತುಪಡಿಸಿ ತಮಗೂ ಅಂಬೇಡ್ಕರರಿಗೂ ಸಂಬಂಧವೇ ಇಲ್ಲದಂತಿರುವ ಅನೇಕ ಮಂದಿ ಹಿಂದುಳಿದ ಜಾತಿಗಳಲ್ಲೂ, ಮೇಲ್ಜಾತಿಗಳಲ್ಲೂ ಇದ್ದಾರೆ. ಇವರ ಪಾಲಿಗೆ ಅಂಬೇಡ್ಕರರು ಮೀಸಲಾತಿ ಮೀರಿ ನಿಲ್ಲಲು ಸಾಧ್ಯವೇ ಇಲ್ಲ.

ಅದೇನೇ ಇರಲಿ ಭಾರತದಲ್ಲಿ ಇಂದು ದಲಿತರನ್ನು ಬಿಟ್ಟು ಅಂಬೇಡ್ಕರರ ಬಗ್ಗೆ ಮಾತನಾಡುವ, ಅವರನ್ನು ಹೊಗಳುವ ದಲಿತೇತರರ ಗುಂಪುಗಳು, ರಾಜಕೀಯ ಪಕ್ಷಗಳು 125ನೇ ಜಯಂತಿಯ ಭಾಗವಾಗಿ ವಿಫುಲವಾಗಿ ನಮಗೆ ಸಿಗುತ್ತವೆ. ಇವರೆಲ್ಲರನ್ನೂ ನಾವು ಒಟ್ಟಿಗೆ ನೋಡುವುದರಲ್ಲಿ ಅಪಾಯವಿದೆ. ಆದ್ದರಿಂದ ಇವರನ್ನು ನಾವು ಎರಡು ಭಾಗಗಳಾಗಿ ವಿಂಗಡಿಸುವ ತುರ್ತು ಹಿಂದೆಂದಿಗಿಂತಲೂ ಅಗತ್ಯವಾಗಿದೆ. 1. ಅಂಬೇಡ್ಕರರ ಪ್ರತಿಮೀಕರಣವನ್ನು ಮಾತ್ರ ಬಯಸುವವರು. 2. ಅಂಬೇಡ್ಕರರ ಕನಸಿನ ಭಾರತ ಕಟ್ಟುವುದು.

ಮೊದಲನೆಯದಾಗಿ ಬಾಬಾಸಾಹೇಬ್ ಅಂಬೇಡ್ಕರ್‌ರವರು ಒಂದು ಪ್ರತಿಮೆಯಾಗಿ ಬಿಡುವುದು



ಅನಿವಾರ್ಯವಾಗಿತ್ತು. ದಮನಿತ ಜನರ ಅನಕ್ಷರತೆ, ಕಡಿಮೆ ಮಟ್ಟದ ರಾಜಕೀಯ ಪ್ರಜ್ಞೆ, ಅಂಬೇಡ್ಕರರನ್ನು ಸದಾ ತೆರೆಯ ಹಿಂದೆಯೇ ತಳ್ಳುವ ಪಟ್ಟಭದ್ರ ಹಿತಾಸಕ್ತಿಗಳು, ಅಂದಿನ ಸಂದರ್ಭ ಮತ್ತು ತನ್ನ ಜನರ ಮೇಲೆ ಅವರಿಗಿದ್ದ ಪ್ರೀತಿ, ಬದ್ಧತೆ ಅಂಬೇಡ್ಕರರನ್ನು ಪ್ರತಿಮೆಯನ್ನಾಗಿಸಿಬಿಟ್ಟಿತು. ಇಲ್ಲದಿದ್ದರೆ ಇಷ್ಟು ಬೇಗ ಜನಸಮುದಾಯದೊಳಕ್ಕೆ ಅಂಬೇಡ್ಕರ್‌ರು 'ಬಾಬಾಸಾಹೇಬ್' ಆಗಿ ಇಳಿಯುತ್ತಿರಲಿಲ್ಲ, ಅದಕ್ಕೆ ಇಲ್ಲಿನ ಸಾಂಪ್ರದಾಯಿಕ ಶಕ್ತಿಗಳೂ ಬಿಡುತ್ತಿರಲಿಲ್ಲ, ಅಂಬೇಡ್ಕರರ ಮೊಮ್ಮಗನಿಗೆ ಹಲ್ಲೆ ಮಾಡಿದರೆ ದಲಿತರ ಕರುಳು ಚುರುಕ್ಕೆನ್ನುತ್ತದೆ ಎಂದರೆ ಅವರೊಂದಿಗೆ ದಲಿತರಿಗಿರುವ ಸಂಬಂಧವನ್ನು ನಾವು ಹೃದಯದಿಂದ ನೋಡಬೇಕಾಗುತ್ತದೆ. ಹಾಗೆಂದ ಮಾತ್ರಕ್ಕೆ ಅಂಬೇಡ್ಕರ್‌ರನ್ನು ಪ್ರತಿಮೆಗೆ ಮಾತ್ರ ಸೀಮಿತಗೊಳಿಸುವುದೇ? ಖಂಡಿತಾ ಇಲ್ಲ, ದಲಿತರ ಮೇಲೆ ಅಮಾನವೀಯ ದೌರ್ಜನ್ಯಗಳು ನಡೆದಾಗ ತಣ್ಣಗಿದ್ದು ಅಂಬೇಡ್ಕರರ ಮೂರ್ತಿಗೆ ಅವಮಾನವಾದಾಗ ಮಾತ್ರ ಸಿಡಿದೇಳುವ ಮನಸ್ಥಿತಿ ಅಂಬೇಡ್ಕರರ ಚಿಂತನೆಯನ್ನೇ ವಿರೋಧಿಸುತ್ತದೆ.

ಈ ಸಮಯದಲ್ಲಿ ಸ್ವತಃ ಅಂಬೇಡ್ಕರ್‌ರವರು ತಮ್ಮ 55ನೇ ಹುಟ್ಟು ಹಬ್ಬದ ದಿನ ಮದ್ರಾಸಿನ 'ಜೈ ಭೀಮ್' ಪತ್ರಿಕೆಗೆ ಬರೆದ ಪತ್ರ ನಮ್ಮ ಗಮನ ಸೆಳೆಯುತ್ತದೆ. ಆ ಪತ್ರದಲ್ಲಿ ಬಾಬಾಸಾಹೇಬ್ ಅಂಬೇಡ್ಕರ್ ಈ ರೀತಿ ಹೇಳಿದ್ದಾರೆ.


"ನನ್ನ 55ನೇ ಜಯಂತಿಯ ಅಂಗವಾಗಿ ಪ್ರಕಟಿಸಲಾಗುತ್ತಿರುವ ನಿಮ್ಮ ಪತ್ರಿಕೆಯ ವಿಶೇಷ ಸಂಚಿಕೆಗೆ ಒಂದು ಸಂದೇಶ ಕಳಿಸಿಕೊಡಲು ನೀವು ಕೇಳಿದ್ದೀರಿ. ವಿಷಾದದ ಸಂಗತಿಯೆಂದರೆ, ಭಾರತದಲ್ಲಿ ರಾಜಕೀಯ ನಾಯಕನನ್ನು ಒಬ್ಬ ಪ್ರವಾದಿಯನ್ನಾಗಿ ಪರಿಗಣಿಸುವ ಪ್ರವೃತ್ತಿ ದಿನದಿಂದ ದಿನಕ್ಕೆ ಬೆಳೆಯುತ್ತಲೇ ಇದೆ. ಪರಿಣಾಮವಾಗಿ ಭಾರತದ ಉದ್ದಗಲಕ್ಕೂ ರಾಜಕೀಯ ಮುಖಂಡರು ಚಕ್ಕನೆ ಪ್ರವಾದಿಯ ಗದ್ದುಗೆ ಏರುತ್ತಿದ್ದಾರೆ. ಭಾರತದ ಹೊರಗಾದರೋ ಜನರು ತಮ್ಮ ತಮ್ಮ ಪ್ರವಾದಿಗಳ ಜಯಂತಿಯನ್ನು ಮಾತ್ರ ಆಚರಿಸುತ್ತಾರೆ. ಕೇವಲ ಭಾರತದಲ್ಲಿ ಮಾತ್ರ ರಾಜಕಾರಣಿ ಹಾಗೂ ಪ್ರವಾದಿಗಳ ಜಯಂತಿಯನ್ನು ವೈಭವೋಪೇತವಾಗಿ ನಿವ್ವಳ ಸಮಭಾಗದಿಂದ ಆಚರಿಸಲಾಗುತ್ತಿದೆ. ಇದೊಂದು ತೀರ ದಯನೀಯ ಸಂಗತಿ. ವೈಯಕ್ತಿಕವಾಗಿ ಜನ್ಮೋತ್ಸವದ ಆಚರಣೆಗಳನ್ನು ನಾನು ಇಷ್ಟ ಪಡುವುದೇ ಇಲ್ಲ, ನಾನೊಬ್ಬ ಪಕ್ಕಾ ಪ್ರಜಾಪ್ರಭುತ್ವವಾದಿ. ಹಾಗಾಗಿ ವ್ಯಕ್ತಿ ಪೂಜೆ ನನಗೆ ಎಳ್ಳಷ್ಟೂ ಸೇರದು. ವ್ಯಕ್ತಿ ಆರಾಧನೆಯೆಂದರೆ ಅದು ಪ್ರಜಾಸತ್ತೆಯ ವಿಡಂಬನೆ. ಪ್ರಜಾಪ್ರಭುತ್ವದ ವಿಕಾರ. ವ್ಯಕ್ತಿಯ ಘನತೆಯ ಧಿಕ್ಕಾರ. ಒಬ್ಬ ವ್ಯಕ್ತಿ ನಾಯಕನಾಗಿ ಜನತೆಯ ಪ್ರೀತಿಯ ಆದರಗಳಿಗೆ ಪಾತ್ರನಾಗಿದ್ದರೆ ಪರವಾಗಿಲ್ಲ. ಅವನ ಬಗ್ಗೆ ತೋರಲಾಗುವ ಗೌರವ, ಅವನ ಕುರಿತು ಮಾಡಲಾಗುವ ಶ್ಲಾಘನೆ ಇತ್ಯಾದಿಗಳನ್ನು ಸಹಿಸಿಕೊಳ್ಳಬಹುದು. ಆದರೆ ಅದು ಅಷ್ಟಕ್ಕೆ ನಿಲ್ಲಬೇಕು. ಅದರಿಂದ ಆ ಮುಖಂಡನಿಗೂ ಒಳಿತು. ಇದಕ್ಕೆ ಬದಲಾಗಿ ನೇತಾರನನ್ನು ಎತ್ತಿ ಆಕಾಶಕ್ಕೇರಿಸಿ ಆರಾಧಿಸುವುದು ಖಂಡಿತವಾಗಿಯೂ ಸರಿಯಲ್ಲ, ಸಾಧುವೂ ಅಲ್ಲ, ಇದನ್ನೆಂದೂ ಒಪ್ಪಲಾಗದು. ಒಂದರ್ಥದಲ್ಲಿ ಇದು ಒಬ್ಬರ ರೀತಿನೀತಿಗಳನ್ನು, ಘನತೆ ಗೌರವಗಳನ್ನು ಮಣ್ಣು ಗೂಡಿಸುತ್ತದೆ. ಮರ್ಯಾದೆಯನ್ನು ಕಳಂಕಿಸುತ್ತದೆ.... ಒಮ್ಮೆ ರಾಜಕೀಯ ನಾಯಕನನ್ನು ಪ್ರವಾದಿಯ ಮಟ್ಟಕ್ಕೇರಿಸಿ ಉದಾತ್ತ ಗದ್ದುಗೆಯ ಮೇಲೆ ಕೂರಿಸಿದರೆ ಆಗ ಅವನು ಪ್ರವಾದಿಯ ಪಾತ್ರ ನಿರ್ವಹಿಸುವ ಅನಿವಾರ್ಯತೆ ಉಂಟಾಗುತ್ತದೆ. ಪ್ರವಾದಿಗಳಂತೆಯೇ ಅವನು ಕೂಡಾ ತನ್ನ ಅನುಯಾಯಿಗಳಿಗೆ ದಿವ್ಯ ಸಂದೇಶ ಕೊಡಬೇಕಾಗುತ್ತದೆ."

ಬಾಬಾಸಾಹೇಬ್ ಅಂಬೇಡ್ಕರರಿಗೆ ಪ್ರತಿಮೀಕರಣದ ಅಪಾಯ ತಿಳಿದಿತ್ತು, ಅದಕ್ಕೇ ಅದನ್ನು ಅವರು ಧಿಕ್ಕರಿಸಿ ನಿಂತರು. ಆದರೆ ಅವರನ್ನು ದಲಿತರ ಓಲೈಕೆ ರಾಜಕಾರಣ ಬಿಡಲಿಲ್ಲ, ಪ್ರವಾದಿಯ ಮಟ್ಟಕ್ಕೆ ಏರಿಸುವ ಕಾರ್ಯವನ್ನು ಎಡೆಬಿಡದೆ ಮಾಡುತ್ತಿದೆ. ಇದಕ್ಕೆ ಕಾಂಚಾ ಇಲ್ಲಯ್ಯರವರಂತಹ ವಿಚಾರವಾದಿಗಳೂ ಹೊರತಾಗಿಲ್ಲ. ಈ ರೀತಿಯ ಪ್ರವಾದೀಕರಣ ಅಂಬೇಡ್ಕರರ ನೈಜ ವಿಚಾರಗಳನ್ನು ಬಂಧಿಸಿಡುವಲ್ಲಿ ಯಶಸ್ವಿ ಸಾಧಿಸುತ್ತದೆ. ಮತ್ತದೇ ಬ್ರಾಹ್ಮಣ್ಯಕ್ಕೆ ಸುಲಭ ದಾರಿಯನ್ನು ಒದಗಿಸಿಕೊಡುತ್ತದೆ. ಇಂದಿನ ಲಿಂಗಾಯತರು ಹೇಗೆ ಬಸವಣ್ಣನವರನ್ನು ಧಿಕ್ಕರಿ[...] ನಡೆಯುತ್ತಿದ್ದಾರೋ ಹಾಗೆ. ಆ ಕಾರಣಕ್ಕಾ[...] ಅಂಬೇಡ್ಕರ್‌ರವರು ನೀಡಿರುವ ಎಚ್ಚರಿಕೆ ಅವರದೇ 125ನ[...] ಜಯಂತಿಯಂದು ನಮಗೆಲ್ಲರಿಗೂ ಹೊಸ ಪಾ[...] ಕಲಿಸುವಂತಿದೆ.

ಎರಡನೆಯದಾಗಿ ಅಂಬೇಡ್ಕರರು ಕಂಡ ಕನಸುಗಳ[...] ಏನಾಗಿದ್ದವು ಮತ್ತು ಇಂದು ಅವುಗಳ ಪರಿಸ್ಥಿತಿ ಏನಾಗಿ[...] ಎಂದು ತಿಳಿಯುವುದು ಒಳಿತು. ಭಾರತ ದೇಶದಲ್ಲಿ[...] ಜಾತಿಪದ್ಧತಿ ನಾಶವಾಗಬೇಕೆಂದು ಮೊದಲು ಮಾತನಾಡಿ[...] ವ್ಯಕ್ತಿಯೆಂದರೆ ಅದು ಅಂಬೇಡ್ಕರರೇ. ಅಲ್ಲಿಯವರೆಗೆ ಜಾತಿಗಳ[...] ನಡುವಿನ ಸಾಮರಸ್ಯದ ಮಾತುಗಳಷ್ಟೇ ಭಾರತದಲ್ಲಿ ಮ[...] ಮಾಡಿದ್ದವು. ದೇಶದಲ್ಲಿನ ಎಲ್ಲರೂ ನಾನು ಭಾರತೀಯ[...] ಎಂದು ಹೇಳಬೇಕಾದರೆ ಜಾತಿಪದ್ಧತಿ ನಾಶವಾಗಬೇಕೆಂಬುದ[...] ಅವರು ಕಂಡುಕೊಂಡ ಸತ್ಯವಾಗಿತ್ತು, ಜಾತಿ ಎಂಬ[...] ಮಹಾರಾಕ್ಷಸನನ್ನು ಕೊಲ್ಲದೆ ಯಾವುದೇ ಸುಧಾರಣೆಗಳ[...] ಭಾರತದಲ್ಲಿ ಅಸಾಧ್ಯವೆಂದೇ ಮನಗಾಣಿದ್ದರು. ಅದು ಇಂದು[...] ನಗ್ನಸತ್ಯವಾಗಿ ನಮಗೆ ಗೋಚರಿಸುತ್ತಿದೆ. ದೇವಸ್ಥಾನಗಳ[...] ಪಂಕ್ತಿಭೇದ, ತಾವು ಹಡೆದ ಮಕ್ಕಳನ್ನೇ ಮರ್ಯಾದೆಗೇಡು[...] ಹತ್ಯೆ ಮಾಡುವ ತಂದೆತಾಯಂದಿರು ಮುಂತಾದ ಅನಿಷ್ಟಗಳ[...] ಜೀವಂತವಾಗಿರುವುದಕ್ಕೆ ಜಾತಿ ಪದ್ಧತಿಯೇ ಇಂದಿಗೂ[...] ಕಾರಣವಾಗಿದೆ. ಜಾತಿ ಪದ್ಧತಿಯ ವಿಕಾರ ರೂಪ ಅಸ್ಪೃಶ್ಯತೆ[...] ಇಂದಿಗೂ ದೇಶದ ಶೇ. 20 ರಷ್ಟಿರುವ ಭಾರತೀಯರನ್ನು[...] ಅಮಾನವೀಯವಾಗಿ ನಡೆಸಿಕೊಳ್ಳುವ ಈ ಪದ್ಧತಿ ಜೀವಂತ[...] ಸಿಗರನಹಳ್ಳಿಯಂತಹ ಮಾಜಿ ಪ್ರಧಾನಿ ದೇವೇಗೌಡರ ತವರು[...] ತಾಲೂಕಿನಲ್ಲಿಯೇ ಬಟಾಬಯಲಲ್ಲಿ ಅಸ್ಪೃಶ್ಯತೆ ರಾರಾಜಿಸುತ್ತಿದೆ[...] ಹಳ್ಳಿಗಳಲ್ಲಂತೂ ಅಸ್ಪೃಶ್ಯತೆ ಹೊದ್ದುಕೊಂಡು ಮಲಗಿದೆ[...] ಪ್ರತಿವಾರ ಮೂರು ದಲಿತರ ಕೊಲೆಯಾಗುತ್ತಿದೆ[...] ಅದಕ್ಕಾಗಿಯೇ ಅಂಬೇಡ್ಕರರು ಬೌದ್ಧ ಧರ್ಮಕ್ಕೆ[...] ಮತಾಂತರವಾದದ್ದು. ಅದೇನೆ ಇರಲಿ, ಸಂವಿಧಾನದ 17[...] ನೇ ವಿಧಿ ನಿಷೇಧಗೊಳಿಸಿರುವ ಅಸ್ಪೃಶ್ಯತೆ ಇಂದಿಗೂ ಆಳುವ[...] ವರ್ಗದವರಿಂದಲೇ ಜೀವಂತ.

ಅಸ್ಪೃಶ್ಯತೆ ಜಾತಿ ಪದ್ಧತಿಯ ನಾಶವನ್ನು ಬಯಸುವ[...] ಅಂಬೇಡ್ಕರರು ಲಿಂಗತಾರತಮ್ಯದ ನಾಶವನ್ನೂ ಬಯಸುತ್ತಾರೆ[...] ಇಂದಿಗೂ ಹೆಣ್ಣು ಕೀಳು ಗಂಡು ಮೇಲೆಂಬ ಮನೋಭಾವ[...] ಬಹಿರಂಗವಾಗಿಯೇ ಸಮಾಜದಲ್ಲಿ ವ್ಯಕ್ತವಾಗುತ್ತಿದೆ[...]

ಅಂಬೇಡ್ಕರರೆಡೆಗಿನ ಹಿಂದೂತ್ವದ ಹುಸಿ ಪ್ರೀತಿ



ಕಳೆದ ವರ್ಷ ಅಂಬೇಡ್ಕರ್ ಜನ್ಮದಿನದ ಸಂದರ್ಭದಲ್ಲಿ ಆರ್‌ಎಸ್‌ಎಸ್ ಮುಖವಾಣಿಯಾದ 'ಆರ್ಗನೈಸರ್' ಪತ್ರಿಕೆ ಬಾಬಾಸಾಹೇಬರ ಹೆಸರಿನಲ್ಲಿ ವಿಶೇಷ ಸಂಚಿಕೆ ಹೊರ ತಂದಿತ್ತು. ವಿಶೇಷ ಸಂಚಿಕೆಯ 'ಆ' ಉದ್ದೇಶ ಎಲ್ಲರಿಗೂ ತಿಳಿದದ್ದೆ. ಅಸ್ಪೃಶ್ಯರನ್ನು ಹಿಂದೂತ್ವದೊಳಕ್ಕೆ ಎಳೆದುಕೊಳ್ಳುವ, ಎಳೆದುಕೊಳ್ಳಲಾಗದಿದ್ದರೂ ಕಡೇಪಕ್ಷ ನಾವು ಅಂಬೇಡ್ಕರ್ ವಿರೋಧಿಗಳಲ್ಲ ಎಂದು ತೋರಿಸಿಕೊಳ್ಳುವ, ವ್ಯರ್ಥವೋ ಸಾರ್ಥವೋ ಒಟ್ಟಿನಲ್ಲಿ ಉದ್ದೇಶಪೂರ್ವಕವಾಗಿ ನಡೆದ ಪ್ರಯತ್ನವದು. ಆರ್‌ಎಸ್‌ಎಸ್‌ನ ಇಂತಹ ಪ್ರಯತ್ನವನ್ನು ಅದರ ಸಂಬಂಧಿತ ಎಲ್ಲರೂ ನಿರಂತರ ಮಾಡುತ್ತಲೇ ಇದ್ದಾರೆ.

ಮೋದಿಯವರ ಅಂಬೇಡ್ಕರರೆಡೆಗಿನ ಮೆಚ್ಚುಗೆಯ ಮಾತುಗಳಿರಬಹುದು, ಆರ್‌ಎಸ್‌ಎಸ್ ಶಾಖೆಗಳಲ್ಲಿ ಅಂಬೇಡ್ಕರ್ ಭಾವಚಿತ್ರ ಇಡುವ ಕಾರ್ಯಕ್ರಮವಿರಬಹುದು, ಯಡಿಯೂರಪ್ಪನವರಿಂದ ಅಂಬೇಡ್ಕರ್ ಜಯಂತಿಯಂದೆ ಅಧಿಕಾರ ಸ್ವೀಕರಿಸುವ ಘೋಷಣೆಯ ಕಾರ್ಯಕ್ರಮವಿರಬಹುದು, ಅಂಬೇಡ್ಕರ್ ಹಿಂದೂತ್ವದ ಉಗ್ರವಿರೋಧಿಯಾಗಿದ್ದರೂ ಅವರನ್ನು ಹಿಂದೂತ್ವದ ಸುಧಾರಕ ಎನ್ನುವ ಬಿಜೆಪಿಯ ರಾಜ್ಯಸಭಾ ಸದಸ್ಯ ತರುಣ್ ವಿಜಯ್ ಮತ್ತು ಅಂತಹ ಇತರರ ಈ ಧಾಟಿಯ ಅನೇಕ ಲೇಖನಗಳಿರಬಹುದು ಅವೆಲ್ಲ ಆರ್‌ಎಸ್‌ಎಸ್‌ನ ಈ 'ಅಂಬೇಡ್ಕರ್ ಪ್ರೇಮ'ದ ತದ್ರೂಪಿ ಉದಾಹರಣೆಗಳಷ್ಟೆ. ಪ್ರಶ್ನೆ ಏನೆಂದರೆ ಅಂಬೇಡ್ಕರರ ಆ ಅಖಂಡ ವಿಚಾರಗಳು ಆರ್‌ಎಸ್‌ಎಸ್ ತಿಳಿದುಕೊಂಡಷ್ಟು ಸುಲಭವೆ? ಅರಗಿಸಿಕೊಳ್ಳಲು ಸಾಧ್ಯವೇ? ಈ ದಿಸೆಯಲ್ಲಿ ಅವರ ಒಂದಷ್ಟು ಬರಹಗಳನ್ನು ಪುಷ್ಟೀಕರಿಸುವ ಮೂಲಕ ಉತ್ತರ ಕಂಡುಕೊಳ್ಳಬಹುದು.

ಮೊದಲಿಗೆ ಅತ್ಯಂತ ಸರಳ ಮತ್ತು ಅಗತ್ಯದ ಅಂಶವಾದ, ಹಿಂದೂಗಳು ಏಕೆ ಅಸ್ಪೃಶ್ಯತೆ ಆಚರಿಸುತ್ತಾರೆ? ಈ ಪ್ರಶ್ನೆಗೆ ಅಂಬೇಡ್ಕರರು ಕೊಡುವ ಉತ್ತರ ಹಾಗೆ ಅಸ್ಪೃಶ್ಯತೆ ಆಚರಿಸುವವರ ಅಂತಹ ಸಿದ್ಧಾಂತವಾದಿಗಳ ಬೆವರಿಳಿಸುತ್ತದೆ. ಅಂಬೇಡ್ಕರರು ಹೇಳುತ್ತಾರೆ "ಅಸ್ಪೃಶ್ಯರು ಹಿಂದೂಗಳ ಸಮಾಜಕ್ಕೆ ಸೇರುವುದಿಲ್ಲ ಮತ್ತು ಹಿಂದೂಗಳೂ ಅಷ್ಟೆ ತಾನು ಮತ್ತು ಅಸ್ಪೃಶ್ಯರು ಇಬ್ಬರೂ ಒಂದೇ ಸಮಾಜಕ್ಕೆ ಸೇರಿದವರು ಎಂದು ಭಾವಿಸುವುದಿಲ್ಲ, ಈ ನಿಟ್ಟಿನಲ್ಲಿ ಅಸ್ಪೃಶ್ಯರ ಸಮಸ್ಯೆಯ ಬಗ್ಗೆ ಹಿಂದೂಗಳಲ್ಲಿ ನೈತಿಕವಾಗಿಯೂ ನಿರಾಸಕ್ತಿ ಕಂಡುಬರುತ್ತದೆ ಯಾಕೆ ಎಂಬುದಕ್ಕೆ ಇದೇ ಪ್ರಮುಖ ಕಾರಣ. ಅಲ್ಲದೆ ಆತ್ಮಸಾಕ್ಷಿಯೂ ಇಲ್ಲದ ಕಾರಣ ಹಿಂದೂವೊಬ್ಬನಲ್ಲಿ ಅಸ್ಪೃಶ್ಯರು ಅನುಭವಿಸುವ ಇಂತಹ ನಿರಂತರ ಅನ್ಯಾಯ ಮತ್ತು ಅಸಮಾನತೆಯ ವಿರುದ್ಧ ದನಿ ಎತ್ತುವ ಪ್ರಾಮಾಣಿಕ ಆಕ್ರೋಶವೂ ಇರುವುದಿಲ್ಲ, ಒಟ್ಟಾರೆ ಆತ (ಹಿಂದೂ) ಅಸ್ಪೃಶ್ಯರು ಅನುಭವಿಸುವ ಇಂತಹ ಅನ್ಯಾಯ ಮತ್ತು ಅಸಮಾನತೆಯಲ್ಲಿ ಎಳ್ಳಷ್ಟೂ ತಪ್ಪು ಕಾಣುವುದಿಲ್ಲ, ಅದನ್ನು ಆಚರಿಸುವ ತನ್ನ ನಿಲುವಿನಿಂದ ಕೂಡ ಆತ ಹಿಂದೆ ಸರಿಯುವುದಿಲ್ಲ, ಈ ಹಿನ್ನೆಲೆಯಲ್ಲಿ ಆತ್ಮಸಾಕ್ಷಿಯ ಸ್ಪಷ್ಟ ಕೊರತೆಯ ಕಾರಣದಿಂದಾಗಿ ಅಸ್ಪೃಶ್ಯತೆಯನ್ನು ನಿರ್ಮೂಲನೆಗೊಳಿಸುವ ಈ ಹಾದಿಯಲ್ಲಿ ಇರುವ ಅತಿದೊಡ್ಡ ತಡೆಯೆಂದರೆ ಅದು ಹಿಂದೂ ಅಷ್ಟೆ." ಅಂಬೇಡ್ಕರರ ಬರಹಗಳ (ಅಂಬೇಡ್ಕರ್ ಬರಹಗಳು, ಇಂಗ್ಲಿಷ್ ಸಂ.5, ಪು.99) ಬುಟ್ಟಿಗೆ ಕೈಹಾಕಿದಾಗ ಸಾಮಾನ್ಯವಾಗಿ ಸಿಗುವ ಬರಹ ಮತ್ತು ಆ ಮಾದರಿಯ ಒಂದು ಹಣ್ಣು ಇದು. ಅಂದಹಾಗೆ ಈ ಹಣ್ಣು ಮತ್ತು ಅದರ ರುಚಿ ಹಿಂದೂತ್ವದ ಸುಧಾರಣೆಯ ಸರಕಾಗಿ ಕಾಣುತ್ತದೆಯೇ?

ಇನ್ನು ತಮ್ಮನ್ನು (ಅಸ್ಪೃಶ್ಯರನ್ನು) ವರ್ಣಾಶ್ರಮದೊಳಕ್ಕೆ ಸೇರಿಸದಿದ್ದರ ಉದ್ದೇಶವನ್ನು ಕೂಡ ಅಂಬೇಡ್ಕರರು ಒಂದೆಡೆ ಬಿಡಿಸಿ ಹೇಳುತ್ತಾರೆ. (ಅದೇ ಕೃತಿ, ಪು. 100). ಅದನ್ನು



ಉಲ್ಲೇಖಿಸುವುದಾದರೆ "ಮನು ಚಾತುರ್ವರ್ಣವನ್ನು ಪಂಚವರ್ಣವನ್ನಾಗಿ ವಿಸ್ತರಿಸಲು ಸಿದ್ಧನಿರಲಿಲ್ಲ, ಹೀಗೆ 5ನೇ ವರ್ಣ ಇಲ್ಲ ಎನ್ನುವ ಮೂಲಕದ ಆತನ ಹೇಳಿಕೆಯ ರೂಪದ ಸಲಹೆಯ ಅರ್ಥವೆಂದರೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಶೂದ್ರ ಎಂಬ ಆ ನಾಲ್ಕು ವರ್ಣಗಳ ಆಚೆ ಇರುವಂತಹವರನ್ನು ಆತ ಹಿಂದೂ ಸಮಾಜದೊಳಕ್ಕೆ ಸೇರಿಸಲು ಸಿದ್ಧನಿರಲಿಲ್ಲ ಎಂಬುದು. ಈ ಕಾರಣಕ್ಕಾಗಿ ಆತ ಹಾಗೆ ವರ್ಣಗಳ ಹೊರಗಿದ್ದವರನ್ನು 'ಬಾಹ್ಯರು', 'ವರ್ಣಬಾಹ್ಯರು', 'ಹೀನರು', 'ಅಂತ್ಯವಾಸಿಗಳು' ಎಂದು ಕರೆದ." ಹೀಗೆ ಹೇಳುತ್ತಲೇ ಅಂಬೇಡ್ಕರರು ವ್ಯಂಗ್ಯವಾಗಿ "ಅಸ್ಪೃಶ್ಯತೆಯನ್ನು ಪೋಷಿಸಿಕೊಂಡು ಬರಲು ಇಚ್ಛಿಸುವ ಸಂಪ್ರದಾಯವಾದಿ ಹಿಂದೂವಿಗೆ ಮನುಸ್ಮೃತಿ ಕೂಡ ಮೋಸಮಾಡಿಲ್ಲ!" ಎನ್ನುತ್ತಾರೆ. ಮತ್ತೂ ಪ್ರಶ್ನೆಯೇನೆಂದರೆ ಹಿಂದೂ ಧರ್ಮದ ಆಧಾರಸ್ತಂಭವಾದ ಚಾತುರ್ವರ್ಣದ ವಿಶ್ಲೇಷಣೆಯ ಅಂಬೇಡ್ಕರರ ಈ ಸಾಲುಗಳು ಹಿಂದೂತ್ವದ ಸುಧಾರಣೆಯ ನುಡಿಗಳಾಗಿ ಕಾಣುತ್ತದೆಯೇ? ಎಂಬುದು.

ಇನ್ನು ಅಸ್ಪೃಶ್ಯತೆಯ ಕ್ರೂರ ವಾಸ್ತವತೆಯನ್ನು ನೇರಾನೇರ ಅಂಬೇಡ್ಕರರು ಹಿಂದೂಗಳ ದೃಷ್ಟಿಕೋನದಲ್ಲಿ ಬಿಡಿಸುವುದ್ಹೇಗೆಂದರೆ "ಅಸ್ಪೃಶ್ಯತೆಯು ಅಸ್ಪೃಶ್ಯರಿಗೆ ದುರದೃಷ್ಟಕರವಿರಬಹುದು, ಆದರೆ ಅನುಮಾನವೇ ಬೇಡ ಹಿಂದೂಗಳಿಗೆ ಅದು ಅದೃಷ್ಟಕರ. ಅದು ಅವರಿಗೆ ಕೀಳಾಗಿ ನೋಡಲು ಸಾಧ್ಯವಾಗುವುದಕ್ಕೆ ಒಂದು ವರ್ಗವನ್ನು ಸೃಷ್ಟಿಸಿಕೊಡುತ್ತದೆ. ಅಂತೆಯೇ ಹಿಂದೂಗಳಿಗೆ ಒಂದು ಪದ್ಧತಿ ಬೇಕು. ಆ ಪದ್ಧತಿಯಲ್ಲಿ ಯಾರೂ ಕೂಡ ಎಲ್ಲವೂ ಆಗಿರಬಾರದು ಮತ್ತು ಪ್ರತಿಯೊಬ್ಬರೂ ಕೂಡ ಏನಾದರೊಂದು ಕೂಡ ಆಗಿರಬಾರದು. ಅದಲ್ಲದೆ ಆ ಪದ್ಧತಿಯಲ್ಲಿ ಅವರಿಗೆ 'ಒಂದಷ್ಟು ಜನರಿರಬೇಕು' ಮತ್ತು ಉಳಿದವರು 'ಏನೇನಕ್ಕೂ ಆಗಬಾರದಂತವರಾಗಿರಬೇಕು'. ಇಲ್ಲಿ 'ಏನೇನಕ್ಕೂ ಆಗಬಾರದವರೆಂದರೆ ಅಸ್ಪೃಶ್ಯರು' ಮತ್ತು ಇದು 'ಹಿಂದೂಗಳನ್ನು ಆ ಒಂದಷ್ಟು ಜನರನ್ನಾಗಿ' ಮಾಡುತ್ತದೆ. ಪರಿಣಾಮ ಹಿಂದೂಗಳಲ್ಲುಂಟಾಗುವ ಇಂತಹ ಸಹಜ ಅಹಂಭಾವವನ್ನು ಅಸ್ಪೃಶ್ಯತಾಚರಣೆಯ ಈ ಪದ್ಧತಿ

ಮಹಾರಾಷ್ಟ್ರದ ಶನಿಸಿಂಗ್ನಾಪುರ ಮತ್ತು ಶಬರಿಮಲೆ ದೇಗುಲಗಳಿಗೆ ಸ್ತ್ರೀಯರ ಪ್ರವೇಶವಿಲ್ಲ. ಹೋರಾಟ ಮಾಡಿ ಪ್ರವೇಶಿಸಿದರೂ ರೇಪ್ ಹೆಚ್ಚಾಗುತ್ತವೆ ಎಂದು ಗುಲ್ಲೆಬ್ಬಿಸುವ ಹಿಂದೂ ಸ್ವಾಮಿಗಳಿದ್ದಾರೆ. ಮಠಗಳಲ್ಲಿ ಮಹಿಳೆಯರಿಗೆ ಉತ್ತರಾಧಿಕಾರವಿಲ್ಲ, ಹೆಣ್ಣು ಭ್ರೂಣಹತ್ಯೆಗಳು ನಿಂತಿಲ್ಲ, ಸಂಸತ್ತಿನಲ್ಲಿ ಮಹಿಳಾ ಮೀಸಲಾತಿ ಜಾರಿಯಾಗಿಲ್ಲ. ಹೀಗಿರುವಾಗ ಅಂಬೇಡ್ಕರರು ಬಯಸಿದ ಲಿಂಗತಾರತಮ್ಯ ನಾಶದ ಪ್ರಕ್ರಿಯೆ ಇನ್ನೂ ಜೀವಂತ. ಅಂಬೇಡ್ಕರರೇ ಸಂಶೋಧಿಸಿರುವಂತೆ ಹೆಣ್ಣನ್ನು ಸಗೋತ್ರ ವಿವಾಹಕ್ಕೆ ಗಂಟು ಹಾಕಿ ಹಿಂದೂ ಸಮಾಜ ಜಾತಿವ್ಯವಸ್ಥೆಯನ್ನು ಕಾಪಾಡಿಕೊಂಡು ಬಂದಿದೆ. ಆದ್ದರಿಂದ ಸ್ತ್ರೀ ವಿಮೋಚನೆಯ ದಾರಿಯಲ್ಲಿಯೇ ಜಾತಿ ವಿನಾಶ ಮತ್ತು ಅಸ್ಪೃಶ್ಯತೆ ನಾಶವೂ ಸೇರಿದೆ.

ಭಾರತವನ್ನು ಆಳುವವರ್ಗ ಮುಖ್ಯವಾಗಿ ಬ್ರಾಹ್ಮಣ್ಯ ಮತ್ತು ಬನಿಯಾ ವರ್ಗವೆಂದೇ ಅಂಬೇಡ್ಕರರ ಖಚಿತ ಅಭಿಪ್ರಾಯ. ಈ ಜುಗಲ್ ಬಂಧಿಯನ್ನು ಮುರಿಯುವುದೇ ಶೋಷಿತ ವರ್ಗಗಳ ಮುಖ್ಯ ಅಜೆಂಡಾ ಆಗಬೇಕಿತ್ತು. ಆದರೆ ಇದುವರೆವಿಗೂ ಅಂತಹ ಗಟ್ಟಿಯಾದ ದನಿ ಬಂಡವಾಳಶಾಹಿಗಳ ವಿರುದ್ಧವಾಗಿ ಶೋಷಿತರಿಂದ ಕೇಳಿಬಂದಿಲ್ಲ, ಬದಲಾಗಿ 90 ರ ದಶಕದ ನಂತರ ಆಳುವ ವರ್ಗಗಳು ಅಂಬೇಡ್ಕರರಿಗೆ ಭಾರತ ರತ್ನ ಘೋಷಿಸಿ ಬಂಡವಾಳಶಾಹಿಗಳಿಗೆ ಮಣೆ ಹಾಕಿದವು. ಅದರ ಪರಿಣಾಮವಾಗಿ ಇಂದು ನೆಲ, ಜಲ, ಪರಿಸರ ಮತ್ತು ಮೀಸಲಾತಿಯನ್ನು ಕಳೆದುಕೊಳ್ಳುತ್ತಿದ್ದೇವೆ. ಆದರೆ ಅಂಬೇಡ್ಕರರ ಕನಸಿನ ಪ್ರಕಾರ 'ಕೃಷಿ ಸರ್ಕಾರಿ ಉದ್ಯಾರಿಕೆಯಾಗಬೇಕಿತ್ತು, ಸಾಮುದಾಯಿಕ ಬೇಸಾಯ ಜಾರಿಯಾಗಬೇಕಿತ್ತು, ವಿಮೆ, ಬೃಹತ್ ಉದ್ಯಮಗಳೆಲ್ಲವೂ ಸರ್ಕಾರಿ ಸ್ವಾಮ್ಯದಲ್ಲಿ ನಡೆಯಬೇಕಿತ್ತು'. ಇಂದು ಅಂಬೇಡ್ಕರರ ಈ ಕ್ರಾಂತಿಕಾರಿ ಆರ್ಥಿಕ ನೀತಿಗಳನ್ನೇ ಆಳುವ ಸರ್ಕಾರಗಳು ನುಂಗಿ ನೀರು ಕುಡಿದಿವೆಯಲ್ಲದೇ ದೇಶವನ್ನು ಸ್ವದೇಶಿ ಮತ್ತು ವಿದೇಶಿ ಬಂಡವಾಳಶಾಹಿಗಳಿಗೆ ಅಡವಿಟ್ಟಿದ್ದಾರೆ. ಆದ್ದರಿಂದ ಅಂಬೇಡ್ಕರರೇ ಹೇಳುವಂತೆ 'ಸಿರಿವಂತರ ಸಿರಿತನ ಬಡವರ ದರಿದ್ರತನದಲ್ಲಿದೆ. ಇದನ್ನು ನಿವಾರಿಸಲು ದುಡಿಯುವ ಜನರೆಲ್ಲರೂ ಜಾತಿಮತಗಳನ್ನು ಧಿಕ್ಕರಿಸಿ ಸಂಘಟಿತರಾಗಬೇಕು'.

ಉಳ್ಳವರ ಪ್ರಭುತ್ವವನ್ನೂ ಸಹ ಅಂಬೇಡ್ಕರರು ಕಿತ್ತೊಗೆಯಬೇಕೆಂದೇ ಬಯಸಿದ್ದರು. ಅಂದರೆ ಅನುವಂಶೀಯ ರಾಜಕಾರಣ, ಮೇಲ್ಜಾತಿ-ಮೇಲ್ವರ್ಗ ರಾಜಕಾರಣ, ರಾಜೇರಾಜಕಾರಣವನ್ನು ಬುಡಮೇಲು ಮಾಡಬೇಕೆಂಬುದೇ ಅವರ ಧ್ಯೇಯವಾಗಿತ್ತು, ಕಾಂಗ್ರೆಸ್ ಸರ್ಕಾರದಲ್ಲಿ ಮಂತ್ರಿ ಪದವಿಯಲ್ಲಿದ್ದಾಗಲೂ 'ನಾನು ನೀರಿನಲ್ಲಿ ಕರಗುವ ಮಣ್ಣಲ್ಲ, ನೀರಿನ ದಿಕ್ಕು ಬದಲಿಸುವ ಹೆಬ್ಬಂಡೆ' ಎಂದೇ ಹೇಳಿದ್ದರು. ಅವರ ಪ್ರಜಾಪ್ರಭುತ್ವ ಕಲ್ಪನೆ ಲಿಂಕನ್ ಅವರ ಹೇಳಿಕೆಗಿಂತಲೂ ಸ್ಪಷ್ಟವಾಗಿದೆ. "ಆಳುವವರು, ರಾಜರುಗಳು, ಸರ್ವಾಧಿಕಾರಿಗಳು ಅಥವಾ ಅನುಕೂಲಿತ ವರ್ಗಗಳೆನ್ನದೆ ಬೇರೆಯವರಿಂದ ಆಳಿಸಿಕೊಳ್ಳುವುದಕ್ಕಿಂತ ತಾವೇ ಆಳ್ವಿಕೆ ಮಾಡಿಕೊಳ್ಳುವ ಜನರ ಬಯಕೆಯನ್ನು ವ್ಯಕ್ತಪಡಿಸುವುದೇ ಸ್ವಯಂ ಸರ್ಕಾರವಾಗಿದ್ದು ಇದೇ ಪ್ರಜಾಪ್ರಭುತ್ವ" ಎನ್ನುವ ಅಂಬೇಡ್ಕರರಿಗೆ ಸಂಸದೀಯ ಪ್ರಜಾಪ್ರಭುತ್ವದ ಮಿತಿಗಳೂ ತಿಳಿದಿದ್ದವು. ಕಣ್ಣು ಕುಕ್ಕುವಂತಹ ಅಸಮಾನತೆ ನಡುವೆ ಸಂಸದೀಯ ಪ್ರಜಾಪ್ರಭುತ್ವ ಯಶಸ್ವಿಯಾಗಲಾರದು ಎಂದೇ ಎಚ್ಚರಿಸಿದ್ದರು. ಆದ್ದರಿಂದಲೇ ಅವರು ಸಾಮಾಜಿಕ ಸಮಾನತೆ ಮತ್ತು ಆರ್ಥಿಕ ಸಮಾನತೆಯೇ ಪ್ರಜಾಪ್ರಭುತ್ವದ ಮೊದಲ ಆದ್ಯತೆ ಎಂದು ಬಗೆದಿದ್ದರು. ಸಹೋದರತೆಯ ಅಡಿಪಾಯದಲ್ಲಿ ಭಾರತವನ್ನು ಕಟ್ಟ ಬಯಸಿದ್ದರು.

ಹೀಗೆ ಅಂಬೇಡ್ಕರರು ಕನಸಿದ ಭಾರತ ಐದು ಅಂಶಗಳಿಂದ ಮುಕ್ತಿ ಬಯಸುತ್ತದೆ. ಅಂದರೆ ಅಸ್ಪೃಶ್ಯತಾ ಮುಕ್ತ, ಜಾತಿ ಮುಕ್ತ, ಲಿಂಗ ತಾರತಮ್ಯ ಮುಕ್ತ, ಬಂಡವಾಳಶಾಹಿ ಮುಕ್ತ ಹಾಗೂ ಸರ್ವಾಧಿಕಾರ ಮುಕ್ತ ಭಾರತವನ್ನು ಬಯಸುತ್ತದೆ. ಈ 'ಪಂಚ ಮುಕ್ತ' ಭಾರತ ನಿರ್ಮಾಣವಾದಾಗಲೇ ಅಂಬೇಡ್ಕರ್‌ರ ಜಯಂತಿಯನ್ನು ವಿಜೃಂಭಣೆಯಿಂದ ಮನೆಮನೆಗಳಲ್ಲಿ ಆಚರಿಸಬಹುದಾಗಿದೆ. ಅಲ್ಲಿಯವರೆಗೆ ಪ್ರತಿ ಅಂಬೇಡ್ಕರ್ ಜಯಂತಿಯೂ ನಮಗೆ 'ಶಿಕ್ಷಣ, ಸಂಘಟನೆ, ಹೋರಾಟ'ವೇ ಆಗಿರುತ್ತದೆ.

ಆದರೆ 125 ನೇ ಅಂಬೇಡ್ಕರ್‌ರವರ ಜಯಂತಿಯನ್ನು ಎಲ್ಲಾ ಸರ್ಕಾರಗಳೂ ವಶಪಡಿಸಿಕೊಂಡಿವೆ. ಊರುಕೇರಿಗಳಲ್ಲಿ ಸರಳವಾಗಿ ಆದರೆ ಜನತೆಯನ್ನು ಎಚ್ಚರಿಸುತ್ತಿದ್ದ ದಿನಾಚರಣೆಗಳು ಕಡಿಮೆಯಾಗಿ ಹೋಗಿವೆ. ಹಲವು ಕಡೆ ದಲಿತರು ಇನ್ನೂ ಅಂಬೇಡ್ಕರರ ವೃತ್ತ, ಭವನ, ಪ್ರತಿಮೆ ಪ್ರತಿಷ್ಠಾಪನೆಯ ಕನಸುಗಳನ್ನೇ ಕಾಣುತ್ತಿದ್ದಾರೆ. ಮತ್ತೊಂದೆಡೆ ಅಂಬೇಡ್ಕರ್‌ರ ಪ್ರತಿಮೆಗೆ ಹಾಲಿನ ಅಭಿಷೇಕ ಮಾಡುವಷ್ಟು ಅತಿರೇಕಕ್ಕೆ ದಲಿತ ನಾಯಕರು ಇಳಿದಿದ್ದಾರೆ. ಇಂತಹ ದಲಿತ ನಾಯಕರನ್ನು ದೂರವಿರಿಸಿ ಸಾಂವಿಧಾನಿಕ ಹಕ್ಕುಗಳನ್ನು ಕಳೆದುಕೊಂಡು ಬದುಕುತ್ತಿರುವ ಶೋಷಿತರೆಲ್ಲರೂ ನೈಜ ಅಂಬೇಡ್ಕರರ ವಿಚಾರಗಳ ಅನುಷ್ಠಾನಕ್ಕೆ ಮುಂದಾಗಬೇಕಿದೆ. ನಮಗೆ 'ಪಂಚತೀರ್ಥ' ಬೇಡ, 'ಪಂಚಮುಕ್ತ' ಸಮಾಜವನ್ನು ಕೊಡಿ ಎಂದು ಆಳುವ ಸರ್ಕಾರಗಳನ್ನು ಕೇಳಬೇಕಿದೆ. 'ಪಂಚಮುಕ್ತ' ಸಮಾಜಕ್ಕಾಗಿ ಹೋರಾಡಬೇಕಿದೆ.

ಆದ್ದರಿಂದ ಕೇವಲ 'ಪಂಚತೀರ್ಥ' ಬಯಸುವವರು



ಅಂಬೇಡ್ಕರ್ ವಿರೋಧಿಗಳೆಂದೂ, ಯಾರು 'ಪಂಚಮುಕ್ತ' ಭಾರತ ಬಯಸುತ್ತಿದ್ದಾರೋ ಅವರು ಅಂಬೇಡ್ಕರ್‌ರ ಅನುಯಾಯಿಗಳೆಂದೂ ನಾವು ಎದೆ ತಟ್ಟಿ ಹೇಳುವ ಕಾಲ ಬಂದಿದೆ.


● ವಿಕಾಸ ಆರ್ ಮೌರ್ಯ

ಹಾಗೆಯೇ ಉಳಿಸಿ ಅವರನ್ನು ತಮಗೆ ತಾವೇ ತಾನು ಇತರರರಿಗಿಂತ ದೊಡ್ಡವ ಎಂದುಕೊಳ್ಳುವಂತೆ ಮಾಡುತ್ತದೆ. ಈ ಹಿನ್ನೆಲೆಯಲ್ಲಿ ಯಾಕೆ ಹಿಂದೂಗಳು ಅಸ್ಪೃಶ್ಯತಾಚರಣೆ ಆಚರಿಸುವುದನ್ನು ಬಿಟ್ಟುಕೊಡಲು ಇಚ್ಛಿಸುವುದಿಲ್ಲ ಎಂಬುದಕ್ಕೆ ಇದೇ ಪ್ರಮುಖ ಕಾರಣ." (ಅಂಬೇಡ್ಕರ್ ಬರಹಗಳು, ಇಂಗ್ಲಿಷ್ ಸಂ.5, ಪು. 102). ಮುಂದುವರಿದು ಅಸ್ಪೃಶ್ಯತೆ ಅದು ಹೇಗೆ ನಿರ್ಮೂಲನೆಯಾಗಬಹುದು ಎಂದು ಕೇಳುತ್ತಾ ಅಂಬೇಡ್ಕರರು ಕೇಳುವುದೇನೆಂದರೆ "ಅಸ್ಪೃಶ್ಯತೆ ನಾಶವಾಗುತ್ತದೆ. ಅದು ಯಾವಾಗ ಅಂದರೆ ಹಿಂದೂ ಸಾಮಾಜಿಕ ಶ್ರೇಣೀಕರಣ, ವಿಶೇಷವಾಗಿ ಜಾತಿಪದ್ಧತಿ ವಿಸರ್ಜನೆಯಾದಾಗ, ನಾಶವಾದಾಗ. ಪ್ರಶ್ನೆ ಎಂದರೆ ಇದು ಸಾಧ್ಯವೆ?" ಹಾಗೆ ಇದು ಸಾಧ್ಯವಿಲ್ಲ ಎಂದು ಹೇಳುತ್ತಲೇ ಅವರು "ಯಾಕೆಂದರೆ ಜಾತಿಪದ್ಧತಿಗೆ ಇರುವ ಅನುಮೋದನೆ ಅದು ಧಾರ್ಮಿಕ ಅನುಮೋದನೆ. ಹೇಗೆಂದರೆ ವರ್ಣವ್ಯವಸ್ಥೆಯ ನವರೂಪವಾದ ಈ ಜಾತಿ, ಹಿಂದೂಗಳ ಪವಿತ್ರ ಗ್ರಂಥಗಳಾದ, ದೋಷಾತೀತವೆನಿಸಿದ ವೇದಗಳ ಅನುಮೋದನೆ ಪಡೆದಿದೆ. ದುರದೃಷ್ಟಕರವೆಂದರೆ ಯಾವುದೇ ವಿಷಯವಾಗಲೀ ಹೀಗೆ ಅದು ಧಾರ್ಮಿಕತೆಯ ಅನುಮೋದನೆ ಪಡೆಯಿತೆಂದರೆ ಅದು ಅಂಥ ಅನುಮೋದನೆಯ ಕಾರಣಕ್ಕಾಗಿಯೇ ಪವಿತ್ರವಾಗಿಬಿಡುತ್ತದೆ, ಶಾಶ್ವತದ್ದಾಗಿಬಿಡುತ್ತದೆ. ಈ ಕಾರಣಕ್ಕಾಗಿ ಹಿಂದೂಗಳಿಗೆ ಜಾತಿ ಎಂದರೆ ಪವಿತ್ರ, ಜಾತಿ ಎಂದರೆ ಶಾಶ್ವತ." ಹೀಗಿರುವಾಗ ಇಂಥ ಪವಿತ್ರ ಪದ್ಧತಿಯನ್ನು, ಹಿಂದೂ ಧರ್ಮದ ಆಧಾರಸ್ತಂಭವಾಗಿರುವ ಈ ಜಾತಿವ್ಯವಸ್ಥೆಯನ್ನು ಹಿಂದೂಗಳು ನಾಶಗೊಳಿಸುವರೇ? ಪ್ರಾಕ್ಟಿಕಲ್ ಆಗಿ ಅಂಬೇಡ್ಕರರು ಕೇಳುವ ಈ ಪ್ರಶ್ನೆ ಗಮನಿಸಿ. ಪ್ರಶ್ನೆಯೇನೆಂದರೆ ಅಂಬೇಡ್ಕರರು ಕೇಳುವ ಈ ಪ್ರಶ್ನೆ ಆದ್ಯಾವ ದೃಷ್ಟಿಕೋನದಲ್ಲಿ ಆರ್‌ಎಸ್‌ಎಸ್‌ನ ಮುಖವಾಣಿಯೊಂದು ಪ್ರಕಟಿಸುವ ವಿಚಾರವಾಗುತ್ತದೆ?

ಅಂತಿಮವಾಗಿ ಅಂಬೇಡ್ಕರರು ಹೇಳುತ್ತಾರೆ "ಫ್ಯಾಸಿಸ್ಟ್ ಅಥವಾ ನಾಜಿ ಸಿದ್ಧಾಂತದ ಲಕ್ಷಣದಂತೆಯೇ ಹಿಂದೂತ್ವ ಒಂದ ರಾಜಕೀಯ ಸಿದ್ಧಾಂತ. ಎಲ್ಲಕ್ಕಿಂತ ಹೆಚ್ಚಾಗಿ ಅದು ಪ್ರಜಾಪ್ರಭುತ್ವ ವಿರೋಧಿ" (ಅಂಬೇಡ್ಕರ್ ಬರಹಗಳು, ಇಂಗ್ಲಿಷ್ ಸಂ.17, ಭಾಗ.1, ಪು.346). ಅಂದಹಾಗೆ ಪ್ರಜಾಪ್ರಭುತ್ವ ವಿರೋಧಿ ವ್ಯವಸ್ಥೆಯ ಉದ್ದೇಶವಾದರೂ ಏನಿರುತ್ತದೆ? ವಿರೋಧಿಗಳನ್ನು ಬಗ್ಗುಬಡಿಯುವುದು. ಬಗ್ಗುಬಡಿಯುವುದು ಅದು ಹೇಗೆ? ವಿರೋಧಿಗಳನ್ನು ಒಳಕ್ಕೆಳೆದುಕೊಳ್ಳುವುದು ಅಥವಾ ಅವರ ವಿಚಾರಗಳು ಮತ್ತು ನಮ್ಮ ವಿಚಾರಗಳು ಎರಡೂ ಒಂದೇ ಎಂದು ಬಿಡುವುದು! ತನ್ಮೂಲಕ ಅಂಬೇಡ್ಕರರ ಆದಮ್ಯ ವಿಚಾರಗಳ ಪ್ರಸ್ತುತತೆಯನ್ನು, ಅದರಿಂದ ಉಂಟಾಗಬಹುದಾದ ವೈಚಾರಿಕ ವಿಪ್ಲವವನ್ನು ಇನ್ನಿಲ್ಲವಾಗಿಸುವುದು! ಈ ಹಿನ್ನೆಲೆಯಲ್ಲಿ ಮೋದಿಯವರಿಂದ ಅಂಬೇಡ್ಕರ್ ಗುಣಗಾನ, ಆರ್‌ಎಸ್‌ಎಸ್ ಮುಖವಾಣಿಯಿಂದಲೂ ಅಂಬೇಡ್ಕರ್ ಕುರಿತು ವಿಶೇಷ ಸಂಚಿಕೆ ಇತ್ಯಾದಿಗಳ 'ಸದುದ್ದೇಶ' ಇದಲ್ಲದೆ ಮತ್ತೇನಾಗಿರಲು ಸಾಧ್ಯ?

ಈ ನಿಟ್ಟಿನಲ್ಲಿ ಹಿಂದೂತ್ವವಾದಿಗಳ ಇಂತಹ ಉದ್ದೇಶ ಅದು ಯಶ ಕಾಣುತ್ತದೆಯೆ? ಅಥವಾ ಅಂಬೇಡ್ಕರರ ವಿಚಾರಗಳು ಅವರು ವಶಪಡಿಸಿಕೊಳ್ಳುವಷ್ಟು ದುರ್ಬಲವೆ? ಖಂಡಿತ ಇಲ್ಲ, ಯಾಕೆಂದರೆ ಹಿಂದೂತ್ವವಾದಿಗಳ ಪ್ರಾಕೃತಿಕ ಗುಣ ಆಗಾಗ ಹೊರಹುಮ್ಮುತ್ತಿರುತ್ತದೆ! ಅದು ರೋಹಿತ್ ವೇಮುಲ ಹತ್ಯೆ ಪ್ರಕರಣವಿರಬಹುದು... ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತರ ಮೀಸಲಾತಿ ಪರಾಮರ್ಶೆಯಾಗಬೇಕು ಎಂಬ ಹೇಳಿಕೆಯಿರಬಹುದು... ಉತ್ತರಪ್ರದೇಶದ ಬಿಜೆಪಿ ಮಹಿಳಾ ಘಟಕದ ಅಧ್ಯಕ್ಷೆ ಮಧು ಮಿಶ್ರಾ "ಒಂದು ಕಾಲದಲ್ಲಿ ನಮ್ಮ ಚಪ್ಪಲಿ ಶುಚಿಗೊಳಿಸುತ್ತಿದ್ದವರು ಸಂವಿಧಾನದ ಸಹಾಯದಿಂದ ಇಂದು ಆಳುವಂತವರಾಗಿದ್ದಾರೆ" ಎಂದು ಹೇಳಿದ್ದಿರಬಹುದು...


ಹೀಗೆ ಹೊರಹೊಮ್ಮುತ್ತಲೇ



ಇದೆ! ಈ ಹಿನ್ನೆಲೆಯಲ್ಲಿ ಪ್ರಕೃತಿಯ ವಿರುದ್ಧ ಯಾರೂ ಕೂಡ ನಡೆಯಲು ಸಾಧ್ಯವಿಲ್ಲ, ಯಾಕೆಂದರೆ ಅಂಬೇಡ್ಕರ್ ಸೃಷ್ಟಿಮಾಡಿಟ್ಟು ಹೋಗಿರುವ ಪ್ರಕೃತಿ ಆ ತರಹದ್ದು!

● ರಘೋತ್ತಮ ಹೊ.ಬ

ಬಾಬಾಸಾಹೇಬ್ ಅಂಬೇಡ್ಕರ್: ನಾವು ಕ್ರಮಿಸಬೇಕಿರುವ ದಾರಿ ಭಾರತೀಯ ಸಂವಿಧಾನ ಎಂಬ ರೂಪಕ



'ಬಾಬಾಸಾಹೇಬ್ ಅಂಬೇಡ್ಕರ್' ನನ್ನಂಥವರಿಗೆ ಕೇವಲ ಹೆಸರಲ್ಲ; ನೆನಪಲ್ಲ; ನರನಾಡಿಗಳಲ್ಲಿ ಪ್ರವಹಿಸುವ ಜೀವಚೈತನ್ಯ... ಎದೆಯ ಗಾಯದ ಮುಲಾಮು; ನೋವಿನೊಳಗೂ ಅರಳುವ ನಗು. ನನಗೆ ಬುದ್ಧಿ ಬಂದಾಗಿನಿಂದ ಅವರನ್ನು ದೊಡ್ಡಪ್ಪ ಅನ್ನುತ್ತೇನೆ. ನನ್ನ ಮಕ್ಕಳು ಅಂಬೇಡ್ಕರ್ ತಾತ ಅನ್ನುತ್ತಾರೆ. ದಲಿತ ಎಂಬ ಕಾರಣಕ್ಕೇ ನನ್ನೊಳಗೆ ಹೀಗೆ ಅವರು ತುಂಬಿಕೊಂಡರೇನೋ ಅನ್ನಿಸಿದಾಗಲೆಲ್ಲ ಅಂಬೇಡ್ಕರ್ ಯಾವ ಜಾತಿ ಎಂದು ಕೇಳಿಕೊಳ್ಳುತ್ತೇನೆ; ಉತ್ತರ ಸಿಗುವುದಿಲ್ಲ ಎಂದು ಅರಿವಾಗುವ ಹೊತ್ತಿಗೆ ನನಗೆ ಈ ಸಮಾಜ ಕೊಟ್ಟ ಜಾತಿ ಸರ್ಟಿಫಿಕೇಟು ಸುಟ್ಟು ಕರಕಲಾದ ಅನುಭವವಾಗುತ್ತದೆ. ಆಗ ಅಂಬೇಡ್ಕರ್ ನನ್ನ ಮೈದಡವಿ ನಕ್ಕಂತಾಗಿ ಆ ನಗುವೇ ಜಗತ್ತನ್ನೆಲ್ಲಾ ಒಂದು ಮಾಡುವ ಮಂತ್ರದಂತೆ ಭಾಸವಾಗುತ್ತದೆ.

ಜಾತಿಯ ಕಾರಣಕ್ಕೆ ಅತೀವ ಕಷ್ಟಗಳನ್ನು ಅನುಭವಿಸಿದವನು ನಾನು. ನನ್ನ ಕಾಲಕ್ಕೇ ಹೀಗಾದರೆ ನನ್ನ ಅಜ್ಜ-ತಾತ, ಅಪ್ಪ-ಅವ್ವರ ಕಾಲದ ಕ್ರೂರತೆಯನ್ನು



ನೆನಪು ಮಾಡಿಕೊಳ್ಳುವುದೂ ಕಷ್ಟ. ನಮ್ಮಂಥವರ ನೆನಪಿಗೆ ಸುಡುವ ಗುಣವಿರುತ್ತದೆ. ಹಾಗೆ ಸುಟ್ಟುಕೊಂಡು ಬದುಕುವುದರಿಂದ ಪಾರಾಗುವ ಸಲುವಾಗಿ ಇವತ್ತು ದಲಿತರನೇಕರು ತಮ್ಮ ಗತಗಳಿಂದ ತಪ್ಪಿಸಿಕೊಂಡು ಓಡಿಹೋಗುತ್ತಿದ್ದಾರೆ. ಹಾಗೆ ಓಡಿಹೋಗಿ ಸುಡುವ ವರ್ತಮಾನದಲ್ಲಿ ಸಿಲುಕಿಕೊಳ್ಳುತ್ತಾರೆ.

ಬಾಬಾಸಾಹೇಬರು ಈ ನೆಲದಲ್ಲಿ ಹುಟ್ಟದೇಹೋಗಿದ್ದರೆ ನಾವೆಲ್ಲಾ ಏನಾಗಿರುತ್ತಿದ್ದೆವು ಎಂಬುದನ್ನು ನೆನೆದರೇ ಭಯವಾಗುತ್ತದೆ.

ಶೋಷಿತ ಸಮುದಾಯಗಳಿಗೆ ಸಾಮಾಜಿಕ ಘನತೆಯನ್ನು ದಕ್ಕಿಸಿಕೊಡುವ ಅಂಬೇಡ್ಕರ್ ಅವರ ಹೋರಾಟ ಅಷ್ಟು ಸುಲಭಕ್ಕೆ, ಮೇಲ್ನೋಟಕ್ಕೆ ಅರ್ಥವಾಗುವಂಥಾದ್ದಲ್ಲ, ಅದಕ್ಕಾಗಿ ಅವರು ಮಾಡಿದ ತ್ಯಾಗ, ಸವೆಸಿದ ಬದುಕು ನಮ್ಮ ಅಳತೆಗೆ ಸಿಗುವಂಥಾದ್ದೂ ಅಲ್ಲ, ಐದು ಸಾವಿರ ವರ್ಷಗಳಿಂದ ಕೊಬ್ಬಿಹೋಗಿದ್ದ ವೈದಿಕ ಸಂಸ್ಕೃತಿಯ ಪಾರುಪತ್ಯವಿದ್ದ ದೇಶಕ್ಕೊಂದು ಸಂವಿಧಾನ ಬರೆಯಲು ಈ ನೆಲದಲ್ಲಿ ಇಂದಿಗೂ ಗುಲಾಮಗಿರಿಯನ್ನು ಅನುಭವಿಸುತ್ತಿರುವ ಸಮುದಾಯದ ವ್ಯಕ್ತಿಯೊಬ್ಬ ಅನಿವಾರ್ಯವಾಗುವುದಿದೆಯಲ್ಲಾ.. ಅವನ ಆಲೋಚನೆಯ ದಾರಿಯಲ್ಲಿ ಇಡೀ ದೇಶ ನಡೆಯುವುದಿದೆಯಲ್ಲಾ.. ಯಾವ ಪವಾಡವದು..? ಈ ಪವಾಡದಂಥಾದ್ದನ್ನು ಆಗುಮಾಡಲು ಅಂಬೇಡ್ಕರ್ ನಡೆಸಿರಬಹುದಾದ ಪ್ರಯತ್ನಗಳು ಯಾವ ಮಟ್ಟದವು ಎಂಬುದನ್ನು ಯೋಚಿಸಿದಾಗಲೆಲ್ಲಾ ಸೋಜಿಗವಾಗುತ್ತದೆ.

ಇದನ್ನೆಲ್ಲಾ ಯೋಚಿಸುತ್ತಾ ಕುಳಿತಾಗ ನನಗೆ ಭಾರತೀಯ ಸಂವಿಧಾನ ಎಂಬುದು ಕೇವಲ ಶೋಷಿತರ ಪಾಲಿನ ಕಾನೂನಾತ್ಮಕ ಸವಲತ್ತುಗಳ ಸಂದಾಯ ಮಾತ್ರವಲ್ಲ ಅನ್ನಿಸುತ್ತದೆ. ಅದೊಂದು ರೂಪಕ, ಮಾನವ ಘನತೆಯ ಉಳಿವಿನ ರೂಪಕ. ಈ ರೂಪಕವು ಭಾರತದ ತಳಸಮುದಾಯಗಳ ಗರ್ಭದಲ್ಲಿಯೇ ಮುರುಟಿಹೋಗಿದ್ದ ಜೀವಕಾರುಣ್ಯವನ್ನು ಚಿಗುರಿಸಿ ಅರವತ್ತೈದು ವರ್ಷಗಳ ಕಾಲ ಪೋಷಿಸಿದೆ. ಇಷ್ಟು ಹೊತ್ತಿಗೆ ಹೆಮ್ಮರವಾಗಿ ದೇಶದ ತುಂಬಾ ತನ್ನ ಕೊಂಬೆಗಳನ್ನು ಹರಡಿ ಕಂಗೆಟ್ಟವರಿಗೆಲ್ಲಾ ನೆರಳು ನೀಡಬೇಕಿದ್ದ ಆ ಹೆಮ್ಮರ ಅದೇ ಐದು ಶತಮಾನಗಳ ವೈದಿಕ ಹುನ್ನಾರದಿಂದ ಕುಬ್ಜಗೊಂಡಿದೆ. ಈ ಕುಬ್ಜತೆಯ ರೋಗವನ್ನು ವಾಸಿಮಾಡುವುದು ಅಂಬೇಡ್ಕರರ ಸಂವಿಧಾನದಿಂದಲೇ ಸಾಧ್ಯ ಹೊರತು ಇನ್ನಾವುದರಿಂದಲೂ ಸಾಧ್ಯವಿಲ್ಲ, ಇದೆಲ್ಲವನ್ನೂ ಲೆಕ್ಕಾಚಾರ ಹಾಕಿ, ಮುಂಗಾಣ್ಕೆಯಿಂದಲೇ ಅವರು ಈ ಕೆಲಸಕ್ಕೆ ಕೈಹಾಕಿದ್ದಾರೆ ಅನ್ನಿಸುತ್ತದೆ.

ಅಂಬೇಡ್ಕರ್ ಕೇವಲ ವ್ಯಕ್ತಿಯಲ್ಲ


'ಅಂಬೇಡ್ಕರ್ ಕೇವಲ ವ್ಯಕ್ತಿಯಲ್ಲ' ಎಂಬ ಮಾತು ಕ್ಲೀಷೆಯಂತೆ ಕಂಡರೂ ಸತ್ಯ. ಅಂಬೇಡ್ಕರ್ ಎಂದರೆ ಶೋಷಿತ ಸಮುದಾಯಗಳು ಕ್ರಮಿಸಬೇಕಿರುವ ದಾರಿ; ಉಣ್ಣಬೇಕಿರುವ ಅನ್ನ; ಓದಬೇಕಿರುವ ಪುಸ್ತಕ; ಬರೆಯಬೇಕಿರುವ ಚಿತ್ರ; ಹಾಡಬೇಕಿರುವ ಕವಿತೆ.. ಅಂಬೇಡ್ಕರ್ ಎಂದರೆ ಶೋಷಕರು ಕಾಣಬೇಕಿರುವ ದಾರಿ; ಕುಡಿಯಬೇಕಿರುವ ನೀರು; ಮೀಯಬೇಕಿರುವ ನದಿ.. ಒಟ್ಟಿನಲ್ಲಿ ಅಂಬೇಡ್ಕರ್ ಎಂದರೆ ಈ ನೆಲದ ಜೀವಕಾರುಣ್ಯ.

ಚಪ್ಪಲಿ ಹೊಲೆಯುವ ಹುಡುಗನೊಬ್ಬ ತನ್ನ ಅಂಗಡಿಯಲ್ಲಿ ಅಂಬೇಡ್ಕರರ ಫೋಟೋ ಹಾಕಿಕೊಂಡು ಘನತೆಯ ಬದುಕು ಕನಸುತ್ತಾನೆ. ತರಕಾರಿ ಮಾರುವ ಹುಡುಗಿಯೊಬ್ಬಳು ಅಂಬೇಡ್ಕರ್ ಸಂಘಕ್ಕೆ ತನ್ನ ಬೆವರ ದುಡಿಮೆಯಲ್ಲಿ ದೇಣಿಗೆ ಕೊಟ್ಟು ನಿಟ್ಟುಸಿರಾಗುತ್ತಾಳೆ. ಪಾಠ ಹೇಳುವ ಶಿಕ್ಷಕನೊಬ್ಬ ಅಂಬೇಡ್ಕರ್ ಹೆಸರು ಹೇಳುವಾಗೆಲ್ಲಾ ಕಾವ್ಯದ ಘಮಲನ್ನು ಹರಡುವ ದುಂಬಿಯ ಹಾಗೆ ಹಗುರಾಗುತ್ತಾನೆ... ಇದೆಲ್ಲಾ ಬರೀ ಭೌತಿಕ ಪ್ರಕ್ರಿಯೆಗಳು ಎಂದು ಅನ್ನಿಸುವುದಿಲ್ಲ ನನಗೆ. ಪಕ್ಕದಲ್ಲಿ ಕುಳಿತ ತನ್ನಂಥದ್ದೇ ಮನುಷ್ಯರನ್ನು ನಂಬಲೂ, ಮುಟ್ಟಲೂ ಹೇಸುವ ದೇಶದಲ್ಲಿ ನಾವು ಈ ಮೇಲಿನ ಪ್ರಕ್ರಿಯೆಗಳಿಗೆ ಸಾಕ್ಷಿಯಾಗುತ್ತಿದ್ದೇವೆಂದರೆ ಈ ನೆಲಕ್ಕೆ ಏನು ಬೇಕಾಗಿದೆ ಅನ್ನುವುದು ಸ್ಪಷ್ಟ.

ವರ್ತಮಾನ ಮತ್ತು ಅಂಬೇಡ್ಕರ್

ಮೇಲಿನ ಎಲ್ಲ ಭಾವನಾತ್ಮಕ ನನ್ನಿಗಳ ಜೊತೆಗೆ ಅಂಬೇಡ್ಕರ್‌ರನ್ನು ಕೇವಲ ಸಂಕೇತವಾಗಿಸುವ, ರಾಜಕೀಯ ದಾಳವಾಗಿಸುವ, ಜಾತಿಗೆ ಕಟ್ಟಿಹಾಕುವ.. ಎಂತೆಂಥವೋ ನಡೆಯುತ್ತಿರುವುದು ಸುಳ್ಳಲ್ಲ. ಈ ಸಂದರ್ಭದಲ್ಲಿ ಅಂಬೇಡ್ಕರ್ ಅವರನ್ನು ಸರಿಯಾಗಿ ಅರ್ಥಮಾಡಿಕೊಳ್ಳದ ಅಂಬೇಡ್ಕರ್ ಅನುಯಾಯಿಗಳಿಂದ, ದೇಶದ ಬಹುಸಂಖ್ಯಾತ ದಲಿತ ಸಮುದಾಯವನ್ನು ಇನ್ನೂ 'ಅಲ್ಲೇ' ಉಳಿಸುವ ತಂತ್ರದ ಸಾಧನವಾಗಿ ಅಂಬೇಡ್ಕರ್‌ರನ್ನು ಬಳಸಿಕೊಳ್ಳುತ್ತಿರುವ ರಾಜಕೀಯ ಇಚ್ಛಾಶಕ್ತಿಗಳಿಂದ, ಏಕ ಸಂಸ್ಕೃತಿಯ ಹೇರಿಕೆ ಹಾಗೂ ಹಿಂದೂಕರಣದ ಕುತಂತ್ರದ ಕಾರಣಕ್ಕೆ ಅಂಬೇಡ್ಕರ್ ಅವರನ್ನು ಬಳಸಿ ಬಿಸಾಡುವ ಆ ಮೂಲಕ ಸಂವಿಧಾನವನ್ನು ಅಪ್ರಸ್ತುತಗೊಳಿಸಿ ಮನುಧರ್ಮವನ್ನು ಹೇರಹೊರಟಿರುವ ಕೋಮುವಾದಿಗಳಿಂದ ನಮ್ಮನ್ನು, ದೇಶವನ್ನೂ, ಅಂಬೇಡ್ಕರರನ್ನೂ ಬಿಡಿಸಬೇಕಾಗಿದೆ.


ಈ ಹಿನ್ನೆಲೆಯಲ್ಲಿ ರೋಹಿತ್ ವೇಮುಲ ಮಾದರಿಯನ್ನು ದೇಶಾದ್ಯಂತ ಯುನಿವರ್ಸಿಟಿಗಳಲ್ಲಿ ಓದುತ್ತಿರುವ ದಲಿತ-ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು, ಕನ್ನಯ್ಯ ಕುಮಾರ್ ಮಾದರಿಯನ್ನು ದೇಶದ ಒಳಿತಿಗೆ ದುಡಿಯುತ್ತಿರುವ ದಲಿತ-ಹಿಂದುಳಿದ ಸಮಾಜಕಾರ್ಯಕರ್ತರು ಹಾಗೂ ಕಾನ್ಶಿರಾಂ ಮಾದರಿಯನ್ನು ಬಹುಜನರ ರಾಜಕೀಯ ಸಮಾನತೆಗಾಗಿ ಹೋರಾಡುತ್ತಿರುವ ರಾಜಕೀಯ ಪಕ್ಷಗಳು ಬಳಸಿಕೊಳ್ಳಬೇಕಾಗಿದೆ.



ಈ ದಾರಿ ಅಂಬೇಡ್ಕರರ ಶ್ರಮವನ್ನು ಗೌರವಿಸುವ, ಸಂವಿಧಾನ ಹಾಗೂ ದೇಶವನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ನಮಗೆ ಅನಿವಾರ್ಯ ಎಂದು ನನಗನ್ನಿಸುತ್ತಿದೆ.

● ತುಳಿಕುಂಟೆ ಮೂರ್ತಿ

ಅಂಬೇಡ್ಕರ್ ಅಂದರೆ...




ತಳಸಮುದಾಯಗಳ ಹಳ್ಳಿಯೊಂದರಲ್ಲಿ ಜನಿಸಿ, ಅಕ್ಷರ ಜಗತ್ತಿನಲ್ಲಿ ನನ್ನನ್ನು ನಾನು ತೆರೆದುಕೊಂಡು ಪ್ರೌಢ ಶಿಕ್ಷಣದ ಹಾದಿಯಲ್ಲಿ ಸಾಗುವ ವೇಳೆಗೆ ಗಾಂಧೀಜಿ, ಜವಾಹರ್‌ಲಾಲ್ ನೆಹರು, ಸುಭಾಷ್ ಚಂದ್ರ ಭೋಸ್, ಸರ್ದಾರ್ ವಲ್ಲಭ ಭಾಯಿ ಪಟೇಲ್ ಅವರಂತೆಯೇ ಅಂಬೇಡ್ಕರ್ ಅವರೂ ಕೂಡ ಒಬ್ಬ ರಾಷ್ಟ್ರ ನಾಯಕರು ಎಂಬ ಕಲ್ಪನೆಯೇ ಬೆಳೆದು ಬಂದಿತ್ತು.

ಆ ವೇಳೆಗೆ ನಮ್ಮ ಊರಿನಲ್ಲಿ ಅಂಬೇಡ್ಕರ್ ಸಂಘದ ಯುವಕರು ಏಪ್ರಿಲ್ 14 ರಂದು ಹಬ್ಬದಂತೆ ಮಾಡುತ್ತಿದ್ದ ಅಂಬೇಡ್ಕರ್ ಜಯಂತಿ ಕಾರ್ಯಕ್ರಮಗಳು ನನ್ನೊಳಗೆ ಅಂಬೇಡ್ಕರ್ ಅವರನ್ನು ಮಾತ್ರ ವಿಶೇಷವಾಗಿ ಪ್ರತಿಷ್ಠಾಪಿಸಿದವು. ಅಂಬೇಡ್ಕರ್ ಎಂಬ 'ಅರಿವು' ನನ್ನೊಳಗೆ ಮೊಳೆತದ್ದು ಅಂದಿನಿಂದಲೇ. ಹೈಸ್ಕೂಲು ಮುಗಿದು ಕಾಲೇಜಿನ ದಿನಗಳು ಪ್ರಾರಂಭವಾಗಿ ಇತರ ಊರುಗಳ ಗೆಳೆಯರು, ಸಹಪಾಠಿಗಳ ಸಂಗಡ ಬೆರೆಯುವಾಗಲೆಲ್ಲ 'ಜಾತಿ' ಒಳಗೊಳಗೇ ಪಾತ್ರವಹಿಸಿ, ಈ ರೀತಿಯ ಹೊಸ ಹೊಸ ಅನುಭವಗಳು ಸಮಾಜದಲ್ಲಿ 'ಅಸ್ಪೃಶ್ಯ' ಜಾತಿ ಜನಗಳ ಸ್ಥಿತಿ, ಸ್ಥಾನಗಳನ್ನು ಗುರ್ತಿಸಿಕೊಳ್ಳುವಂತೆ ಮಾಡಿದವು.

ಇತರ ಜಾತಿಯ ಸ್ನೇಹಿತರು ತಮ್ಮತಮ್ಮ ಜಾತಿಗಳ ಸಹಪಾಠಿಗಳನ್ನು ಗುರ್ತಿಸಿಕೊಂಡು ಗುಂಪಾಗುವುದನ್ನು ಕಾಣುತ್ತಿದ್ದ ನನಗೆ ನಮ್ಮ ಜಾತಿಯವರು ಯಾರು ಎಂದು ತಿಳಿದುಕೊಳ್ಳಲು ಹಂಬಲಿಸಿ ಹುಡುಕುವ, ಸ್ವಜಾತಿವರೊಡನೆ ಸೇರಿಕೊಳ್ಳುವ ಆಸಕ್ತಿ ಬೆಳೆದುಕೊಳ್ಳುತ್ತಾ ಹೋಯಿತು.

ನಾವು ಅಸ್ಪೃಶ್ಯರು, ಜಾತಿ ವ್ಯವಸ್ಥೆಯಲ್ಲಿ ನಮಗೆ ಅತ್ಯಂತ ಕೆಳಗಿನ ಸ್ಥಾನವಿದೆ, ನಿಕೃಷ್ಟ ಸ್ಥಿತಿಯ ಬದುಕು ನಮ್ಮದು, ನಾವು ಸಹಜವಾಗಿಯೇ ಬಡವರು, ಜೀತ ಕಾರ್ಮಿಕರು, ಕೂಲಿ ಕಾರ್ಮಿಕರು, ಜಾಡಮಾಲಿಗಳು, ತಮಟೆ ಬಾರಿಸುತ್ತಾ, ಚಪ್ಪಲಿಗಳನ್ನು ಹೊಲಿಯುತ್ತಾ ಜೀವನ ಮಾಡುವ ಅತ್ಯಂತ ಕೆಳಸ್ತರದ ಜನರು ಎಂಬ ನಗ್ನಸತ್ಯಗಳೆಲ್ಲ ನನ್ನೊಳಗೆ ಹೊಸದೊಂದು ಆತಂಕ, ಅಭದ್ರತೆ, ನಿರಾಸೆ, ಅತೀವ ಬೇಸರಗಳನ್ನೇ ಮೂಡಿಸಿದವು.

ನನ್ನ ಅಪ್ಪ, ನನ್ನ ಊರು, ವೃತ್ತಪತ್ರಿಕೆಗಳೆಲ್ಲವೂ ಅಂಬೇಡ್ಕರ್ ಅಸ್ಪೃಶ್ಯ ಸಮುದಾಯದಿಂದ ಬಂದ ರಾಷ್ಟ್ರ ನಾಯಕ, ಶೋಷಿತ ಸಮುದಾಯಗಳಿಗಾಗಿ ತನ್ನಿಡೀ ಜೀವನಪೂರ್ತಿ ಹೋರಾಟ ಮಾಡಿದ ಮಹಾನ್ ಸಮಾಜೋದ್ಧಾರಕ ಎಂಬುದನ್ನು ದಿನಕಳೆದಂತೆ ವಿಸ್ತೃತವಾಗಿ ಪರಿಚಯಿಸುತ್ತಾ ಹೋದಾಗ ಅಂಬೇಡ್ಕರ್ ಎಂಬ ವ್ಯಕ್ತಿತ್ವದೊಂದಿಗೆ ಭಾವನಾತ್ಮಕ ಸಂಬಂಧ ಬೆಸೆದುಕೊಳ್ಳುತ್ತಾ ಹೋಯಿತು. ಏಪ್ರಿಲ್ 14, ಡಿಸೆಂಬರ್ 6 ಅಂಬೇಡ್ಕರ್ ಜಯಂತಿ ಮತ್ತು ಪರಿನಿಬ್ಬಾಣ ದಿನಗಳಲ್ಲಿ ನಡೆಯುತ್ತಿದ್ದ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಅಲ್ಲಿ ಅಂಬೇಡ್ಕರ್ ಅವರ ಕುರಿತು ಭಾಷಣ ಕೇಳುತ್ತಾ, ಅಂಬೇಡ್ಕರ್ ಅವರು ಬಾಲ್ಯದಿಂದಲೂ ಎದುರಿಸಿಕೊಂಡು ಬಂದ ಅಸ್ಪೃಶ್ಯತೆ ಆಚರಣೆಯ ಕರಾಳ ಘಟನೆಗಳಿಂದ ಕಣ್ಣುಗಳಲ್ಲಿ ನೀರು ತುಂಬಿಕೊಂಡು ಒಳಗೊಳಗೇ ಅತ್ತುಕೊಂಡಿದ್ದು ಬಹಳಷ್ಟಿದೆ. ಹೀಗೆ ಅಂಬೇಡ್ಕರ್ ಅವರು ಬಾಲ್ಯದಿಂದಲೂ ಎದುರಿಸಿದ ಕಷ್ಟ ಕೋಟಲೆಗಳನ್ನೆಲ್ಲಾ ಭಾಷಣಕಾರರು ವಿವರಿಸುತ್ತಿದ್ದಂತೆಲ್ಲಾ ಮನಸ್ಸಿನ ಪರದೆಯ ಮೇಲೆ ಸಿನಿಮಾದಂತೆ ಚಿತ್ರಣ ಮೂಡಿಸಿಕೊಂಡು ಅತಿಭಾವುಕನಾಗಿ ಸುಮಾರು ಮೂರ್ನಾಲ್ಕು ದಿನಗಳವರೆಗೆ ವಿಚಲಿತನಾಗಿ ಉಳಿದದ್ದಿದೆ.



ಪದವಿ ಹಂತ ತಲುಪಿದ ವೇಳೆಗಾಗಲೇ ವೃತ್ತಪತ್ರಿಕೆಗಳು, ಟಿವಿಯಲ್ಲಿ ದಲಿತರ ಮೇಲಿನ ದೌರ್ಜನ್ಯಗಳ ಸುದ್ದಿ ಬಿತ್ತರವಾದಾಗಲೆಲ್ಲ ಈ ವ್ಯವಸ್ಥೆಯನ್ನು, ಸಮಾಜವನ್ನು ಕೆಂಡದ ಕಣ್ಣುಗಳಿಂದ ನೋಡುತ್ತಾ ಒಂಥರದ ಹಗೆಯನ್ನು ಬೆಳೆಸಿಕೊಂಡು ಹೋದಂತೆಲ್ಲಾ ಒಳಗೊಳಗೆ ಏನೂ ಮಾಡಲಾಗದ ಹತಾಶೆ, ಜಾತಿ ದೌರ್ಜನ್ಯಗಳನ್ನು ಅನುಭವಿಸಲೇಬೇಕಾದ ನಮ್ಮ ಜನಗಳ ದುಸ್ಥಿತಿ ಕಂಡು ಮರುಗುವುದೇ ರೂಢಿಯಾದಂತಾಯಿತು.

ನಮ್ಮ ಹೆಣ್ಣುಮಕ್ಕಳ ಮೇಲಾಗುವ ಅತ್ಯಾಚಾರ, ನಮ್ಮ ಜನಗಳ ಮೇಲಿನ ದೌರ್ಜನ್ಯಗಳ ವಿರುದ್ಧ ತಹಸೀಲ್ದಾರ್ ಕಚೇರಿಗಳ ಮುಂದೆ ಪ್ರತಿಭಟನೆ ಮಾಡುತ್ತಾ, ಚಳವಳಿ ಮಾಡುತ್ತಿದ್ದ ದಲಿತ ಸಂಘಟನೆಗಳ ಹೋರಾಟಗಳನ್ನು ನಾನು ಗಮನಿಸುತ್ತಲೇ ಅಸ್ಪೃಶ್ಯರಿಗೆ ನ್ಯಾಯವೂ ಮರೀಚಿಕೆ ಎಂಬ ಸತ್ಯ ತಿಳಿದು ಬಹಳ ನೊಂದದ್ದಿದೆ. ಅತ್ಯಾಚಾರ, ದೌರ್ಜನ್ಯಗಳಿಗೆಲ್ಲಾ ತಕ್ಕ ಶಿಕ್ಷೆಯ ಹೊರತಾಗಿ ಸರ್ಕಾರಗಳು ಕೊಡುವ ಪರಿಹಾರಗಳನ್ನು ನಾನು ಹೋರಾಟ, ಚಳವಳಿಗೆ ಸಿಕ್ಕ ಜಯ ಅಂತ ಎಂದೂ ಭಾವಿಸುವುದಿಲ್ಲ.

ಈ ರೀತಿ ನನ್ನೊಡಲಿಗೆ ಸುಮಾರು ಇಪ್ಪತ್ತು ವರ್ಷ ವಯಸ್ಸು ಆಗುವಷ್ಟರಲ್ಲಿ ಅಂಬೇಡ್ಕರ್ ಅಂದರೆ ಯಾರು ಎಂಬುದು ನನಗೆ ಸುಸ್ಪಷ್ಟವಾಗಿ ಪ್ರಾಪ್ತಿಯಾಯಿತು.

ಅಂಬೇಡ್ಕರ್ ಅಂದರೆ ಯಾರು? ಈ ಪ್ರಶ್ನೆಗೆ ಅವತ್ತಿಗೆ ನನ್ನ ಅನುಭವ, ಕಲಿಕೆ, ಜ್ಞಾನ, ಚಳವಳಿಗಳಿಂದ ಕಟ್ಟಿಕೊಂಡ ಉತ್ತರಗಳೇನೆಂದರೆ ಅಂಬೇಡ್ಕರ್ ಒಬ್ಬ ಮಹಾನ್ ಮಾನವತಾವಾದಿ, ಅಂಬೇಡ್ಕರ್ ಒಬ್ಬ ಸಮಾನತಾವಾದಿ, ಅಂಬೇಡ್ಕರ್ ಭಾರತದ ಸಂವಿಧಾನ ಬರೆದ ಅಪ್ರತಿಮ ಜ್ಞಾನಿ, ಸಂವಿಧಾನ ಶಿಲ್ಪಿ, ಅಂಬೇಡ್ಕರ್ ಮಹಾನ್ ದಲಿತೋದ್ಧಾರಕ, ಅಂಬೇಡ್ಕರ್ ದಲಿತರ ವಿಮೋಚಕ, ಅಂಬೇಡ್ಕರ್ ದಲಿತ ಸೂರ್ಯ, ಅಂಬೇಡ್ಕರ್ ಒಬ್ಬ ಪುಸ್ತಕ ಪ್ರೇಮಿ, ಹೀಗೆ ಅದೆಷ್ಟೋ ಗುಣವಾಚಗಳಿಂದ ಅಂಬೇಡ್ಕರ್ ಅಂದರೆ ಯಾರು ಎಂಬುದನ್ನು ಪದಗಳಿಂದ ಅಲಂಕರಿಸಿ ಹೇಳುವಷ್ಟು ಕಂಡುಕೊಂಡಿದ್ದೆ! ಶಿಕ್ಷಣ, ಸಂಘಟನೆ, ಹೋರಾಟ ಅಂಬೇಡ್ಕರ್ ಅವರು ನಮಗೆ ನೀಡಿದ ಮೂರು ಮಂತ್ರಗಳು, ಅವುಗಳನ್ನು ಪಾಲಿಸುವ ಮೂಲಕ ನಮ್ಮ ವಿಮೋಚನೆ ಸಾಧ್ಯ ಎಂಬ ತತ್ವಕ್ಕೆ ಮಾರುಹೋಗಿ ಭ್ರಮೆಯಲ್ಲಿದ್ದೆ.

ಅಲ್ಲೆಲ್ಲೋ ಬಸ್ಸುಗಳಲ್ಲಿ ಸಂಚರಿಸುವಾಗ ಕಾಣುತ್ತಿದ್ದ ಅಸ್ಪೃಶ್ಯರ ಊರು ಕೇರಿಗಳಲ್ಲಿನ 'ಅಂಬೇಡ್ಕರ್ ಬೋರ್ಡುಗಳು' ಅಭಿಮಾನದಿಂದ ಭಾವುಕನನ್ನಾಗಿಸಿ ಸೆಳೆಯುತ್ತಾ ಸಾಗುತ್ತಿದ್ದವು. ಅಂದಿನ ಚಳವಳಿಯ ಕ್ರಾಂತಿಗೀತೆಗಳು, ಅಂದಿನ ಚಳವಳಿಗಾರರು ನನಗೆ ನೈಜ ವಿಮೋಚಕರಂತೆ ಕಾಣುತ್ತಾ ಇದ್ದರು ಮತ್ತು ಅವರೇ ನಮ್ಮ ಉದ್ಧರಿಸುವ ನಾಯಕರು ಅಂತ ನಂಬಿಕೊಂಡಿದ್ದೆ. ಆದರೆ ಅಂಬೇಡ್ಕರ್ ಅಂದರೆ ಯಾರು ಎಂಬುದನ್ನು ತಿಳಿಸಿದ ಅವರು ಅಂಬೇಡ್ಕರ್ ಅಂದರೆ ಏನು ಎಂಬುದನ್ನು ತಿಳಿಸಿಕೊಡುವಲ್ಲಿ ಸಂಪೂರ್ಣವಾಗಿ ಸೋತಿದ್ದರು. **Who is Ambedkar** ಎಂಬುದು ಗೊತ್ತಿದ್ದ ನನ್ನಂತವರಿಗೆ **What is Ambedkar** ಎಂಬುದು ಗೊತ್ತೇ ಇರಲಿಲ್ಲ. ಅಂಬೇಡ್ಕರ್ ಯಾರು ಎಂಬುದಕ್ಕೆ ನಮ್ಮ ಬಳಿ ಸಾವಿರಾರು ಉತ್ತರಗಳಿದ್ದವು, ಆದರೆ ಅಂಬೇಡ್ಕರ್ ಅಂದರೆ ಏನು ಎಂಬುದಕ್ಕೆ ಮಾತ್ರ ಉತ್ತರವೇ ಇರಲಿಲ್ಲ.

ನನ್ನ ಜೀವನದ ಸರಿಯಾದ ಕಾಲಘಟ್ಟಕ್ಕೆ 'ಅಂಬೇಡ್ಕರ್ ಅಂದರೆ ಏನು' ಎಂಬುದನ್ನು ನನಗೆ ಸಮರ್ಥವಾಗಿ ಪರಿಚಯಿಸಿಕೊಟ್ಟಿದ್ದು ಬಹುಜನ ಚಳವಳಿ ಮಾತ್ರ!

Who is Ambedkar ಅಂತ ತಿಳಿದುಕೊಳ್ಳುವುದಕ್ಕಿಂತ **What is Ambedkar and What is Ambedkarism** ಎಂಬುದನ್ನು ತಿಳಿದುಕೊಳ್ಳುವುದು ಬಹಳ ಮಹತ್ವದ್ದು. ಅಂತಹ ಮಹತ್ವದ ವಿಚಾರಗಳೆಲ್ಲ ನನಗೆ ದಕ್ಕಿದ್ದು ಬಹುಜನ ಚಳವಳಿಯಿಂದ ಎಂಬುದು ಯಾವತ್ತಿಗೂ ನಮಗೆ ಹೆಮ್ಮೆ. ನಮ್ಮ ಪೂರ್ವಿಕರ ಇತಿಹಾಸ, ನಮ್ಮ ಪೂರ್ವಿಕರು, ನಮ್ಮ ಇವತ್ತಿನ ಸ್ಥಿತಿಗೆ ಕಾರಣವಾದ ಅಂಶಗಳು, ಅದಕ್ಕೆ ಪರಿಹಾರಗಳು, ಅಂಬೇಡ್ಕರ್ ಅವರು ನಮಗೆ ತೋರಿಸಿರುವ ವಿಮೋಚನೆಯ ಹಾದಿಗಳು, ಅದಕ್ಕೆ ಅನುಸರಿಸಬೇಕಾದ ಮಾರ್ಗಗಳೆಲ್ಲವನ್ನೂ ನಮಗೆ ಈ ಚಳವಳಿ ಧಾರೆಯೆರೆದಿದೆ. ಬುದ್ಧ ಬಸವಣ್ಣನಿಂದ ಪ್ರಾರಂಭಗೊ[...] ಅಂಬೇಡ್ಕರ್‌ವರೆಗಿನ ಸಾಮಾಜಿಕ ಕ್ರಾಂತಿ[...] ಜೀವನಪಾಠಗಳೆಲ್ಲವೂ ಸಹ ನಮ್ಮ ಪೀಳಿ[...] ಜನಸಮೂಹಕ್ಕೆ ಸರಿಯಾದ ವ್ಯಕ್ತಿತ್ವವನ್ನು ಕಟ್ಟಿಕೊಡ[...] ಯಶಸ್ವಿಯಾಗಿ ಸಾಗಿವೆ.



ಹಾಗಾದರೆ ಅಂಬೇಡ್ಕರ್ ಅಂದರೆ ಏನು?

(What is Ambedkar?)

ಅಂಬೇಡ್ಕರ್ ಅಂದರೆ ವಿಮೋಚನೆ

ಅಂಬೇಡ್ಕರ್ ಅವರ ಜೀವನವೇ ನಮಗೆ ಬಹುದ[...] ಸಂದೇಶವಾಗಿದೆ. ಹಾಗಾಗಿ ಅಂಬೇಡ್ಕರ್ ಅವರ ಬರಹ[...] ಅಧ್ಯಯನ ಮಾಡಿದ ಯಾರಿಗೆ ಆದರೂ ಸಹ ಅಂಬೇ[...] ಅವರ ಜೀವನವೇ ನಮಗೆ ಸಂದೇಶ ಅಂತ ಅರ್ಥವಾ[...] ಸಾಧ್ಯ.

ಅಂಬೇಡ್ಕರ್ ಅವರು ಒಬ್ಬ ಇತಿಹಾಸಕಾರ[...] ರಾಜ್ಯಶಾಸ್ತ್ರಜ್ಞನಾಗಿ, ಆರ್ಥಿಕತಜ್ಞನಾಗಿ, ಸಮಾಜಶಾಸ್ತ್ರಜ್ಞ[...] ಸಮಾಜವಾದಿಯಾಗಿ, ಈ ದೇಶದ ಶೋಷಿತ ಸಮುದಾ[...]ಗಳ ನಾಯಕನಾಗಿ, ಭಾರತದ ಸಂವಿಧಾನ ರಚನ[...] ಮುಂಚೂಣಿಯಲ್ಲಿ ನಿಂತ ಅಪ್ರತಿಮ ಜ್ಞಾನಿಯೂ [...] ತಮ್ಮ ಬದುಕಿನುದ್ದಕ್ಕೂ ತಾವು ಎದುರಿಸಿದ, ಅನು ಭವ[...] ಎಲ್ಲವನ್ನೂ ದಾಖಲಿಸುತ್ತಾ, ವಿಮೋಚನೆಯ ಹಾದಿಯ[...] ನಮಗೆ ಸ್ಪಷ್ಟಗೊಳಿಸಿ ನೀಡಿದ್ದಾರೆ. ಹಾಗಾಗಿ ಮೇ[...]ಲ್ಲವನ್ನೂ ಮೀರಿ 'ಅಂಬೇಡ್ಕರ್ ಎಂದರೆ ವಿಮೋ[...] ಎಂಬುದು ವಾಸ್ತವಿಕ ಸತ್ಯವಾಗಿ ಗೋಚರವಾಗುತ್ತದೆ[...]

ಹಾಗಾದರೆ ವಿಮೋಚನೆ ಹೇಗೆ? ಅಂಬೇಡ್ಕರ್ ಅ[...] ನಮಗೆ ವಿಮೋಚನೆಯ ಎಲ್ಲಾ ಬಗೆಗಳನ್ನು ನ[...] ಹೋಗಿದ್ದಾರೆ. ಸ್ವಂತ ಶಕ್ತಿಯ ಸ್ವತಂತ್ರ ರಾಜ್ಯಾಧಿಕಾರ[...] ವಿಮೋಚನೆಯ ಮಾರ್ಗ ಅಂತ ಹೇಳಿದ್ದಾರೆ. **Politi[...] power is the master key** ಎಂಬ ಅಂಬೇಡ[...] ಅವರ ಈ ಮಾತಿನಲ್ಲಿ ನಾವು ರಾಜ್ಯಾಧಿಕಾರದ ಮೂ[...] ನಮ್ಮೆಲ್ಲಾ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇ[...] ಎಂಬುದಾಗಿದೆ.

ತಳಸಮುದಾಯಗಳು ಈ ದೇಶದ ಮೂಲನಿವಾಸಿ[...] ಈ ದೇಶದ ನಿಜವಾದ ಒಡೆಯರು. ಆದರೆ ವರ್ಣವ್ಯವ[...] ಕಟ್ಟುಪಾಡುಗಳ ಕಾರಣ ನಿರ್ಲಕ್ಷ್ಯಕ್ಕೊಳಗಾಗಿರುವ [...] ಸಮುದಾಯಗಳು ಸನಾತನ ಹಿಂದೂ ಧರ್ಮದ ಭಾಗವ[...] ಉಳಿಯುವಂತೆ ಮಾಡಲಾಗಿದ್ದು, ಆದರಿಂದ ಹೊರಬಂ[...] 'ಬೌದ್ಧ' ಧರ್ಮವನ್ನು ಮರಳಿ ಅಪ್ಪುವ ಮೂಲಕ 'ಬುದ್[...] ಪಡೆಯುವುದು ಕೂಡ ನಮ್ಮ ವಿಮೋಚನೆ ಅ[...] ತೋರಿಸಿಕೊಟ್ಟಿದ್ದಾರೆ.

ಆ ನಿಟ್ಟಿನಲ್ಲಿ ಇಂದಿನ ನಮ್ಮ ಪೀಳಿಗೆ ಬುದ[...] ಪಡೆದು, ಅಂಬೇಡ್ಕರ್ ಕನಸಿನ ಪ್ರಬುದ್ಧ ಭಾರತ ನಿರ್ಮಾ[...]ಕ್ಕಾಗಿ ಸಮಾಜವನ್ನು ತಳಮಟ್ಟದಿಂದ ಕಟ್ಟ[...] ಮೂಲಕ ಬಾಬಾಸಾಹೇಬರ ಆಶಯಗಳ[...] ಸಾಕಾರ ಗೊಳಿಸಲು ಮುಂದಾಗಿದೆ ಮ[...] ಯಶಸ್ವಿಯೂ ಆಗುತ್ತಿದೆ. ಇತ್ತೀಚೆ[...] ಅಂಬೇಡ್ಕರ್ ಅಂದರೆ ಏನು ಎಂಬ ಅರಿ[...] ಎಲ್ಲರನ್ನೂ ತಲುಪುತ್ತಲಿದೆ. ಅಂತಿಮವಾ[...] 'ಅಂಬೇಡ್ಕರ್ ಅಂದರೆ ವಿಮೋಚನೆ'!

■ ಅಪ್ಪಗೆರೆ ಡಿ.ಟಿ. ಲಂಕೇಶ್

ಹೆಣ್ಣುಮಕ್ಕಳ ಕೊಡಬ್ಯಾಡ ದ್ಯಾವ್ರೇ

ಹೆಣ್ಣು ಮಕ್ಕಳ ಕೊಡಬ್ಯಾಡ ದ್ಯಾವ್ರೇ
ಮಂಡ್ಯದೋರ್‍ಗೆ | ಹೆಣ್ಣುಮಕ್ಕಳ ಕೊಡಬ್ಯಾಡ
ಕೊಟ್ಟಾರೆ ಅದರ ಗೋಣ ಮುರಿದ್ಯಾರು ||

ಇದನ್ನು ಹೇಳಲು ಸಂಕಟ ಆಗುತ್ತಿದೆ. ಮಾತು ಮೂಡ ಆಗಿದೆ. ಅಕ್ಷರ ಮೂಡಿಬರುತ್ತಿಲ್ಲ.

ಏನಾಗಿದೆ ಈ ಮಂಡ್ಯಕ್ಕೆ?

ಸುಮಾರು ಐವತ್ತು ವರ್ಷಗಳಿಂದ ಇಲ್ಲಿನ ನಿವಾಸಿ ನಾನು. ಹಿಂದೆ ಹೀಗೆ ಇರಲಿಲ್ಲ, ಮೊದಲಿನಿಂದಲೂ ಇಲ್ಲಿನ ಜನರು ಒರಟು, ಹಲಸಿನ ಹಣ್ಣಿನಂತೆ. ಒಳ ಹೊಕ್ಕರೆ ಸಿಹಿ. ಕಳ್ಳು-ಬಳ್ಳಿ ಸಂಬಂಧ ಎಂದರೆ ಪ್ರಾಣ. ಪ್ರೀತಿಯನ್ನು ಮೊಗೆಮೊಗೆದು ಕೊಡುವವರು. ಅದರ ಸವಿ ಅನುಭವಿಸಿದ್ದೆ. 'ನಾನು ಮಂಡ್ಯನ' ಎಂದು ಹೇಳಿಕೊಳ್ಳಲು ಹೆಮ್ಮೆಯ ಸಂಗತಿಯಾಗಿತ್ತು.

ಈಗ ಏನಾಯಿತು ಅದಕ್ಕೆ? ಅಂತ ಉದಾರ ಮನಸ್ಸಿನ, ತಾಯಿ ಕರುಳ ಔದಾರ್ಯವಂತರ ಮಂಡ್ಯ 'ಕೊಲೆಗಡುಕ ಮಂಡ್ಯ' ಆದದ್ದು ಹೇಗೆ?



ಅಂದು ಅಬಲವಾಡಿ. ಇಂದು ತಿಮ್ಮನ ಹೊಸೂರು[...] ಎರಡು ಕಡೆಯೂ ನಡೆದದ್ದು ಅದೇ ಕ್ರೌರ್ಯ ನರ್ತನ[...] ತನ್ನ ಕರುಳ ಬಳ್ಳಿಯನ್ನೇ ಕೊಲ್ಲುವ ಅಮಾನುಷತೆ.

ಅಷ್ಟಕ್ಕೂ ಈ ಅಮಾಯಕ ಹೆಣ್ಣುಮಕ್ಕಳು ಮಾಡಿದ[...] ಘನ ಘೋರ ಅಪರಾಧವಾದರೂ ಏನು? ಮನುಷ್ಯರನ್ನು[...] ಮನುಷ್ಯರನ್ನಾಗಿ ನೋಡಿದ್ದು! ತಳ ಸಮುದಾಯದ[...] ಯುವಕರನ್ನು ಪ್ರೀತಿಸಿದ್ದು!

ಕೊಲೆಗಡುಕರಿಗೆ ಜಾತಿಯ ಪೆಡಂಭೂತ[...] ಮೆಟ್ಟಿಕೊಂಡಿತ್ತು.


ಜಾತಿ ಪ್ರಕೃತಿ ಸಹಜವಾದುದಲ್ಲ. ಅದು ಒಂದು[...] ಮೂಢನಂಬಿಕೆ.

ಈ ವೈಜ್ಞಾನಿಕ ಸತ್ಯ ಕೊಲೆಗಡುಕರಿಗೆ ಬೇಕಿಲ್ಲ.

ಪದೇಪದೇ ನಡೆಯುತ್ತಿರುವ ಇಂತಹ[...] ಮರ್ಯಾದೆಗೇಡು ಹತ್ಯೆಗಳು ಜನ ಸಮುದಾಯವನ್ನು[...] ಬೆಚ್ಚಿಬೀಳಿಸಬೇಕಿತ್ತು; ತಲ್ಲಣಗೊಳಿಸಬೇಕಿತ್ತು. ಅವು[...] ವರದಿಗಾರರ ಲೇಖನಿಗೆ ಸೀಮಿತವಾಗಿದ್ದು ದುರಂತ.

ಸಮುದಾಯ ಪ್ರಜ್ಞೆಯೇ ನಾಶವಾಯಿತೆ?

ಇದಕ್ಕೂ ಭಯಾನಕವಾದದ್ದು ಸಮುದಾಯದ[...] ಕೆಲವರು ಈ ಘಟನೆಗೆ ಸ್ಪಂದಿಸಿದ ರೀತಿ. ಯಾರೊ[...] ಮಹಾನುಭಾವರಿಗೆ ಇದು ಅಮಾಯಕ ಹೆಣ್ಣುಮಗಳ[...]



ನಿನ್ನ ದನಿಗೆ ನನ್ನ ದನಿಯ... ಸೇರಿದಂತೆ ನಮ್ಮ ಧ್ವನಿಯ

ಕತೆ

ತುಂಬ ದೂರದ ಪಯಣ, ಕತ್ತಲೋ ಕತ್ತಲು. ...ು ತಾಣ ತಲುಪಿದರೆ ಬೆಳಕು ಸಿಗುವುದಂತೆ. ...ದೋ ಧ್ವನಿ 'ಯಾರ ಬಳಿ ತಲುಪಿಸಬೇಕು? ಹೇಳು, ... ಬಳಿ?' ಆಡಿದ ಕೇಳಿದ ಭಾಷೆ ಅಲ್ಲ, ಆದರೂ ...ುತ್ತಿದೆ. ರೋಹಿತ ವೇಮುಲನಿಗೆ ದಿಗಿಲಾಯಿತು. ...ಳಚಿದ ಮೇಲೂ ಜೀವ ನೋಯುವ ವಿಚಿತ್ರವದು. ...ಸಲು ದನಿಯೇ ಕೂಡದು. ನಾಲಿಗೆಗೆ ಬೆಟ್ಟದ ... ಕಡೆಗೂ ತೊದಲಿದ ಬಾಬಾ ಸಾಹೇಬರ ಬಳಿ ... ಯಾರೋ ಉದ್ಗರಿಸಿದರು ಯಾರೋ? ಬೆಳಕಿಲ್ಲ ...ತ್ತಿಲ್ಲ. ತುಂಬ ದೂರದ ಪ್ರಯಾಣ 'ಏಳು, ಏಳು' ...ೋ ಗೋಣಗುತ್ತಿದ್ದಾರೆ. ನನಗೇ.

...ದುರಿಗೇ ಇದ್ದಾರೆ ಬಾಬಾ ಸಾಹೇಬ. ಅದೇ ದಪ್ಪ ...ಕ. ಕೆಂಪಗೆ ಊದಿಕೊಂಡ ಕಣ್ಣುಗಳು. ತುಂಬ ...ದಂಹೋಗಿದ್ದಾರೆ. ಲೋಕಧ್ಯಾನದಲ್ಲಿ ...ಹೋದವರಂತಿದ್ದಾರೆ. ರೋಹಿತ ನಿಧಾನ ಆ ಪಾದಗಳ ...ಿದ. ತಣ್ಣಗೆ ಹೆಪ್ಪುಗಟ್ಟಿದ ಪಾದಗಳು. ಚುಂಬಿಸಿದ. ...ಕಾಡಿದರು ಬಾಬಾ ಸಾಹೇಬ. "ಇಷ್ಟು ... ಇಲ್ಲಿಗೆ ಯಾಕೆ ಬಂದೆಯೋ ...?" ಬಾಬಾ ಸಾಹೇಬರ ಕಣ್ಣಂಚಿನಲ್ಲಿ ... ಜಿನುಗುತ್ತಿತ್ತು. ಏನೆಲ್ಲ ನೆನಪುಕ್ಕಿತು. ... ಇಲ್ಲವಾದ ಗಳಿಗೆ.... ಹೀಗೆ ಯಾರು ...ದರೂ ಯಾವಾಗ ಬೇಕಾದರೂ ಎದ್ದು ...ಬಿಡುವ ತಲ್ಲಣ. ಆ ತಲ್ಲಣವೇ ಓದನ್ನು ಪ್ರೀತಿಸಲು ...ತ್ತೇ? ನೆನಪಿನ ದಿಂಡಿಯಲ್ಲಿ ನಿರಿಗೆಗಲ್ಲಗಳು ...ದುಬಿಟ್ಟಿತ್ತಲ್ಲ ಬರೋಡೆ... ಜಾತಿಯೆಂಬ ರೋಗಕ್ಕೆ ... ಇಲ್ಲ ಎಂಬ ಸತ್ಯ ಕಲಿಸಿದ ಊರದು. ಒಂದು ...ಗೆ ಮನೆ... ಕಡೆಗೂ ಸಿಗಲಿಲ್ಲ, ಮಹಾರಾಜರ ಪತ್ರವೂ ...ಕ್ಕೆ ಬರಲಿಲ್ಲ. ಆಫೀಸಿನಲ್ಲಿ ಕಡತಗಳನ್ನು ದೂರದಿಂದ ...ುತ್ತಿದ್ದ ಪ್ಯೂನ್, ಮಕ್ಕಳೆಂದೂ ನೋಡದೆ ಗಾಡಿ ...ಗೆಯಾಯ್ತೆಂದು ಸಿಟ್ಟಿನಿಂದ ದಡದಡ ಉರುಳಿಸಿಬಿಟ್ಟ ...ಯವ, ರಸ್ತೆಯ ನಲ್ಲಿಗೆ ಕೈ ಹಚ್ಚಿದರೆ 'ಹೊಲೆಮುಂಡೇದೆ ಕುಡಿಯೋ ನೀರು ಅದು' ಎಂದು ಹಂದಿಗಳು ...ಳ್ಳಾಡುತ್ತಿದ್ದ ಹೊಂಡದ ನೀರು ತೋರಿಸಿ ನಕ್ಕವ, ...ೇಡ್ಕರ ಸಾರ್ವಜನಿಕ ಕುಡಿಯುವ ನೀರನ್ನು ...ಟ್ಟಬಾರದು- ಎಂದು ರೆಗ್ಯುಲೇಷನ್ ಪಾಸ್ ಮಾಡಿದ ...ಜಿನ ಆಡಳಿತ ಮಂಡಳಿ, ಮಹಾಡ್ ಕೆರೆ ಪ್ರವೇಶದ ...ನಸಾಗರ, ಎಷ್ಟು ಪೆಟ್ಟು... ಎಷ್ಟು ಸೋಲು... "ನಿಮಗೂ ... ತಿಳಿಯದಾಯಿತೇ ಬಾಬಾ" ಎಂದು ಬಿಕ್ಕಿಬಿಡುವ ...ದಲ್ಲಿ "ಇಲ್ಲ ನಿಮಗೆ ಈ ಸಂಕಟ ತಿಳಿಯದು. ...ಗೂ ತಿಳಿಯದು ಮಹಾತ್ಮ" - ಎಂದು ರೋಹಿತ್ ...ಗಾಲಿಟ್ಟು ಚೀರಿ ಬಂದಿದ್ದು ಬಾಬಾರ ಮನಸ್ಸು ...ು ಸುತ್ತುತ್ತಿತ್ತು. "ನನಗಾದರೂ ಅಲ್ಲಿ ಇರಲೇಬೇಕೆನ್ನುವ ...ವ ಕಾರಣವಿತ್ತು ರೋಹಿತ? ಇರಬೇಕಿತ್ತು. ...ೇಕಾಗುತ್ತದೆ... ಇಲ್ಲಿ ಬಂದರೆ... ಹೀಗೆ ಚಿಕ್ಕೆಗಣ್ಣಲಿ ... ಮಿಕಿ ನೋಡುತ್ತ ಸಾಕ್ಷೀಕರಿಸುವುದ ಬಿಟ್ಟು... ಏನು ...ತಲಾಗುತ್ತದೆ ಹೇಳು? ಆ ಲೋಕಕ್ಕೆ ನಮ್ಮ ಉಸಿರೂ ...ು. ಭಾಷೆಯೂ ತಿಳಿಯದು..." ಬಾಬಾ ಸಾಹೇಬರ ...ರುಲ್ಲಿ ಹೆಪ್ಪುಗಟ್ಟಿದ್ದ ವಿಷಾದವಿತ್ತು.

ಅವರ ಕಾಲುಗಳು ಈಗಲೂ ಹಾಗೆಯೇ ಊದಿಕೊಂಡಿದ್ದವು. ರೋಹಿತ ಮೆತ್ತಗೆ ಹಿಸುಕಿದ ಹಿತದನೋವು. ಆಳದ ಧಗೆ. ಬಿಕ್ಕಳಿಸಿ ಅತ್ತರು ಬಾಬಾ, ರೋಹಿತನನ್ನು ಆಲಂಗಿಸಿಕೊಂಡು.... ಆತ್ಮದಾಲಿಂಗನದ ಅನೂಹ್ಯ ರುಚಿಯಲ್ಲಿದ್ದ ರೋಹಿತ.

"ನಿಮ್ಮ ಹೆಸರಿಲ್ಲಿ ಭವ್ಯ ಸ್ಮಾರಕ...." ಅವನ ಮಾತನ್ನು ಅರ್ಧಕ್ಕೆ ತಡೆದರು. "ನಿನ್ನನ್ನು ಬೇಟೆಯಾಡಿದ್ದರ ಸ್ಮರಣಾರ್ಥ..." ಬಾಬಾ ಸಾಹೇಬರ ಕಣ್ಣು ಕೆಂಡವಾಗಿತ್ತು. "ನನಗೀಗ ಆ ಹುಡುಗರ ಚಿಂತೆ... ಆ ಕನ್ಹಯ್ಯ..." ಸ್ವಲ್ಪ ಹೊತ್ತು ತಡೆದು ಮುಂದುವರೆಸಿದರು. "ಆ ಮಕ್ಕಳ ತಲೆಗೆ ರಾಷ್ಟ್ರದ್ರೋಹದ ಕಿರೀಟ ಹೊರಿಸಿ ಶಿಲುಬೆಗೇರಿಸಲು ಯಾರೆಲ್ಲ ಹೇಗೆಲ್ಲ ಪ್ರಯತ್ನಿಸುತ್ತಿರುವುದು ಕಂಡರೆ ನಾಚಿಕೆಯಾಗುತ್ತದಪ್ಪ ಈಗಲೂ... ಅವರು ದೇಶದ್ರೋಹದ ಘೋಷಣೆ ಕೂಗಿಲ್ಲ, ಕೂಗಿದ್ದು ಇವರಲ್ಲ ಎಂದಾದ ಮೇಲೂ... ದೇಶದ ಅರ್ಥಸಚಿವರನ್ನೂ ಒಳಗೊಂಡ ಹಾಗೆ (ತಾನಿದ್ದ ಆ ಸ್ಥಾನಗೌರವದ ನೆನಪಿಗೆ ಒಂದುಕ್ಷಣ ತಡೆದು) 'ದೇಶದ್ರೋಹದ ನೀಚ ಕೆಲಸ ಮಾಡುವವರು' ಎಂದು ಚೀರಿಕೊಳ್ಳುವುದ್ಯಾಕೆ? ಕೆಲ ಮಾಧ್ಯಮಗಳಂತೂ 'ಪುಂಡು ಹುಡುಗರು', 'ಗಲಾಟೆಕೋರರು' ಎಂದೆಲ್ಲ ಬಾಯಿಗೆ ಬಂದಂತೆ ಹೇಳಿಯೂ ಆಯಿತು. ಅಲ್ಲಿ... ಅಲ್ಲಿ ಕಾನೂನು, ಸಂವಿಧಾನ ಉಳಿದಿದೆಯೇ?... ಘೋಷಣೆ ಕೂಗಿದವರು ಯಾರು? ನಕಲಿ





ಸಿ.ಡಿ. ಮಾಡಿದವರು ಯಾರು? ಅವರಿಗೆ ಶಿಕ್ಷೆ ಆಯಿತೇ? ಆದೀತೇ?..."

ರೋಹಿತ ನಿಧಾನ ಬಾಬಾ ಸಾಹೇಬರ ಕೈ ಅದುಮಿದ, ಎದೆ ಮೇಲೆ ಕಯ್ಯಾಡಿಸಿದ. "ಅಲ್ಲಿ ಸಂವಿಧಾನ, ಕಾನೂನು ಉಳಿದಿದೆಯೇ? ನನಗೂ ಅನುಮಾನವೇ. ಕೋರ್ಟಿನ ಆವರಣದಲ್ಲಿ ಪೊಲೀಸು ಸ್ಟೇಷನ್ನಿನಲ್ಲಿ ಆ ಕನ್ಹಯ್ಯನನ್ನು ಬಡಿದರು. ಕೇಳುವವರುಂಟೇ? ಅದೇನು ಸಂವಿಧಾನ ಬರಿದಿರಿ ಬಾಬಾ ಸಾಹೇಬ? ನಿಮ್ಮ ಕಾನೂನಿಗೆ ಮನುಷ್ಯರ ಸಂಕಟದ ಭಾಷೆ ತಿಳಿಯುವುದೇ ಇಲ್ಲವಲ್ಲ... ನಾನು ಸಾಯುವ ತೀರ್ಮಾನ ತೆಗೆದುಕೊಳ್ಳಲಿಕ್ಕಿಂತ ಮುಂಚೆಯೇ ವಿ.ಸಿ.ಗೆ ಒಂದು ಪತ್ರ ಬರೆದಿದ್ದೆ. ದಲಿತ ವಿದ್ಯಾರ್ಥಿಗಳ ಅಹವಾಲಿನ ಪತ್ರ. ವಿಶ್ವವಿದ್ಯಾಲಯದಲ್ಲಿ ನಡೆಯುತ್ತಿರುವ ತಾರತಮ್ಯವನ್ನು ವಿರೋಧಿಸಿ ನಮಗೆಲ್ಲ ಉರುಳು ಹಾಕಿಕೊಳ್ಳಲು ಹಗ್ಗಕೊಡಿ, ವಿಷಕೊಡಿ... ಎಂದಿದ್ದೆ. ಅವರು ಕಡೆಗೂ ಅಷ್ಟೇ ಕೊಟ್ಟರು. ನನ್ನ ತಳಮಳ ಅವರಿಗೆ ತಲುಪಲಿಲ್ಲ, ಅವರಿಗದು ಬೇಕೂ ಆಗಿರಲಿಲ್ಲ. ಸಾವಿನ ನಿರ್ಧಾರದ ಗಳಿಗೆಯಲ್ಲಿ ನನಗೆ ಅನ್ನಿಸಿದ್ದೇನು ಗೊತ್ತೇ? ಕತ್ತು ಹಿಸುಕುವ ಹತ್ತಾರು ಕೈಗಳಲ್ಲಿ ಯಾವ ಯಾವುದರ ಗುರುತ ಗರೆ ಬರೆಯಲಿ? ಅದಕ್ಕೇ ನನ್ನ ಸಾವಿಗೆ ಯಾರೂ ಜವಾಬ್ದಾರರಲ್ಲ ಎಂದು ಬರೆದೆ. ಆಗಲಾದರೂ ಜವಾಬ್ದಾರರಾದವರಿಗೆ ಕಳ್ಳು ಕರಗೀತು. ಎದೆ ಮಿಡಿದೀತು. ನನ್ನ ಸ್ನೇಹಿತರಾದರೂ ಸುಖದಿಂದಲಿದ್ದಾರು...." ಹೇಳುತ್ತ ಗದ್ಗರಿಸಿದ ರೋಹಿತ. ಬಾಬಾ ತಲೆನೇವರಿಸಿದರು. ರೋಹಿತನಿಗೆ ಅವ್ವನ ನೆನಪಾಯಿತು.

ತುಸು ಹೊತ್ತು ಮೌನ ಗಂಟಲೊತ್ತರಿಸುವ ಕಾವು, ತಣಿಯದೆ ಉಳಿಗಾಲವಿಲ್ಲ, ಅವನ ದುಃಖ ತಿಳಿಯಾದೀತೆ ಎಂದು ಬಾಬಾ ಸಾಹೇಬರು ಸಣ್ಣ ವ್ಯಂಗ್ಯದಲ್ಲಿ ಅಂದರು "ನಿನ್ನನ್ನು ಅವರ ಮಗನಂತೆ ಅಂದರಲ್ಲೋ". ಕನಲಿದ ರೋಹಿತ "ಸತ್ತ ಮೇಲೆ ನನ್ನನ್ನು ಹೀಗೆ ಅಪಮಾನಿಸುತ್ತಾರೆಂದರೆ ನಾನು ಸಾಯುತ್ತಿರಲಿಲ್ಲ ಸಾಹೆಬ್." ರೋಹಿತನ ಆತ್ಮ ಅಪಮಾನದಿಂದ ಸುಡುತ್ತಿತ್ತು. "ಅಪಮಾನದ ನೋವಿನಂಥ ಜ್ವರ ಇನ್ನಾವುದಿದೆ ಸಾಹೆಬ್?"

ರಮಾಬಾಯಿ ಯಾವಾಗಲೂ ಆಡುತ್ತಿದ್ದ ಮಾತದು. ನೆನಪಾಯಿತು ಗಂಟಲಲ್ಲಿ ಏನೋ ಸಿಕ್ಕಂತಾಯಿತು. ಇಂದು 'ರಮಾ' ಯಾಕೆ ನೆನಪಾದಳೋ? ರೋಹಿತನಿಗೆ ಹೇಳಲಿಲ್ಲ, ಅವನ ಎದೆಗೂಡಲ್ಲಿ ಯಾವ ಚಿತ್ರ ಇದೆಯೋ, ಬದುಕು ಅನುಭವಿಸುವ ಮುಂಚೆಯೇ ಎದ್ದು ಬಂದನಲ್ಲ, ಆದೆಷ್ಟು ಅರೆಬರೆ ಕನಸುಗಳ ಬೀಜಗಳೂರಿದ್ದವೋ? ನಾನು ಓದಿನ ಬೆನ್ನು ಹತ್ತಿದ್ದ ಆ ದಿನಗಳಲ್ಲಿ ಹುಟ್ಟಿ ಇಲ್ಲವಾದ ಮಕ್ಕಳು.... ಬೆಳೆದಿದ್ದರೆ... ಹೀಗೇ ಇರುತ್ತಿದ್ದರೇ? ರೋಹಿತನನ್ನು ಕಂಡಾಗಲಾಯ್ತು ಕಣ್ಣೀರಿಗೆ ಕಡೆಯೇ ಇಲ್ಲ.

"ನೀವು ಸಂವಿಧಾನದಲ್ಲಿ ಹೆಂಗಸರ ಬಗ್ಗೆ ಏನೂ ಬರೆಯಲೇ ಇಲ್ಲವ್ವೋ?" ರೋಹಿತನದು ಜಗಳಗಂಟ ಪ್ರಶ್ನೆ. "ಹಾಗಂದರೇನೋ, ತಿಳಿಯದವನಂತೆ ಕೇಳುತ್ತಿಯಲ್ಲ, ಸಂವಿಧಾನದ ಮೂಲಾಧಾರವಾದ ಮೂಲಭೂತ ಹಕ್ಕುಗಳು ಹೆಂಗಸರಿಗೂ ಅನ್ವಯಿಸುವುದಿಲ್ಲವೇ? ಸಂವಿಧಾನದ 12 ರಿಂದ 35 ನೇ ವಿಧಿಯವರೆಗೆ ಎಲ್ಲವೂ ಮೂಲಭೂತ ಹಕ್ಕುಗಳಿಗೇ ಸಂಬಂಧಿಸಿಲ್ಲವೇ? ಸಮಾನತೆಯ ಹಕ್ಕು, ಸ್ವಾತಂತ್ರ್ಯದ ಹಕ್ಕು, ಶೋಷಣೆಯ ವಿರುದ್ಧದ ಹಕ್ಕು, ಧಾರ್ಮಿಕ ಸ್ವಾತಂತ್ರ್ಯದ ಹಕ್ಕು, ಸಾಂಸ್ಕೃತಿಕ ಮತ್ತು ವಿದ್ಯಾಭ್ಯಾಸದ ಹಕ್ಕು... ಎಲ್ಲವೂ ಹೆಂಗಸರಿಗೂ ಅನ್ವಯಿಸುತ್ತದಲ್ಲ. 15(1) ನೇ ವಿಧಿ ಅನ್ವಯ ಧರ್ಮ, ಕುಲ, ಜಾತಿ, ಲಿಂಗ, ಜನ್ಮಸ್ಥಳಗಳ ಆಧಾರದ ಮೇಲೆ ರಾಜ್ಯವು ಪಕ್ಷಪಾತ ಮಾಡಬಾರದು. ಅಂಗಡಿಗಳು, ಹೋಟೇಲುಗಳು, ರೆಸ್ಟೋರೆಂಟುಗಳು, ಮನರಂಜನಾ ಸ್ಥಳಗಳಲ್ಲಿ ಯಾವುದೇ ಪ್ರಜೆಗೆ ಅಸಮರ್ಥತೆ, ನಿರ್ಬಂಧಗಳಿಗೆ ಒಳಪಡಿಸಬಾರದು" ಬಾಬಾ ಸಾಹೇಬರು ಕೈಯಲ್ಲಿ ಹಿಡಿದು ಓದುತ್ತಿರುವವರಂತೆ ಹೇಳುತ್ತಿದ್ದರೆ, ರೋಹಿತ ಅಭಿಮಾನದ ಕಣ್ಣುಗಳಿಂದ ದಿಟ್ಟಿಸಿದ.

ಆದರೂ ಹಟ ಬಿಡಲಿಲ್ಲ "ನೋಡಿ ಬಾಬಾ ಸಾಹೇಬ್, ಅಲ್ಲೀಗ ಪರಿಸ್ಥಿತಿ ಹಾಗಿಲ್ಲ. ಹೆಣ್ಣುಮಕ್ಕಳು ಎಲ್ಲಿ ಯಾಕೆ ಹೇಗೆ ಎಷ್ಟೊತ್ತಿಗೆ ಹೋಗಬೇಕು, ಯಾರೊಟ್ಟಿಗೆ ಮಾತನಾಡಬೇಕು, ಹೋಗಲಿ, ಎಷ್ಟು ಮಕ್ಕಳನ್ನು ಹಡೀಬೇಕು... ಇದೆಲ್ಲವನ್ನು ಅವರಿಗೆ ಸಂಬಂಧವೂ ಇಲ್ಲದ ಯಾರೋ ದೊಣ್ಣೆನಾಯಕರು ತೀರ್ಮಾನಿಸುತ್ತಾರೆ... ಮೊನ್ನೆ ಮಂಗಳೂರಿನಲ್ಲಿ ಎಂಜಿನಿಯರಿಂಗ್ ಕಲಿಯುತ್ತಿರುವ ಹುಡುಗಿಯೊಬ್ಬಳು ತನ್ನ ಫೇಸ್‌ಬುಕ್ ಗೆಳೆಯನೊಟ್ಟಿಗೆ ಫಿಝಾ ಮಾಲ್‌ಗೆ ಬಂದಿದ್ದಳಂತೆ. ಅವನು ಮುಸ್ಲಿಂನಂತೆ. ಇನ್ನೇನು, ಅವನನ್ನು ಎಳೆದೊಯ್ದು ಬಡಿದರಂತೆ. ಅಲ್ಲಿ ಮಂಡ್ಯದಲ್ಲಿ ಬೇರೆ ಜಾತಿಯ (ಬಹುಶಃ ಕೆಳಜಾತಿಯ) ಹುಡುಗನನ್ನು ಪ್ರೀತಿಸಿ ಮದುವೆ ಮಾಡಿಕೊಂಡಿದ್ದಕ್ಕೆ, ಮಗಳನ್ನು ತವರಿನವರೇ ಸಾಯಿಸಿ ಕಬ್ಬಿನ ಗದ್ದೆಯಲ್ಲಿ ಸುಟ್ಟು ಹಾಕಿದರಂತೆ..." ರೋಹಿತ ಉದ್ವೇಗಗೊಂಡಿದ್ದ, ಅವನ ಎಳೆಯ ಮನಸ್ಸು ಸಂಕಟಗಳ ಹೊರೆಗೆ ಸೋತಿತ್ತು, ಲೋಕವನ್ನು ತಾಯ ಕಕ್ಕುಲಾತಿಯಲ್ಲಿ ನೋಡುವ ಗುಣ ಬಂದರೆ ಸಾಕು, ಆತ್ಮದ ಯಾತನೆಗೆ ಬಿಡುಗಡೆ ಎಂಬುದೇ ಇಲ್ಲ.

ಬಾಬಾ ಸಾಹೇಬರು ರೋಹಿತನನ್ನು ಮಂಜುಗಣ್ಣುಗಳಿಂದ ನೋಡಿದರು. ಕನ್ನಡದ ಊರುಗಳ ಹೆಸರು ಅವರ ಆತ್ಮದಲ್ಲೂರಿತ್ತು. ಹುಟ್ಟೂರಿನ ಗದ್ದೆಯಂಚುಗಳು ಕಣ್ಮುಂದೆ ಕಂಡಂತಾಗಿತ್ತು. ಕಬ್ಬಿನಗದ್ದೆಗೂ ಹೆಂಗಸರ ದುರಂತಕ್ಕೂ ಅದೆಂಥ ಸಂಬಂಧವಪ್ಪ! ದಿಗಿಲೆನಿಸಿತು. ಕಬ್ಬು ಬೆಳೆವ ಊರುಗಳಲ್ಲಿ ಹೆಣ್ಮಕ್ಕಳ ಅನುಪಾತ ಕುಸಿತಗೊಳ್ಳುತ್ತಿದೆ. ಹೆಣ್ಣು ಶಿಶುಗಳ ಮರಣ ಪ್ರಮಾಣ ಹೆಚ್ಚುತ್ತಿದೆ. ಅವುಗಳಿಗೆ ಕಲಿವ ಹಕ್ಕೂ ಇರದು. ಹೊಲದ ಕೆಲಸಕ್ಕೆ ಅನಿವಾರ್ಯಳಾಗದವಳು ಬದುಕಿಗೂ ಅನಿವಾರ್ಯಗಳಲ್ಲವೆಂದೇ? ಬೆಳೆಯ ಕಟಾವು ಮಾರಾಟದ ಸನ್ನಿ ಹಿಡಿದ ಮಂದಿಗೆ ಹೆತ್ತ ಮಕ್ಕಳೂ ಹಾಗೆಯೇ ಕಾಣುತ್ತಾರೆಯೇ? ಆ ಹುಡುಗಿಗೆ, ತನ್ನನ್ನು ಅಪ್ಪ ಕೊಲ್ಲುತ್ತಿದ್ದಾನೆ ಅನ್ನಿಸಿದಾಗ ಹೇಗನ್ನಿಸಿರಬಹುದು? ಆ ವಿಷಾದದ ಅಂಟು ತಾಕಲಿಲ್ಲವೇ? ಛೆ. ಅನ್ನಿಸಿತು. ಸುತ್ತ ಇಂತಹ ಕಮಟು ನಾತ ತುಂಬಿ, ಶಿಕ್ಷಣವೆಂದರೆ ಪುಸ್ತಕದ ಓದು ಎನ್ನಬಹುದೇ? ನನ್ನ ಬದುಕಿಗೆ ಅಪಮಾನದ ಬರೆಗಳಿಲ್ಲದಿದ್ದರೆ, ಪುಸ್ತಕದ ಅಕ್ಷರಗಳು ಎಷ್ಟು ತಾನೇ ತಿಳಿಯುತ್ತಿದ್ದವು? ಬಾಬಾ ಸಾಹೇಬರು ಚಿಂತೆಯಲ್ಲಿದ್ದರು. ರೋಹಿತನಿಗೆ ಧಾವಂತವಿತ್ತು, ಅವನು ಅಗಣಿತ ಪ್ರಶ್ನೆಗಳ ಹೊರೆಹೊತ್ತು ಬಂದಿದ್ದ. ಇಳುಹದಿದ್ದರೆ ಆತ್ಮ ಭಾರವಾಗುತ್ತಿತ್ತು, ಕಾಣದ ಲೋಕದಲ್ಲಿ ಕಾಣುತ್ತಿರುವ ಸತ್ಯಕ್ಕೆ ಎಷ್ಟು ಗಳಿಗೆಯೋ ತಿಳಿಯಲಿಲ್ಲ, ಆತ್ಮದೊಳಗೇನೋ ಉಬ್ಬಳಿಕೆ.

ಸಾವರಿಸಿಕೊಂಡ, "ಬಹಿಷ್ಕಾರ ಹಾಕುತ್ತಾರೆ, ಅಗತ್ಯ ಬಿದ್ದರೆ ಕಾಲ್ತೊಳೆಯುತ್ತಾರೆ. ಬಡಪಾಯಿಗಳ ಕೈಗೆ ಕತ್ತಿ ಕೊಡುತ್ತಾರೆ. ತಲೆಗೆ ಧರ್ಮಧ್ವಜ ಕಟ್ಟಿ ಜೈಕಾರ ಹಾಕಿಸುತ್ತಾರೆ, ಮ್ಯಾನ್‌ಹೋಲ್‌ಗಳಲ್ಲಿ ಸಾಯುವವರು ದೇಶಭಕ್ತರೂ ಅಲ್ಲ, ನಾಡ ಕಟ್ಟುವವರೂ ಅಲ್ಲ, ಅವರ ಸಾವು ಯಾವತ್ತೂ ಒಂದು ಬಾಕ್ಸ್ ಸುದ್ದಿ ಅಷ್ಟೇ. ಜಾತಿ-ಧರ್ಮಗಳು ಈ ದೇಶದ ವ್ರಣಗಳು. ಅವು ಕೀವಾಡುತ್ತವೆ. ಕೊಳೆಯುತ್ತವೆ. ದಲಿತರಿಗೆ ಬಡವರಿಗೆ ಹೆಂಗಸರಿಗೆ ಇಲ್ಲಿ ಆಯ್ಕೆಯ ಅಧಿಕಾರ ಇರುವುದಿಲ್ಲ, ಇದು ಎಂದೂ ಕತ್ತರಿಸಲು ಬರದ ದೆವ್ವಜಾಡನ ಬಲೆ. ಅದೆಷ್ಟು ಪ್ರೀತಿ ಸ್ನೇಹಗಳ ಚಿಗುರು ಮೆದ್ದು ಬಲಿತಿದೆಯೋ?..." ಬಾಬಾ ಸಾಹೇಬರು ತದೇಕ ನೋಡುತ್ತಿದ್ದರು.

ಅವತ್ತು ಆ ಹುಡುಗ ಕನ್ಹಯ್ಯನ ಜುಂ ಅನ್ನಿಸುವ ಮಾತುಗಳ ಕೇಳಿಸಿಕೊಂಡ ಮೇಲೆ, ಇಲ್ಲಿ ಈಗ ಪಾದ ಊರದ ನೆಲದಲ್ಲಿ ತಲೆನಿಲ್ಲದ ಜಾಗೆಯಲ್ಲಿ ಅದರ ಖಬರಿಲ್ಲದೆ ರೋಹಿತ ಮಾತನಾಡುತ್ತಿದ್ದ, "ಸಂವಿಧಾನದಲ್ಲಿ ಬರೆದಿದ್ದಾದರೂ ಏನೂ ಬಾಬಾ? ಜಿಲ್ಲಾಧಿಕಾರಿಯೊಬ್ಬ ಮುಸ್ಲಿಂ ಇದ್ದರೆ, ದೇವಸ್ಥಾನದ ಜಾತ್ರೆಯ ಕರೆಯೋಲೆಯಲ್ಲಿ ಹೆಸರು ಬರುವುದು - ಅದೂ ಮುಜರಾಯಿ ಇಲಾಖೆಗೆ ಸೇರಿದ್ದರೂ - ಕಾನೂನುರೀತ್ಯಾ ತಪ್ಪಂತೆ. ಎಂಥ ಕಾನೂನುಗಳಿವು? ಜಾತಿ-ಧರ್ಮಗಳು ಮುಖ್ಯವೋ, ಪ್ರಜಾತಂತ್ರ ಸಂವಿಧಾನ ಮುಖ್ಯವೋ?" ರೋಹಿತ ಹೇಳುತ್ತ ಹೇಳುತ್ತ ಕುಸಿದ.

ಬಾಬಾ ಸಾಹೇಬರು ಆತ್ಮದ ತೋಳುಚಾಚಿ ಬಾಚಿ ತಬ್ಬಿಕೊಂಡರು. ರೋಹಿತ ಮತ್ತೂ ಮಾತನಾಡುತ್ತಲೇ ಇದ್ದ, "ಬಾಬಾ ಸಾಹೇಬ್, ಯಾರಾದರೂ 'ಹೀಗನ್ನು' ಎಂದು ಬಲವಂತ ಮಾಡಿದರೆ ಏನಾಗುತ್ತದೆ? 'ಹೋಗಲೋ' ಅನ್ನಬೇಕನ್ನಿಸುತ್ತದೆ ಅಲ್ಲವೇ? ಭಾರತ ಮಾತೆ- ತಂಟೆ ತೆಗೆಯಲು ನೆಪ ಆಗಬೇಕಾ? ನಂನಮ್ಮ ಅವ್ವ-ಅಪ್ಪರನ್ನು ಗೌರವಿಸುತ್ತೇವೆಂದೋ ಪ್ರೀತಿಸುತ್ತೇವೆಂದೋ ಜಯವಾಗಲಿ ಎಂದೋ ಘೋಷಿಸಿಕೊಳ್ಳಬೇಕಾ?..." ರೋಹಿತ ಪಕ್ಕದಲ್ಲಿ ಬಳಲಿ ಉರುಳಿದ್ದ ಬಾಬಾ ಸಾಹೇಬರಿಗೆ ತನ್ನ ತಾಯ್ನೆಲದ ಸಭ್ಯ ಸುಸಂಸತ ನಾಗರಿಕರ ಬಗ್ಗೆ ಹೇಸಿಗೆ ಅನ್ನಿಸಿತು. ನನ್ನ ಜಯಂತಿಯಂದು ಫೋಟೋ ಇಟ್ಟು ಮಾಲೆ ಹಾಕಿ ಕುರುಹ ಪೂಜಿಸುವ ಇವರು ಅರುಹಿನ ಕತ್ತು ಕೊಯ್ಯುವರಲ್ಲ, ತನ್ನನ್ನು ತಲೆಮಾರಿ ಒಪ್ಪಿಕೊಂಡ ಜನರಿದ್ದಕ್ಕಾಗಿಯೇ ಹಿಟ್ಲರನಿಗೆ ಹಾಗೆ ಕೊಲ್ಲುತ್ತ ಹೋಗುವ ಖಯಾಲಿ ಹೊಕ್ಕಿದ್ದಲ್ಲವೇ? ಮಾತೇ ಮಾರುಕಟ್ಟೆಯಾದರೆ ಮರ್ಯಾದೆ ಉಳಿಯುವುದು ಹೇಗೆ?

ಬಾಬಾ ಸಾಹೇಬರ ಬೆರಳುಗಳು ರೋಹಿತನ ಕೂದಲ ನೇವರಿಸಿದವು. ಅವರಿಗೆ, ಕೈಗೂಸುಗಳನ್ನು ಮಣ್ಣುಮಾಡಿ ದಿಕ್ಕೆಟ್ಟು ಕೂತ ರಮಾಬಾಯಿಯ ಗಂಟಲಬ್ಬರದ ಜೋಗುಳದ ಪದಗಳು ನೆನಪಾಗಿ ಆತ್ಮ ಒದ್ದೆಯಾಯಿತು.



● ಡಾ. ವಿನಯಾ

...ತ್ಯಯಾಗದೆ 'ಲೌ ಜಿಹಾದ್' ಆಗಿ ಗೋಚರಿಸಿದೆ. ...ಮಂತ ಹೆಣ್ಣುಮಕ್ಕಳನ್ನು ಪ್ರೀತಿಸುವ ನಾಟಕ ಆಡಿ ...ೋಸ ಮಾಡುವವರಿಗೆ ಎಚ್ಚರಿಕೆ ಗಂಟೆಯಂತೆ ಇದು!

ಅವರ ತರ್ಕವನ್ನೇ ನೋಡೋಣ. 'ಲೌ ಜಿಹಾದ್'ನಲ್ಲಿ ...ತಾಂತರ ಆಗಬೇಕು. ಇಲ್ಲಿ ಅದಕ್ಕೆ ಕಾರಣವೇ ಇಲ್ಲ, ...ಬ್ಬರೂ ಹಿಂದೂಗಳು. ಹಣದ ಆಮಿಷಕ್ಕೆ ಒಳಗಾಗಿ ...ುವಕಯುವತಿಯನ್ನು ಪ್ರೀತಿಸುವ ನಾಟಕ ಆಡಿದ್ದ ...ದೇ ನಂಬೋಣ. ಇಂತಹದ್ದೇ ಮೋಸವನ್ನು ...ಸಮುದಾಯದ ಯುವಕನಲ್ಲದೆ ಯುವತಿಯ ಜಾತಿಯ ...ುವಕ ಎಸಗಿದ್ದರೆ ಇದೇರೀತಿ ಅಮಾನುಷವಾಗಿ ...ುವತಿಯ ಕೊಲೆ ಮಾಡುತ್ತಿದ್ದರೆ? ಮೋಸಕ್ಕೆ ಒಳಗಾದ ...ಮಾಯಕ ಯುವತಿಯ ಮೇಲೆ ಪ್ರೀತಿಯ ...ಪಾಪ್ಪೂರವೇ ಹರಿದು ಬರುತ್ತಿರಲಿಲ್ಲವೇ?

ಈ ಘಟನೆಯ ನಂತರ ಮಂಡ್ಯ ವಕೀಲರ ಸಂಘ ...ಯಾಲಯದ ಕಲಾಪವನ್ನು ಬಹಿಷ್ಕರಿಸಿತು!

ಯಾಕೆ ಈ ಬಹಿಷ್ಕಾರ?

ಕರುಳಕುಡಿಯನ್ನೇ ಚಿವುಟಿದ ಅಮಾನುಷತನಕ್ಕೆ ...ೋಧಿಸಿ ಅಲ್ಲ, ಕೊಲೆಯಾದ ಯುವತಿ ವಕೀಲನೊಬ್ಬನ ...ಜದ ಸೋದರಿಯಂತೆ. ಆಕೆಯ ಕೊಲೆಗೆ ಆ ಪುಣ್ಯಾತ್ಮನ ...ಕಾರವೂ ಇತ್ತಂತೆ. ಪೊಲೀಸರು ಅವನ ಮೇಲೆ ಎಫ್‌ಐಆರ್ ದಾಖಲಿಸಿದ್ದರಂತೆ. ಅವನ ಹೆಸರನ್ನು ಕೈಬಿಡಲು ನ್ಯಾಯಾಲಯ ಕಲಾಪಗಳಿಗೆ ನ್ಯಾಯವಾದಿಗಳ ಬಹಿಷ್ಕಾರ ಅಂತೆ! ಆರೋಪಿ ಆರೋಪಿ ಅಲ್ಲ ಎಂದು ಸಾಧಿಸಲು ಮುಷ್ಕರದ ಕೊಡುಗೆ!

ವಕೀಲರಲ್ಲಿಯೂ ನ್ಯಾಯಪರರು ಬಹಳ ಜನ ಇದ್ದಾರೆ. ನ್ಯಾಯಾಲಯದ ಕಲಾಪಗಳಿಗೆ ಬಹಿಷ್ಕಾರದ ಕರೆಗೆ ಮಾನಸಿಕವಾಗಿ ಸಮ್ಮತಿಯಿಲ್ಲದವರೂ ಬಹಳ ಮಂದಿ ಇದ್ದಾರೆ. ನೋವಿನ ಸಂಗತಿ ಎಂದರೆ ಅವರು ಯಾರೂ ಆ ರೀತಿ ಬಹಿಷ್ಕಾರವನ್ನು ತಿರಸ್ಕರಿಸಲಿಲ್ಲ, ಅನ್ಯಾಯದ ವಿರುದ್ಧ ಪ್ರತಿಭಟಿಸದೆ ಮೌನಕ್ಕೆ ಶರಣಾದರೆ ಅದಕ್ಕೆ ಬೆಂಬಲ ವ್ಯಕ್ತಪಡಿಸಿದಂತೆ ಅಲ್ಲವೆ?

ಅಂತೆಯೇ ಮಂಡ್ಯದ ಜನತೆ ಬಹುಪಾಲು ಹೃದಯವಂತರು. ಇಂತಹ ಕ್ರೌರ್ಯ ಒಪ್ಪದವರು. ಕೆಲವೇ ಕೆಲವು ದುಷ್ಟಶಕ್ತಿಗಳ ಆರ್ಭಟದ ರಭಸಕ್ಕೆ ಬೆಚ್ಚಿ ಮೌನವಾಗಿರಬಹುದು. ಅವರು ಮೌನ ಮುರಿಯಬೇಕು. ಇಂತಹ ಕ್ರೂರ ಹತ್ಯೆಯ ವಿರುದ್ಧ ದನಿ ಎತ್ತಬೇಕು. ಅದು ಇಂದಿನ ಅವಶ್ಯಕತೆಯಾಗಿದೆ. ಯಾಕೆಂದರೆ ಸಮುದಾಯ ಪ್ರಜ್ಞೆಯೇ ನಿಷ್ಕ್ರಿಯೆಯಾದರೆ ನ್ಯಾಯ ದೊರಕಿಸುವವರು ಯಾರು?


● ಎಚ್ಚೆಲ್ಕೆ

ಪೊಳ್ಳು ಘೋಷಣೆ ಮತ್ತು ಅಸಹಿಷ್ಣುತೆಯ ಇತ್ತೀಚಿನ ನಿದರ್ಶನಗಳ

2014ರ ಚುನಾವಣಾ ಪ್ರಚಾರದ ವೇಳೆ ಮತದಾರರನ್ನು ಸೆಳೆಯುವುದಕ್ಕೋಸ್ಕರ ನರೇಂದ್ರ ಮೋದಿಯ ಟೀಮು ಹೆಣೆದಿದ್ದ ನಾನಾ ಬಗೆಯ ತಂತ್ರಗಳಲ್ಲಿ ಅಭಿವೃದ್ಧಿ, ಭ್ರಷ್ಟಾಚಾರ, ಕಪ್ಪುಹಣ ಮೊದಲಾದ ವಿಷಯಗಳ ಮೇಲೆ ಭರ್ಜರಿ, ಜನಾಕರ್ಷಕ ಘೋಷಣೆಗಳ ತಂತ್ರವೂ ಒಂದು. ಮೋದಿಯ ಘೋಷಣಾ ಚಾತುರ್ಯ ಇಂದು ನಿನ್ನೆಯದಲ್ಲ; ಅದು ದಶಕಗಳ ತರಬೇತಿ ಹಾಗೂ ಅನುಭವಗಳ ಫಲ. ಆತನ ಬತ್ತಳಿಕೆಯಲ್ಲಿದ್ದ ಹಲವಾರು ಘೋಷಣೆಗಳ ಪೈಕಿ ಅತಿಹೆಚ್ಚು ಬಾರಿ ಬಳಕೆಯಾಗಿರುವುದೆಂದರೆ "ಗುಜರಾತ್ ಮಾದರಿ ಅಭಿವೃದ್ಧಿ"ಯ ಘೋಷಣೆ. ಆದರೆ ಇದೊಂದು ವ್ಯವಸ್ಥಿತ ಕಟ್ಟುಕತೆ; ಮೋದಿಯ ಇನ್ನಿತರ ಘೋಷಣೆಗಳ ಹಾಗೆ ಹುರುಳಿಲ್ಲದ ಬರೀ ಪೊಳ್ಳು ಘೋಷಣೆ ಎನ್ನುವುದು ಜನರಿಗೆ ಈಗ ಅರ್ಥವಾಗತೊಡಗಿದೆ. ಶುದ್ಧ ಸುಳ್ಳುಗಳ ಸರಮಾಲೆ ಆಗಿರುವ "ಗುಜರಾತ್ ಮಾದರಿ ಅಭಿವೃದ್ಧಿ" ಎಂಬ ಪ್ರಸಂಗಕ್ಕೆ ಇತ್ತೀಚಿನ ಸೇರ್ಪಡೆಯೆಂದರೆ ಕೃಷ್ಣಾ ಗೋದಾವರಿ ಜಲಾನಯನ ಪ್ರದೇಶದಲ್ಲಿ ಅನಿಲ ಉತ್ಪಾದನೆಯ ಮಹತ್ವಾಕಾಂಕ್ಷಿ ಯೋಜನೆ. ಇದೀಗ ಈ ಯೋಜನೆಯ ಕುರಿತು ಜನರಿಗೆ ಮಂಕುಬೂದಿ ಎರಚಲಾಗಿರುವ ಸತ್ಯ ಬೆಳಕಿಗೆ ಬಂದಿದೆ!

ಗುಜರಾತ್ ಸರಕಾರದ ಪ್ರತಿಷ್ಠಿತ ಸಂಸ್ಥೆಯೆಂದು ಹೇಳಲಾಗುವ ಗುಜರಾತ್ ರಾಜ್ಯ ಪೆಟ್ರೋಲಿಯಂ ಕಾರ್ಪೊರೇಷನ್ (ಜಿಎಸ್‌ಪಿಸಿ) 2005ರಲ್ಲಿ ಕೃಷ್ಣಾ ಗೋದಾವರಿ ಜಲಾನಯನ ಪ್ರದೇಶ ಅನಿಲ ಉತ್ಪಾದನೆಯ ಯೋಜನೆಯಲ್ಲಿ ಒಂದು ಬ್ಲಾಕ್ ಅನ್ನು ವಹಿಸಿಕೊಂಡಿತ್ತು. ಇದಾದ ಸ್ವಲ್ಪ ಸಮಯದಲ್ಲಿ ಮೋದಿ ಆ ಬ್ಲಾಕ್‌ನಲ್ಲಿ 20 ಟಿಸಿಎಫ್ ಅನಿಲ ದೊರಕಿದೆ ಎಂದು ಭಾರಿ ಗರ್ವದಿಂದ ಘೋಷಿಸಿ ಗುಜರಾತ್ ರಾಜ್ಯ ಪೆಟ್ರೋಲಿಯಂ ಕಾರ್ಪೊರೇಷನ್‌ನ ಯಶಸ್ಸನ್ನು ಕೊಂಡಾಡಿದ್ದ. ನಂಬಿದರೆ ನಂಬಿ, ಇಲ್ಲವಾದರೆ ಬಿಡಿ, ಜಿಎಸ್‌ಪಿಸಿಯ ಕೃಷ್ಣಾ ಗೋದಾವರಿ ಯೋಜನೆಯಲ್ಲಿ ಇದುವರೆಗೆ ಒಂದು ಘನ ಇಂಚಿನಷ್ಟೂ ಅನಿಲ ಉತ್ಪಾದನೆಯಾಗಿಲ್ಲ. ಆದರೆ ಖುದ್ದು ಭಾರತದ ಮಹಾಲೆಕ್ಕಪರಿಶೋಧಕರೆ ಇದನ್ನು ಹೇಳಿರುವುದರಿಂದ ಇದನ್ನು ನಂಬಲೇಬೇಕಾಗುತ್ತದೆ. ಜಿಎಸ್‌ಪಿಸಿ ಬಹುಶಃ ಇದೇ ಬಂಡವಾಳವಿಲ್ಲದ ಬಡಾಯಿಯ ಆಧಾರದಲ್ಲಿ ಭಾರತದಲ್ಲಷ್ಟೇ ಅಲ್ಲ ವಿದೇಶಗಳಲ್ಲಿಯೂ ಡಜನುಗಟ್ಟಲೆ ಬ್ಲಾಕುಗಳನ್ನು ವಹಿಸಿಕೊಂಡಿತ್ತು. ವಾಸ್ತವದಲ್ಲಿ ಈ ಜಿಎಸ್‌ಪಿಸಿಗೆ ತೈಲಶೋಧನೆ ಮತ್ತು ಉತ್ಪಾದನೆಯ ಕ್ಷೇತ್ರದಲ್ಲಿ ಒಂದು ಚೂರಾದರೂ ಅನುಭವ ಇರಲಿಲ್ಲ. ವಿದೇಶಗಳಲ್ಲಂತೂ ಏನೇನೂ ಅನುಭವ ಇರಲಿಲ್ಲ. ಇದಕ್ಕೆ ಅದರ ಕ್ಷೇತ್ರಾಭಿವೃದ್ಧಿ ಯೋಜನೆಯ ವೆಚ್ಚದ ಅಂದಾಜೆ ಸಾಕ್ಷಿ. ಆರಂಭದಲ್ಲಿ ಕ್ಷೇತ್ರಾಭಿವೃದ್ಧಿ ಯೋಜನೆಯ ವೆಚ್ಚ ಸುಮಾರು 13,122 ಕೋಟಿ ಎಂದು ಅಂದಾಜಿಸಲಾಗಿತ್ತು, ಆದರೆ ವಾಸ್ತವದಲ್ಲಿ 2015ರ ಮಾರ್ಚ್ ತನಕ ಸುಮಾರು 17,025 ಕೋಟಿ ಖರ್ಚಾಗಿದೆ. ಆದ್ದರೂ ಕೃಷ್ಣಾ ಗೋದಾವರಿ ಬ್ಲಾಕ್ 2011-12ರ ಸಾಲಿನಲ್ಲಿ ಮಾರಾಟ ಪ್ರಾರಂಭಿಸುವಷ್ಟು ಅನಿಲ ಉತ್ಪಾದಿಸಲಿದೆ ಎಂದು ಕೊಚ್ಚಿಕೊಂಡು 2011-15ರ ಅವಧಿಯಲ್ಲಿ ಸುಮಾರು 12,249 ಕೋಟಿ ರೂಪಾಯಿ ಹೂಡಿಕೆಯನ್ನೂ ಮಾಡಲಾಗಿತ್ತು.

ಏಪ್ರಿಲ್ 1, 2011ರ ಹೊತ್ತಿಗೆ ಜಿಎಸ್‌ಪಿಸಿ ಕೈಲಿ ಒಟ್ಟು 64 ಬ್ಲಾಕುಗಳಿದ್ದವು. ಆದರೆ ಮುಂದಿನ 4 ವರ್ಷಗಳ ಅವಧಿಯಲ್ಲಿ ಅದು 37 ಬ್ಲಾಕುಗಳನ್ನು ಬಿಟ್ಟುಕೊಟ್ಟಿದೆ. ಇದರಿಂದಾಗಿ ರಾಜ್ಯದ ಬೊಕ್ಕಸಕ್ಕೆ ಸುಮಾರು 2,514 ಕೋಟಿ ರೂಪಾಯಿ ನಷ್ಟವಾಗಿದೆ. ಸಾಲದ ಪ್ರಮಾಣವೂ ಅಗಾಧ ಮಟ್ಟಕ್ಕೆ ಏರಿದೆ. ಮಾರ್ಚ್ 2011ರಲ್ಲಿ 7,126 ಕೋಟಿ ರೂಪಾಯಿಗಳಷ್ಟು ಸಾಲ ಇದ್ದರೆ 2015ಕ್ಕಾಗುವಾಗ ಅದು 19,716 ಕೋಟಿಗೆ ತಲುಪಿದೆ. ಅಂದರೆ ಸಾಲದ ಪ್ರಮಾಣದಲ್ಲಿ ಸುಮಾರು ಶೇಕಡಾ 177ರಷ್ಟು ಹೆಚ್ಚಳವಾಗಿದೆ. ಇನ್ನು ಬಡ್ಡಿಯ ವಿಷಯಕ್ಕೆ ಬಂದರೆ 2011-12ರ ಸಾಲಿನಲ್ಲಿ ಸುಮಾರು 981 ಕೋಟಿ ರೂಪಾಯಿಗಳಷ್ಟಿದ್ದ ಬಡ್ಡಿ 2014-15ರ ಸಾಲಿಗಾಗುವಾಗ ಸುಮಾರು 1804 ಕೋಟಿಗಳಿಗೇರಿದೆ. ಇಷ್ಟು ಸಾಲದೆಂಬಂತೆ ತನ್ನ ಈ ಸಾಹಸೋದ್ಯಮದ ಇತರ ಪಾಲುದಾರ ಕಂಪನಿಗಳಾದ ಜಿಯೊಗ್ಲೋಬಲ್ ರಿಸೋರ್ಸ್ ಮತ್ತು ಜ್ಯೂಬಿಲೆಂಟ್



ಗುಂಪುಗಳಿಂದ ಬರಬೇಕಾದ ಸುಮಾರು 2,329 ಕೋಟಿ ರೂಪಾಯಿಗಳನ್ನು ಸಂಗ್ರಹಿಸಲು ಎಳ್ಳಷ್ಟಾದರೂ ಪ್ರಯತ್ನ ಮಾಡಿಲ್ಲ.

ಮಹಾಲೆಕ್ಕಪರಿಶೋಧಕರು ಗುಜರಾತ್ ಸದನದಲ್ಲಿ ಮಂಡಿಸಿದ ವರದಿ ಸರ್ಕಾರವನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಳ್ಳುತ್ತದೆ. "... ಇಷ್ಟೇ ಅಲ್ಲ, ಕ್ಷೇತ್ರವನ್ನು ಅಭಿವೃದ್ಧಿಪಡಿಸಲು ಎಷ್ಟು ಖರ್ಚಾಗಬಹುದೆಂದು ಸರಿಯಾಗಿ ಅಂದಾಜಿಸಲಾಗಿಲ್ಲ, ಈ ಸಾಹಸೋದ್ಯಮದಲ್ಲಿ ತಾಂತ್ರಿಕವಾಗಿ ಏನೆಲ್ಲ ಅಪಾಯಗಳಿವೆಯೆಂದು ಪರಿಗಣಿಸಲಾಗಿಲ್ಲ, ಯೋಜನೆಯನ್ನು ಕಾರ್ಯಗತಗೊಳಿಸುವಲ್ಲಿ ನ್ಯೂನತೆಗಳಾಗಿವೆ..." ಎಂದು ವರದಿ ಹೇಳುತ್ತದೆ.

ಇಂದು ಜಿಎಸ್‌ಪಿಸಿಯ ಈ ದುಸ್ಸಾಹಸವನ್ನು ಸಮರ್ಥಿಸಲು ನಾನಾ ಕಾರಣಗಳನ್ನು, ನೆಪಗಳನ್ನು ಮುಂದೊಡ್ಡಲಾಗುತ್ತಿದೆ. ಭ್ರಷ್ಟಾಚಾರವನ್ನು ಬಿಲ್‌ಕುಲ್ ಸಹಿಸುವುದಿಲ್ಲ ಎಂದವರು ತಮ್ಮ ಹಿತ್ತಿಲಲ್ಲೆ ನಡೆದಿರುವ ಭ್ರಷ್ಟಾಚಾರದ ಬಗ್ಗೆ ಏನು ಹೇಳುತ್ತಾರೆ?


****

ಈ ಹೊತ್ತು ಭಾರತದ ಆರ್ಯ ಶ್ರೇಷ್ಠತೆಯ ಪ್ರತಿಪಾದಕರು ತಮ್ಮ ಸಿದ್ಧಾಂತದವನ್ನೊಲ್ಲದ ಭಿನ್ನಮತೀಯರನ್ನೆಲ್ಲ ದಮನಿಸುವ ಕಾರ್ಯವನ್ನು ಮತ್ತಷ್ಟು ತೀವ್ರಗೊಳಿಸಿರುವುದರ ಪರಿಣಾಮವಾಗಿ ಅಲ್ಪಸಂಖ್ಯಾತರು, ಎಡಪಂಥೀಯರು ಮತ್ತು ಬುದ್ಧಿಜೀವಿಗಳು ಪ್ರಾಣಾಪಾಯ ಎದುರಿಸುತ್ತಿದ್ದಾರೆ. ಅದೇ ವೇಳೆ ಶೂದ್ರರು, ದಲಿತರು, ಆದಿವಾಸಿಗಳನ್ನು ಮೇಲ್ಜಾತಿಯವರ ದಸ್ಯುಗಳಾಗಿ ಉಳಿಸಿಕೊಳ್ಳುವ ಯೋಜನೆಯೂ ವೇಗ ಪಡೆದುಕೊಂಡಿದೆ. ಮತ್ತೊಂದು ಮುಮ್ಮೈಯಲ್ಲಿ ಹಿಂಸಾತ್ಮಕ ಬೀಫ್ ವಿರೋಧಿ ಆಂದೋಲನವನ್ನು ದೇಶದ ಮೂಲೆಮೂಲೆಗಳಿಗೆ ತಲುಪಿಸಲಾಗುತ್ತಿದೆ. ಇನ್ನೊಂದು ದಿಕ್ಕಿನಲ್ಲಿ ಮತ ಪ್ರಸಾರವನ್ನು ದೊಡ್ಡ ಅಪರಾಧವೆಂಬಂತೆ ಬಿಂಬಿಸಲಾಗುತ್ತಿದೆ. ಇದೆಲ್ಲದರ ನಡುವೆ ಆಳುವ ಪ್ರಭುತ್ವಕ್ಕೆ ವಿರುದ್ಧವಾದ ನಿಲುವು ತಳೆದಿರುವವರ ಬಗ್ಗೆ ಅಸಹಿಷ್ಣುತೆಯೂ ಹೆಚ್ಚುತ್ತಿದೆ. ಪರಿಣಾಮವಾಗಿ ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕಿಗೆ ದೊಡ್ಡ ಗಂಡಾಂತರ ಎದುರಾಗಿದೆ. ಪ್ರಜೆಗಳ, ಅದರಲ್ಲೂ ವಿಶೇಷವಾಗಿ ಭಿನ್ನಮತೀಯರ ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕನ್ನು ಮೊಟಕುಗೊಳಿಸಲಾಗುತ್ತಿದೆ ಅಥವಾ ಕಿತ್ತುಕೊಳ್ಳಲಾಗುತ್ತಿದೆ. ಇತ್ತೀಚಿನ ಬೆಳವಣಿಗೆಯೊಂದರಲ್ಲಿ ಮಾಜಿ ಕೇಂದ್ರ ಗೃಹ ಕಾರ್ಯದರ್ಶಿ ಮಾಧವ್ ಗೋಡ್‌ಬೋಲೆಯವರ ಉಪನ್ಯಾಸ ಕಾರ್ಯಕ್ರಮವನ್ನು ಹಠಾತ್ತಾಗಿ ರದ್ದುಗೊಳಿಸಲಾಗಿದೆ. ಅವರು ಇದೇ ಏಪ್ರಿಲ್ 4ರಂದು ಮುಂಬಯಿನ ಮಂತ್ರಾಲಯದಲ್ಲಿ "ಭಾರತ ಜಾತ್ಯತೀತ ರಾಷ್ಟ್ರವೆ?" ಎಂಬ ವಿಷಯದ ಮೇಲೆ ಮಾತನಾಡಲಿದ್ದರು. ಬಿ.ಜಿ.ದೇಶ್‌ಮುಖ್ ಸ್ಮರಣಾರ್ಥ ಏರ್ಪಡಿಸಲಾಗಿದ್ದ ಆ ಉಪನ್ಯಾಸವನ್ನು ಭಾರತೀಯ ಸಾರ್ವಜನಿಕ ಆಡಳಿತ ಸಂಸ್ಥೆಯ (ಐಐಪಿಎ) ಮಹಾರಾಷ್ಟ್ರ ರಾಜ್ಯ ಶಾಖೆ ಆಯೋಜಿಸಿತ್ತು. ಸಂಸ್ಥೆಯ ಕೋರಿಕೆಯ ಮೇರೆಗೆ ಮಾಧವ್ ತನ್ನ ಭಾಷಣದ ಒಂದು ಪ್ರತಿಯನ್ನು ಅವರಿಗೆ ಮಾರ್ಚ್ 11ರಂದೆ ಕಳುಹಿಸಿದ್ದರು. ಆದರೆ ಐಐಪಿಎಯ ಗೌರವಾಧ್ಯಕ್ಷರಾದ ಸ್ವಾಧೀನ್ ಕ್ಷತ್ರಿಯರ ಪ್ರಕಾರ ಏಪ್ರಿಲ್ 4ರಂದು ಸದನದಲ್ಲಿ ರಾಜ್ಯದ ಬಜೆಟ್ ಬಗ್ಗೆ ಚರ್ಚೆ ನಡೆಯಲಿರುವುದರಿಂದ ಕಾರ್ಯಕ್ರಮವನ್ನು ರದ್ದುಗೊಳಿಸಬೇಕಾಗಿ ಬಂದಿದೆಯಂತೆ. ಆದರೆ ರಾಜ್ಯ ಸರಕಾರದ ಪ್ರಧಾನ ಕಾರ್ಯದರ್ಶಿಯೂ ಆಗಿರುವ ಸ್ವಾಧೀನ್‌ರಿಗೆ ಈ ವಿಷಯ ಮೊದಲೆ ಗೊತ್ತಿರದಿರಲು ಸಾಧ್ಯವೆ?

ಅಸಲಿಗೆ ವಿಷಯ ಏನೆಂದರೆ ಮಾಧವ್ ತನ್ನ ಭಾಷಣದಲ್ಲಿ ಬಾಬರಿ ಮಸೀದಿ ಧ್ವಂಸ, 1984ರ ಸಿಖ್ಖರ ಮಾರಣಹೋಮ, 92-93ರ ಮುಂಬಯಿ ದಂಗೆಗಳು, ಗುಜರಾತ್ ನರಮೇಧ ಮುಂತಾದ ಘಟನೆಗಳ ಕುರಿತು ಪ್ರಸ್ತಾಪಿಸಲಿದ್ದರು. ಈಗ ಆ ಭಾಷಣದ ಪ್ರತಿಯೊಂದು ಮಾಧ್ಯಮಗಳಿಗೆ ಲಭ್ಯವಾಗಿದೆ. ಅದರಲ್ಲಿ "ಬಾಬರಿ ಮಸೀದಿ ಪ್ರಕರಣ ಭಾರತದ ಇತ್ತೀಚಿನ ಇತಿಹಾಸದಲ್ಲಿ ಒಂದು ನಾಚಿಕೆಗೇಡಿನ ಅಧ್ಯಾಯ..... ಗೋಧ್ರಾ ದಂಗೆಗಳು ಸರಕಾರದಿಂದಲೆ ಪ್ರಾಯೋಜಿಸಲ್ಪಟ್ಟ, ಅಲ್ಪಸಂಖ್ಯಾತರ ವಿರುದ್ಧದ ಕಾರ್ಯಕ್ರಮವಾಗಿತ್ತು..... ಸಿಖ್ ವಿರೋಧಿ ದಂಗೆಗಳ ವೇಳೆ ಕೇಂದ್ರ ಸರಕಾರ ಕಣ್ಮುಚ್ಚಿ ಕುಳಿತಿದ್ದುದು ಆಘಾತಕಾರಿಯಾಗಿದೆ....." ಎನ್ನುವ ಮಾಧವ್ ಕೇಂದ್ರದಲ್ಲಿ ಆಡಳಿತ ನಡೆಸಿರುವ ಸರಕಾರಗಳೆಲ್ಲವೂ ಕೋಮು ಹಿಂಸಾಚಾರ ಎಸಗುವವರ ವಿರುದ್ಧ ಕ್ರಮ ಕೈಗೊಳ್ಳುವಲ್ಲಿ ವಿಫಲವಾಗಿವೆ ಎಂದು ಟೀಕಿಸುತ್ತಾರೆ. ಈ ಘಟನೆಗಳು ಭಾರತದ ಜಾತ್ಯತೀತ ... ಕುರಿತು ಭಾರಿ ಅನುಮಾನಕ್ಕೆ ಆಸ್ಪದ ನೀಡಿವೆ; ಜಾತ್ಯತೀತತೆಯ ಕಲ್ಪನೆ ವಿಶ್ವಾಸಾರ್ಹತೆಯನ್ನು ಕಳೆದುಕೊಂಡಿದೆ ಎನ್ನುತ್ತಾರೆ. ಈ ಗಂಭೀರ ಸಮಸ್ಯೆ ಬಗ್ಗೆ ರಾಜಕೀಯ ಇಚ್ಛಾಶಕ್ತಿಯನ್ನೆ ಪ್ರದರ್ಶಿಸದ ರಾಜಕೀಯ ಪಕ್ಷಗಳೆಲ್ಲ ಸಾರ್ವಜನಿಕರೆದುರು ಏನೇ ಹೇಳಿದರೂ ಅವು ನಿಜಕ್ಕೂ ಜಾತ್ಯತೀತತೆಗೆ ಬದ್ಧವಾಗಿವೆಯೆ ಎಂದಾತ ಪ್ರಶ್ನಿಸುತ್ತಾರೆ. "ಕೇಂದ್ರದ... ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಗೃಹ ಸಚಿವಾಲಯದಿಂದ ರಾಷ್ಟ್ರೀಯ ಅಪರಾಧ ದಾಖಲೆ ಸಂಸ್ಥೆಗೆ ಹೊಸ ಸೂಚನೆಯೊಂದನ್ನು ಕಳುಹಿಸಲಾಗಿದೆ. ಅದರ ಪ್ರಕಾರ ಇನ್ನು ಮುಂದೆ ಪೊಲೀಸ್ ಇಲಾಖೆಯಲ್ಲಿರುವ ಮುಸ್ಲಿಮರ ಸಂಖ್ಯೆಯನ್ನು ಪ್ರಕಟಿಸಕೂಡದು ಎಂದಾಗಿದೆ..... ಇತಿಹಾಸವನ್ನು ಪರಿಷ್ಕರಿಸುವ ಯತ್ನಗಳಾಗುತ್ತಿವೆ, ಶಿಕ್ಷಣ ಮತ್ತು ಸಂಶೋಧನಾ ಕ್ಷೇತ್ರಗಳ ಕೇಸರೀಕರಣ ನಡೆಯುತ್ತಿದೆ, ಪಠ್ಯಪುಸ್ತಕಗಳನ್ನು ಬದಲಾಯಿಸಲಾಗುತ್ತಿದೆ...." ಎಂದು ಎಚ್ಚರಿಸುತ್ತಾರೆ. ಗೋಹತ್ಯಾ ನಿಷೇಧ ಕೂಡ ಜಾತ್ಯತೀತತೆಯ ಕಲ್ಪನೆಗೆ ವಿರುದ್ಧವಾಗಿದೆ ಎಂದು ಅಭಿಪ್ರಾಯಪಡುವ ಮಾಧವ್ "ಬೀಫ್ ನಿಷೇಧ ರಾಷ್ಟ್ರೀಯ ಸೂಕ್ತಿಯಾಗಿಬಿಟ್ಟಿದೆ; ತೀವ್ರವಾದಿಗಳ ಕೈಲಿ ಅದು ದೇಶದ ಕೋಮು ಸೌಹಾರ್ದ ಕೆಡಿಸುವ ಶಕ್ತಿಶಾಲಿ ಆಯುಧವಾಗಿ ಪರಿಣಮಿಸಿದೆ" ಎಂದು ಹೇಳುತ್ತಾರೆ. ಇತ್ತೀಚಿನ ದಿನಗಳಲ್ಲಿ ಭಾರತದ ಜಾತ್ಯತೀತತೆಯ ನೀತಿ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಎತ್ತಲಾಗುತ್ತಿರುವುದಕ್ಕೆ ಆತಂಕ ವ್ಯಕ್ತಪಡಿಸುತ್ತಾ "ಸ್ವಾತಂತ್ರ್ಯಾ ನಂತರದಲ್ಲಿ ಇದೇ ಮೊದಲ ಬಾರಿಗೆ ಹಿಂದೂ ರಾಷ್ಟ್ರ ಸಿದ್ಧಾಂತದ ಬಗ್ಗೆ ಇಷ್ಟೊಂದು ಬಹಿರಂಗವಾಗಿ, ಇಷ್ಟೊಂದು ಉದ್ಧಟತನದಿಂದ, ಪಟ್ಟು ಹಿಡಿದು ಮಾತಾಡಲಾಗುತ್ತಿದೆ..... ಹಿಂದೂ ರಾಷ್ಟ್ರ ನಿರ್ಮಾಣ ಎಂದರೆ ಭಾರತ ಒಡೆದು ಚೂರಾಗಲಿದೆ ಎಂದರ್ಥ..... ಭಾರತವನ್ನು ಹಿಂದೂ ರಾಷ್ಟ್ರವಾಗಿ ಪರಿವರ್ತಿಸುವೆವು ಎನ್ನುವಾಗ ಕೆಲವರಿಗೆ ಖುಷಿಯಾಗಬಹುದು.... ಈ ದೇಶದಲ್ಲಿ ಹಿಂದೂಗಳು ಬಹುಸಂಖ್ಯಾತರಾಗಿರುವುದರಿಂದ ಅವರ ಬಯಕೆಗಳೆಲ್ಲವೂ ಈಡೇರುತ್ತವೆ. ಆದರೆ ಹಿಂದೂ ರಾಷ್ಟ್ರದ ಬಗ್ಗೆ ಮಾತಾಡಿದಾಕ್ಷಣ ಅದನ್ನು ಪಾಕಿಸ್ತಾನ ಬಿಟ್ಟರೆ ಇನ್ಯಾವ ದೇಶಗಳೂ ಅರ್ಥಮಾಡಿಕೊಳ್ಳಲಾರವು ಏಕೆಂದರೆ ಈ ಕಲ್ಪನೆಯ ಪರಿಚಯವಿರುವುದು ಕೇವಲ ಪಾಕಿಸ್ತಾನಕ್ಕೆ ಮಾತ್ರ. ಕೂಡಲೆ ಅದು, ಭಾರತ ಹೆಚ್ಚುಕಡಿಮೆ ತನ್ನ ಹಾಗೆ ವರ್ತಿಸುತ್ತಿದೆ ನೋಡಿ ಎಂದು ವಿಶ್ವಕ್ಕೆಲ್ಲ ತೋರಿಸಿ ಇಸ್ಲಾಮಿಕ್ ರಾಷ್ಟ್ರದ ಸ್ಥಾಪನೆಯನ್ನು ಸಮರ್ಥಿಸಬಹುದು" ಎನ್ನುತ್ತಾರೆ. ಮಾಧವ್‌ರ ಭಾಷಣ ಹೆಚ್ಚುಕಡಮೆ ಇದೇ ಧಾಟಿಯಲ್ಲಿ ಮುಂದುವರಿಯುತ್ತದೆ.

ಆದುದರಿಂದ ಐಐಪಿಎ ನಿರ್ಧಾರ ಬದಲಾಗಿರುವುದು ಬಜೆಟ್ ಅಧಿವೇಶನದ ಕಾರಣಕ್ಕಾಗಿ ಅಲ್ಲ, ಅದು ಆಗಿರುವುದು ಸಂಘ ಪರಿವಾರದ ಒತ್ತಡದ ಮೇರೆಗೆ ಎನ್ನುವುದು ಸ್ಫಟಿಕದಷ್ಟು ನಿಚ್ಚಳವಿದೆ. ಮೋದಿ ಸರ್ಕಾರದಡಿ ಹೆಚ್ಚುತ್ತಿರುವ ಅಸಹಿಷ್ಣುತೆಗೆ ಇತ್ತೀಚಿನ ನಿದರ್ಶನವಾಗಿರುವ ಈ ಘಟನೆ ರಾಷ್ಟ್ರದ ಆಗಸದಲ್ಲಿ ಕಾಣಿಸತೊಡಗಿರುವ ಕಾರ್ಮೋಡಗಳು ಘಾಸಿಸುವವು ಎಂಬುದಕ್ಕೆ ಮತ್ತೊಂದು ಪುರಾವೆಯಾಗಿದೆ.

(ಆಧಾರ: 1.4.16ರ ದ ಹಿಂದೂ; 9.4.16ರ ಟೈಮ್ಸ್ ಆಫ್ ಇಂಡಿಯ ವರದಿಗಳು)





ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಹರಿಕಥೆಗಳಿಂದ ವೈಷ್ಣವ ಪ್ರಚಾರ

ಸ್ವರ್ಗ ಮತ್ತು ನರಕಗಳ ಪರಿಕಲ್ಪನೆ ಹುಟ್ಟಿದ್ದೇ ಸಾವಿನ ತರ ಬದುಕಿನ ಕಥೆ ಏನು ಎಂದು ಹುಟ್ಟಿದರ ಚಿಂತನೆ ಂದಾಗಿ. ಸಾವಿನಾಚೆಯ ಬದುಕಿನ ಬಗ್ಗೆ ಅನಾದಿಕಾಲ ದಲೂ ಎಲ್ಲಾ ಸಂಸ್ಕೃತಿಗಳಲ್ಲೂ ತಲೆ ಕೆಡಿಸಿಕೊಂಡಿದ್ದಾರೆ. ನ್ಯಂತ ನಿಗೂಢವಾದಂತಹ ಆ ವಿಷಯದ ಕುರಿತಾಗಿ ಲ್ಲರೂ ತಮ್ಮದೇ ಆದಂತಹ ಆಲೋಚನೆಗಳನ್ನು, ಚಿಂತನೆ ತ್ತು ಪರಿಕಲ್ಪನೆಗಳನ್ನು ಕಟ್ಟಿಕೊಟ್ಟಿದ್ದಾರೆ. ಆಯಾ ಸಾಂಸ್ಕೃತಿಕ, ಮಾಜಿಕ, ಭೌಗೋಳಿಕ ವ್ಯಾಪ್ತಿಗಳಿಗನುಗುಣವಾಗಿ ವುಗಳೂ ಕೂಡ ಮೈದಳೆದಿವೆ.

ನಮಗೀಗ ಚೆನ್ನಾಗಿ ಗೊತ್ತು ಸಾವಿನಾಚೆಗೆ ಯಾವ ಬುಕೂ ಇಲ್ಲ, ಸ್ವರ್ಗ ಇಲ್ಲ, ನರಕ ಇಲ್ಲ ಹಾಗೂ ಹುಪಾಲು ಮಂದಿಗೆ ಚೆನ್ನಾಗಿ ತಿಳಿದಿದೆ ಜನ್ಮಾಂತರ ಬುದಿಲ್ಲ. ಆದರೂ ಈಗ ರಾಮಚಂದ್ರ ಗುರೂಜಿ ತ್ತು ಇತರ ಜನ್ಮಾಂತರ ಧುರೀಣ ಅಡಕಸುಬಿಗಳು ನೆಲ್‌ಗಳಲ್ಲಿ ಜನ್ಮಾಂತರದ ರೋಚಕ ಕಥೆಗಳ ರುಡೆಗಳನ್ನು ಬಿಡುತ್ತಾ ಸ್ವಲ್ಪಮಟ್ಟಿಗೆ ಸಂದೇಹ ಇರುವ ಥವಾ ಗಟ್ಟಿಯಾಗಿ ತಿಳಿವಳಿಕೆ ಇಲ್ಲದ ಜನರ ದಾರಿ ಪ್ಪಿಸುತ್ತಿದ್ದಾರೆ. ಅಬ್ಬಬ್ಬಾ ಕೇಳಲೂ ಕೂಡ ಅಸಹನೀಯ ನಿಸುವಷ್ಟು ಮೌಢ್ಯದ ಪರಮಾವಧಿಯ ಜನ್ಮಾಂತರದ ತೆಗಳನ್ನು ಹೇಳುತ್ತಾ ಪಾಪದ ಜೀವಗಳಿಗೆ ತಿಕ್ಕಲು ತ್ತಿಸುತ್ತಿದ್ದಾರೆ. ಬಹಳಷ್ಟು ಜನರಿಗೆ, ಅದರಲ್ಲೂ ತಕ್ಕಮಟ್ಟಿಗೆ ಸೆಲ್ಫ್ ಸೈನ್ಸ್ ಮತ್ತು ಸುಪ್ತಮನಸ್ಸಿನ ಬಗ್ಗೆ ಒಂದಷ್ಟು ಓದಿಕೊಂಡಿರುವವರಂತೂ ತಮ್ಮ ಹಿಂದಿನ ಜೀವನದ ಗ್ಗೆ ತಿಳಿದುಕೊಳ್ಳಲು ಅತೀವ ಆಸಕ್ತಿ ವಹಿಸುತ್ತಾರೆ. ಅದನ್ನು ಜ್ಞಾನಿಕವಾಗಿ ವಿವರಿಸಿ ತಲೆ ಸವರುವಂತಹ ಬುದ್ಧಿವಂತರೂ ದ್ದಾರೆ.

ಇನ್ನೂ ಕೆಲವರು ಬೋಧಿಸತ್ವನ ಜಾತಕ ಕತೆಗಳನ್ನು ಧರಿಸಿಕೊಂಡು ಜನ್ಮಾಂತರಗಳು ಇವೆ ಎಂದು ದಿಸುವುದುಂಟು. ಈ ಜಾತಕ ಕಥೆಗಳೇ ಒಂದು ಥಿಕಗಳ ಕಂತೆ. ಇವಕ್ಕೂ ಬುದ್ಧನಿಗೂ ತಳುಕು ಕುವುದು ಶುದ್ಧ ಅವಿವೇಕತನ. ಜನ್ಮಾಂತರವೆನ್ನುವುದಕ್ಕೆ ದ್ಧನ ವಿಚಾರದಲ್ಲಿ ಬೇರೆಯೇ ಗೂಢಾರ್ಥವಿದೆ. ಮನಸ್ಸಿನ ಕ್ಷ್ಮಪದರಗಳ ಅವಲೋಕನವಿದೆ. ಇರಲಿ, ಅವನ್ನು ರೆಯೇ ವಿಷಯದಡಿ ಚರ್ಚಿಸೋಣ. ಇನ್ನು ಸ್ವರ್ಗ ತ್ತು ನರಕದಿಂದ ವಿಷಯಾಂತರವಾಗುವುದು ಬೇಡ.

ವೈಷ್ಣವ ಪ್ರಭಾವ

ನಮ್ಮ ಭಾರತದಲ್ಲಂತೂ ಸ್ವರ್ಗನರಕಗಳ ಕಲ್ಪನೆಯು ಹಳ ಗಾಢಪ್ರಭಾವ ಹೊಂದಿದ್ದು ವೈಷ್ಣವ ರಾಣಗಳಿಂದಲೇ ಎಂದು ಭಾಸವಾಗುತ್ತದೆ. ಇನ್ನು ನರಕದ ದರಣೆಗಳು ಅತಿಹೆಚ್ಚು ಕಾಣುವುದೂ ಕೂಡ ವಿಷ್ಣುಪುರಾಣ ತ್ತು ಗರುಡಪುರಾಣಗಳಲ್ಲಿ. ಸ್ವಲ್ಪ ಗಮನಿಸಿ ನೋಡಿದರೆ, ವ ಕಥಾವಳಿಗಳ ಕ್ಲೈಮ್ಯಾಕ್ಸ್‌ನಲ್ಲಿ ಶಿವಭಕ್ತರನ್ನು ದುಕೊಳ್ಳಲು ಸಾಕ್ಷಾತ್ ಶಿವನೇ ಬರುತ್ತಾನೆ. ತನ್ನೊಡನೆ ದ್ದುಕೊಂಡು ಹೋಗುತ್ತಾನೆ. ಕೈಲಾಸವನ್ನು ಸ್ವರ್ಗ ದೇನೂ ಕರೆಯುವುದಿಲ್ಲ, ಅದು ಅಕ್ಷರಶಃ ಹಿಮಾಲಯ ರ್ವತವೆಂದೇ ಪ್ರತೀತಿ. ಅದೊಂದು ಆಧ್ಯಾತ್ಮ ಸಾಧನೆಯ ಂದ್ರಸ್ಥಾನ. ಆದರೆ ವೈಷ್ಣವ ಭಕ್ತರಿಗೆ ಪುಷ್ಪಕವಿಮಾನ ರುತ್ತದೆ ಅಥವಾ ಗರುಡವಾಹನವಿರುವ ಮಂಟಪ ರುತ್ತದೆ. ಅವರು ವೈಕುಂಠಕ್ಕೆ ಹೋಗುತ್ತಾರೆ. ವೈಕುಂಠವು ರುವುದು ಸ್ವರ್ಗದಲ್ಲಿ.

ಪುಣ್ಯಕಾರ್ಯಗಳನ್ನು ಮಾಡಿದರೆ ಸ್ವರ್ಗ ಮತ್ತು ಪಕಾರ್ಯಗಳನ್ನು ಮಾಡಿದರೆ ನರಕ ಎಂದು ಳುತ್ತಾಹೋಗುವ ಪುರಾಣಿಕರು, ಅದರಲ್ಲೂ ವೈಷ್ಣವ ರಾಣಿಕರು ವೈಷ್ಣವ ಧರ್ಮ ಪ್ರಸಾರಕ್ಕೆ ಬಹು ಚೆಂದವಾದ ತೆಗಳನ್ನು ಹೊಸೆಯುತ್ತಿದ್ದರು. ಮಾಡುವ ಪಾಪಗಳನ್ನೆಲ್ಲಾ ಾಡಿ ಕೊನೆಗೊಮ್ಮೆ ನಾರಾಯಣ ಎಂದರೆ ಸಾಕು ನಿನಗೆ ಕುಂಠಕ್ಕೆ ಪ್ರಯಾಣ, ಸ್ವರ್ಗಪ್ರಾಪ್ತಿ, ನರಕದ ಭೀತಿ ಇಲ್ಲ ಂದೆಲ್ಲಾ ಕಥೆಗಳು ಧ್ವನಿಸುತ್ತಿದ್ದವು. ಇದನ್ನು ನಿರೂಪಿಸಲು ಂದು ಕಥೆ ಇದೆ. ಒಬ್ಬಾತ ಜಿಪುಣಾಗ್ರೇಸರ ವೈಶ್ಯ ಯುತ್ತಿದ್ದ. ತನ್ನ ಮರಣದ ಸಮಯದಲ್ಲೂ ಲೌಕಿಕವನ್ನೇ ತಿಸುತ್ತಿದ್ದ. ನಾರಾಯಣನ ಧ್ಯಾನ ಮಾಡಲು ಹೇಳಿದರೂ ನ ಮನಸ್ಸು ಅತ್ತ ಹರಿಯಲೊಲ್ಲದು. ಹೀಗೇ ಇಹದ ಗ್ಗೆಯೇ ಚಿಂತಿಸುತ್ತಾ ಮತ್ತೆ ಜನನ ಮರಣಗಳ ರ್ಮಬಂಧನದಲ್ಲಿ ಸಿಕ್ಕು ಮುಕ್ತಿ ಸಿಗದೇ ಎಂದು ಅವನ ನೆಯವರ ಯೋಚನೆ. ಅದಕ್ಕೆ ಅವರು ಒಂದು ಉಪಾಯ ಾಡಿದರು. ಆ ವ್ಯಾಪಾರಿಯ ಮಗ ಒಂದು ಕೈಯಲ್ಲಿ ಗಿನ) ನಾರು ಮತ್ತು ಮತ್ತೊಂದು ಕೈಯಲ್ಲಿ ಆಣ ಾಸು, ಹಣ)ವನ್ನು ಹಿಡಿದುಕೊಂಡು ಅವನಿಗೆ ಮೊದಲು ನಾರನ್ನು ತೋರಿಸಿ ಇದೇನೆಂದು ಕೇಳುತ್ತಾನೆ. ಅವನು ನಾರು ಎನ್ನುತ್ತಾನೆ. ಆಮೇಲೆ ಹಣವನ್ನು ತೋರಿಸಿದಾಗ ಆಣ ಎನ್ನುತ್ತಾನೆ. ನಾರು ಆಣ, ನಾರು ಆಣ ಎಂದು ಹೇಳಿಸುತ್ತಾ ನಾರಾಯಣ ಎಂದು ಹೇಳುವಂತೆ ಮಾಡಿ ಸತ್ತ ವೈಶ್ಯನು ಸ್ವರ್ಗ ಪಡೆಯುವಂತೆ ಮಾಡುತ್ತಾರೆ.

ಇಂತಹ ಪುರಾಣಾತೀತವಾದ ಮಿಥ್ಯ ಕಥೆಗಳಂತೂ ನಮ್ಮ ಭಾರತದ ಧಾರ್ಮಿಕ ಕಣಜಗಳಲ್ಲಿ ಅಪಾರ. ಸಾಯುತ್ತಿರುವ ತಂದೆ ತನ್ನ ಮಗ ನಾರಾಯಣನನ್ನು ಕರೆಯುವುದು. ಆಗ ಸಾಕ್ಷಾತ್ ನಾರಾಯಣನೇ ಅವನನ್ನು ಕರೆಸಿಕೊಳ್ಳುವುದು ಇತ್ಯಾದಿ ಕಥೆಗಳು ಬೇಕಾದಷ್ಟಿವೆ. ಬರಿಯ ನಾರಾಯಣನ ನಾಮಸ್ಮರಣೆ ಮಾಡಿದರೆ ಸ್ವರ್ಗಕ್ಕೆ ಶಾರ್ಟ್ ಕಟ್ ಎನ್ನುವಂತಹ ಈ ಆಸೆಬುರುಕ ಕಥೆಗಳು ನೂರಾರು ವರ್ಷಗಳ ಕಾಲ ನಮ್ಮ ಸಮಾಜದಲ್ಲಿ ವೈಷ್ಣವ ಧರ್ಮ ಪ್ರಚಾರದಲ್ಲಿ ಯಶಸ್ವಿಯಾಗಿ ಕೆಲಸ ಮಾಡಿದವು. ಇವಕ್ಕೆ ಹರಿಕಥೆದಾಸರೂ ಬಹಳ ಸಹಕಾರ ನೀಡಿದರು. ಇಂಥಾ ಕಥೆಗಳಿಂದಲೇ ಹರಿಕಥೆ ಎಂಬುದು ಬಂದದ್ದು. ಅದು ಮುಂದೆ ಶಿವನಕಥೆಯನ್ನೂ ಹೇಳಿದರೂ ಹರಿಕಥೆಯ ಪ್ರಕಾರದಲ್ಲಿಯೇ ಉಳಿದುಬಿಟ್ಟಿತು. ಇದಕ್ಕೆ ಇನ್ನೊಂದು ಮುಖ್ಯ ಕಾರಣವೂ ಇದೆ. ರಾಮಾಯಣವಾಗಲಿ, ಮಹಾಭಾರತವಾಗಲಿ, ಅದೇ ರೀತಿಯ ಮತ್ತೊಂದು ಬೃಹತ್ ಕಾವ್ಯ ರೂಪದಲ್ಲಿರುವ ಭಾಗವತವಾಗಲಿ ಎಲ್ಲವೂ ಹರಿ ಕೇಂದ್ರಿತ. ನಂತರ ಶಿವನ ವೈಭವವನ್ನು ವಿಜೃಂಭಿಸಿ ಹೇಳುವ ಮತ್ತು ಬರೆದ ಯಾವ ಕಥೆಗಳೂ ಅಂತಹ ವಿರಾಟ್ ಸ್ವರೂಪದಲ್ಲಿ ಕಾವ್ಯಗಳಾಗಿ ಬರಲಿಲ್ಲ. ಅಷ್ಟರಲ್ಲಾಗಲೇ ಹರಿ ನುಸುಳಿದ್ದ, ಬೆಳೆದಿದ್ದ ಮತ್ತು ಬಹುವಾಗಿ ವ್ಯಾಪಿಸಿದ್ದ.

ನಂತರ ಹುಟ್ಟಿದ್ದು ಹಳೆತಾದವು

ತಮಾಷೆಯ ವಿಷಯವೆಂದರೆ, ರಾಮಾಯಣ ಮತ್ತು ಮಹಾಭಾರತದಂತಹ ಕಾವ್ಯಗಳು ಹುಟ್ಟಿದ ಮೇಲೆ ಅವುಗಳ ಮುಖ್ಯವಾಹಿನಿಯಲ್ಲೇ ಕಥೆಗಳು, ಉಪಕಥೆಗಳು ಹುಟ್ಟಿಕೊಳ್ಳುತ್ತಾ ಬೆಳೆಯುತ್ತಾ ಹೋದಂತೆ ಭಾಗವತವು ಹುಟ್ಟಿತು. ಆದರೆ ಶ್ರೀ ಕೃಷ್ಣಭಾಗವತವು ನವ ಪುರಾಣಗಳನ್ನು ಹುಟ್ಟಿ ಹಾಕುತ್ತಾ ಮಹಾಭಾರತಕ್ಕಿಂತ ಹಳೆಯದೆನಿಸುವಂತೆ ಬಿಂಬಿಸಲಾಯಿತು. ಜಯ (ಮುಂದೆ ಮಹಾಭಾರತವೆಂದು ಪ್ರಖ್ಯಾತವಾದ) ಕಥೆಗಳ ಪ್ರತಿಯೊಂದು ಪಾತ್ರಗಳೂ ವಿವಿಧ ಸಂಸ್ಕೃತಿ ಮತ್ತು ಸಮಾಜಗಳ ಜೊತೆಗೆ ಸಾದೃಶ್ಯವನ್ನು ಕಂಡುಕೊಂಡು ಹೊಸ ಹೊಸ ಕಥೆಗಳನ್ನು ಸೃಷ್ಟಿಸುತ್ತಾ ಹೋದವು. ಅದೇ ರೀತಿಯಲ್ಲಿ ಕೃಷ್ಣನ ವಿಷಯದಲ್ಲೂ ಆಯಿತು. ಎಲ್ಲೆಲ್ಲೋ ಎಷ್ಟೇಷ್ಟೋ ಇದ್ದ ಬದ್ದ ಕೃಷ್ಣರ, ಗೊಲ್ಲರ, ಯಾದವ ಹುಡುಗರ ಕಥೆಗಳನ್ನೆಲ್ಲಾ ಒಂದು ವ್ಯಕ್ತಿಯಲ್ಲಿ ಕೇಂದ್ರೀಕರಿಸಿಕೊಂಡು ಕೃಷ್ಣನನ್ನಾಗಿಸಿದ್ದರು. ಅವನೇ ಶ್ರೀ ಕೃಷ್ಣನಾದ. ಅವನದೇ ಒಂದು ಲೋಕವನ್ನು ಕೂಡ ಸೃಷ್ಟಿಸಿದ್ದರು. ಇಹದಲ್ಲಿ ಮಾತ್ರವಲ್ಲದೇ ಪರದಲ್ಲಿಯೂ ಕೂಡ. ಆ ಕೃಷ್ಣನಿಗೊಂದು ಮೂಲ ಸ್ವರೂಪವನ್ನು ಆರೋಪಿಸಿ ವಿಷ್ಣು ಅಸ್ತಿತ್ವಕ್ಕೆ ಬಂದುದ್ದಲ್ಲದೇ ವಿಪುಲವಾಗಿ ಪ್ರಚಾರವನ್ನೂ ಪಡೆದುಕೊಂಡ. ರಾಮನ, ಕೃಷ್ಣನ ಕಥೆಗಳು ವಿಷ್ಣುವಿನ ಅಸ್ತಿತ್ವಕ್ಕೆ ಹೆಚ್ಚು ಹೆಚ್ಚು ಮೆರಗುಕೊಡುತ್ತಿದ್ದಂತೆ, ವೈದಿಕರು ನರಸಿಂಹ, ವರಹಾ, ಕೂರ್ಮ, ವಾಮನ ಹೀಗೆ ತಮಗೆ ಅನುಕೂಲಕರವಾದಂತಹ ಮತ್ತಷ್ಟು ಪ್ರತಿಮೆಗಳನ್ನು ಅದೇ ವಿಷ್ಣುವಿಗೆ ಸಮೀಕರಿಸಿದರು.

ಒಟ್ಟಾರೆ ಅಸ್ತಿತ್ವದಲ್ಲೇ ಇರದಿದ್ದ ವ್ಯಕ್ತಿಯೊಬ್ಬನಿಗೆ ಸ್ಥಿತಿಯ ಅಧಿಪತ್ಯವನ್ನು ಕೊಡಲಾಯಿತು. ಇದು ಯಾರೋ ಒಬ್ಬರ ಕೆಲಸವಲ್ಲ, ಹಾಗೂ ಒಮ್ಮೆ, ಒಂದು ಕಾಲಘಟ್ಟದಲ್ಲಿ ಆದ ಕೆಲಸವೂ ಅಲ್ಲ, ಪರಂಪರಾನುಗತವಾಗಿ ಅನೇಕ ವ್ಯಕ್ತಿಗಳು ನೂರಾರು ವರ್ಷಗಳ ಕಾಲ ಕೆಲಸ ಮಾಡಿದ್ದರು. ಅವರಲ್ಲಿ ಬಹುಮುಖ್ಯವಾಗಿ ಕಥೆಗಳನ್ನು ಹೇಳುತ್ತಿದ್ದಂತಹ ಕೀರ್ತನಕಾರರು. ಅವರ ಪ್ರಧಾನ ಮೂಲವು ರಾಮಾಯಣ, ಮಹಾಭಾರತ ಮತ್ತು ಭಾಗವತವಾದ್ದರಿಂದ ಅವರು ಹೇಳುವ ಕಥೆಗಳ ಪ್ರಕಾರಕ್ಕೆ ಹರಿಕಥೆ ಎಂದೇ ಹೆಸರಾಯಿತು.



ವಾಸ್ತವದ ಬದುಕು
ಸಾವಿನ ನಂತರಕ್ಕೆ ಸಿದ್ಧತೆ


ಇಂಥಾ ಹರಿಕಥೆ ದಾಸರು ಮತ್ತು ಭಾಗವತರು ಸ್ವರ್ಗ ಮತ್ತು ನರಕ ಹಾಗೂ ಪಾಪ ಮತ್ತು ಪುಣ್ಯಗಳ ವಿಚಾರಗಳನ್ನು ಬಹಳ ಗಾಢವಾಗಿ ತಂದವರು. ನಾವು ಚೆನ್ನಾಗಿ ನೆನಪಿಡಬೇಕು. ಯಾವುದೇ ವಿಚಾರ ಸಾಹಿತ್ಯಗಳು, ಕೃತಿಗಳು, ಬರವಣಿಗೆಗಳು ಜನರನ್ನು ಪ್ರಭಾವಕ್ಕೆ ಒಳಪಡಿಸಲಿಲ್ಲ. ಕಥೆಗಳು, ಕೇವಲ ಕಥೆಗಳು ಮಾತ್ರವೇ ಪೀಳಿಗೆಗಳಿಂದ ಪೀಳಿಗೆ ಕಿವಿಯೂದುತ್ತಾ ಬಂದು ಇಂದಿನ ಅಕ್ಷರಸ್ಥ ಮತ್ತು ವಿದ್ಯಾವಂತ ಪೀಳಿಗೆಯೂ ಕೂಡ ಆ ಕಥೆಗಳಿಂದ ಮುಕ್ತವಾಗದೇ ಅದನ್ನೇ ಬರೆಯುತ್ತಿದ್ದೇವೆ, ಅವನ್ನೇ ವಿಶ್ಲೇಷಿಸುತ್ತಿದ್ದೇವೆ. ಇದರಿಂದ ಒಳ್ಳೆಯ ಪರಿಣಾಮಗಳೂ ಆಗಿವೆ, ಕೆಟ್ಟ ಪರಿಣಾಮಗಳೂ ಆಗಿವೆ. ಅದರ ತುಲನೆ ಬೇರೆ. ಆದರೆ, ವೈದಿಕರ, ವೈಷ್ಣವರ ಅಥವಾ ಇನ್ನಾವುದೇ ಪ್ರಕಾರದ ದೈವಗಳ ಕಥೆಗಳು ಜನಮಾನಸದಲ್ಲಿ ಅಚ್ಚಳಿಯದೇ ಶ್ರದ್ಧಾಭಕ್ತಿಗಳ ರೂಪದಲ್ಲಿ ಉಳಿದಿರುವುದಕ್ಕೆ ಕಾರಣವೇ ಕಥೆಗಳ ರೂಪದಿಂದ ಆಗಿರುವಂತಹ ಪ್ರಚಾರಗಳು. ಈ ಕಥೆಗಳು ಜನರನ್ನು ಎಷ್ಟರಮಟ್ಟಿಗೆ ಮಾಡಿಟ್ಟವೆಂದರೆ, ಇರುವ, ಬದುಕಿರುವ ಇಡೀ ಜೀವನವನ್ನು ಸಾವಿನನಂತರದ ಜೀವನಕ್ಕೆ ಅಥವಾ ಸ್ಥಿತಿಗೆ ಸಿದ್ಧತೆ ಮಾಡಿಕೊಳ್ಳುವುದು; ಎಂಬಷ್ಟರ ಮಟ್ಟಿಗಾಗಿಬಿಟ್ಟಿತು. ಈಗ ಒಳ್ಳೆಯದು ಮಾಡಬೇಕು, ಈಗ ದಾನಧರ್ಮ ಮಾಡಬೇಕು, ಈಗ ದೇವರಿಗೆ ಪೂಜೆ ಪುನಸ್ಕಾರ, ಅತಿಥಿ ಸತ್ಕಾರ ಎಲ್ಲಾ ಮಾಡಬೇಕು. ಏಕೆಂದರೆ ಸತ್ತ ಮೇಲೆ ಉನ್ನತ ಪದವಿಯನ್ನು ಪಡೆಯಲು. ಒಂದು ವೇಳೆ ತಿಳಿದೋ ತಿಳಿಯದೋ ತಪ್ಪುಗಳನ್ನು ಮಾಡಿಬಿಟ್ಟರೆ? ಅದಕ್ಕಾಗಿ ಸ್ವರ್ಗ ಪ್ರಾಪ್ತಿಗಾಗಿ ಶಾರ್ಟ್ ಕಟ್‌ಗಳನ್ನೂ ಕಂಡುಹಿಡಿಯಲಾಯಿತು.

ವೈದಿಕರು, ಅರ್ಚಕರು ಅಥವಾ ಪುರೋಹಿತರು ತಮ್ಮ ಆಚಾರ ಮತ್ತು ಆರಾಧನಾ ವಿಧಾನಗಳಿಂದಲೇ ದೈವಾನುಗ್ರಹ ಮತ್ತು ಸ್ವರ್ಗ ಪ್ರಾಪ್ತಿ ಎಂದು ನಂಬಿಸಿದ್ದ ಕಾಲದಲ್ಲಿಯೇ ಅದನ್ನು ವಿರೋಧಿಸುವಂತಹ, ಅವನ್ನು ನಿರಾಕರಿಸುವಂತಹ ಹೊಸ ಹೊಸ ಕಥೆಗಳು ಹುಟ್ಟಿಕೊಂಡವು. ಹಾಗೆಯೇ ಸಂನ್ಯಾಸ, ಸಂತತ್ವ ಎಂಬಂತಹ ಪದವಿಗಳನ್ನು ಹೊಂದಿದ್ದು ಆಧ್ಯಾತ್ಮಿಕ ಸಾಧನೆಗಳನ್ನು ಮಾಡಿಕೊಂಡಿದ್ದವರನ್ನೂ ನರಕಕ್ಕೆ ತಳ್ಳುವ ಕಥೆಗಳೂ ಹುಟ್ಟಿಕೊಂಡವು. ವೈದಿಕ ಆಚಾರಗಳನ್ನು ಮತ್ತು ಸಿದ್ಧ ಆಧ್ಯಾತ್ಮ ಮಾದರಿಗಳನ್ನು ಧಿಕ್ಕರಿಸುವಂತಹ ಇವು ನಿಜಕ್ಕೂ ಕ್ರಾಂತಿಕಾರಕ ಕಥೆಗಳೇ ಆಗಿದ್ದವು.

ಸೂಳೆಯ ಸ್ವರ್ಗಾವರೋಹಣದ ಕಥೆ

ಹಾದರವು ಪಾಪವೆಂದೂ, ಪತಿವ್ರತೆಯಾಗಿರುವುದು ಪುಣ್ಯವೆಂದೂ ಸಾಧಿತವಾಗುತ್ತಿದ್ದ ಹಿಂದೊಂದು ಕಾಲದಲ್ಲಿ ಒಬ್ಬಳು ವೇಶ್ಯೆಯಿದ್ದಳು. ಅವಳ ಮನೆಯ ಸಮೀಪವೇ ಓರ್ವ ಸನ್ಯಾಸಿಯೂ ಇದ್ದ. ಪ್ರತಿ ದಿನವೂ ಅವಳ ಮನೆಗೆ ಬರುವ ಹೋಗುವ ಜನರ ಬಗ್ಗೆ ಕಣ್ಣಿಟ್ಟಿದ್ದ. ಜೊತೆಗೆ ತಾನು ಜಪ ಮಾಡುತ್ತಿರುವಾಗ ಅವಳ ಮನೆಗೆ ಯಾರೇ ವಿಟ ಬಂದರೂ ಒಂದು ಕಲ್ಲನ್ನು ಎತ್ತಿರಿಸುತ್ತಿದ್ದ. ಅದು ರಾಶಿ ಕಲ್ಲಾಗಿತ್ತು.

ಒಮ್ಮೆ ವೇಶ್ಯೆ ಅದೇ ದಾರಿಯಾಗಿ ಬಂದಾಗ ಸಂನ್ಯಾಸಿಗೆ ನಮಿಸಿದಳು. ಅವನೋ ಅವಳಿಗೆ ಆ ರಾಶಿ ಕಲ್ಲನ್ನು ತೋರಿಸಿ ಅದೇನೆಂದು ಹೇಳಿ, ಇದು ನಿನ್ನ ಪಾಪರಾಶಿ ಎಂದು ತಿಳಿಸಿದ. ಅಯ್ಯೋ ದೇವರೇ ನಾನಿಷ್ಟು ಪಾಪ ಮಾಡಿದೆನೇ ಎಂದು ಆಕೆ ಮರಣಿಸಿದಳು (ಇಷ್ಟು ಜನರೊಂದಿಗೆ ನಾನು ಮಲಗಿದೆನೇ ಎಂದು ಶಾಕ್ ಆಗಿ, ಬಹುಶಃ ಹೃದಯಾಘಾತದಿಂದ). ಆ ಸನ್ಯಾಸಿಯೂ ಮರಣಿಸಿದ. (ಹೇಗೆಂದು ಮತ್ತು ಆಗಲೇ ಏಕೆ ಸತ್ತನೆಂದು ಕೇಳಬೇಡಿ. ಇವು ವಿಷಯವನ್ನು ಧ್ವನಿಸಲು ಇರುವಂತಹ ಸಾಂಕೇತಿಕ ಕಥೆಗಳು) ಇಬ್ಬರೂ ಯಮಲೋಕಕ್ಕೆ ಹೋದರು. ವಿಚಾರಣೆಯಾದ ಮೇಲೆ ಸಂನ್ಯಾಸಿಯನ್ನು ನರಕಕ್ಕೆ ಕಳುಹಿಸಲೂ ಮತ್ತು ವೇಶ್ಯೆಯನ್ನು ಸ್ವರ್ಗಕ್ಕೆ ಕಳುಹಿಸಲೂ ತೀರ್ಮಾನ ಪ್ರಕಟವಾಯ್ತು. ಸಂನ್ಯಾಸಿ ಪ್ರತಿಭಟಿಸಿದ, "ನಾನು ನಿತ್ಯ ಜಪತಪ ಮಾಡುತ್ತಿದ್ದವನು. ಆಕೆ ಕುಲಟೆ, ಪಾಪದ ಕೆಲಸವಾದ ಹಾದರ ಮಾಡುತ್ತಿದ್ದ ವೇಶ್ಯೆ. ಅವಳನ್ನು ಹೇಗೆ ಸ್ವರ್ಗಕ್ಕೆ ಕಳುಹಿಸುತ್ತೀರಿ?" ಎಂದು. ಆಗ ಯಮ ಹೇಳಿದ, "ನೀನು ಜಪ ತಪ ಮಾಡುತ್ತಿದ್ದರೂ ಆಕೆಯು ಮಾಡುತ್ತಿದ್ದ ಪಾಪಕರ್ಮಗಳ ಮೇಲೆಯೇ ಕಣ್ಣಿತ್ತು ಹಾಗೂ ಅವನ್ನೇ ಎಣಿಸುತ್ತಿದ್ದೆ. ಈಕೆಯಾದರೋ ತಾನು ಮಾಡಿದ ಪಾಪಕರ್ಮಗಳ ಬಗ್ಗೆ ಪಶ್ಚಾತ್ತಾಪಪಟ್ಟಳು."






ಇಲ್ಲಿ ಏನೇ ಜಪತಪ ಆಧ್ಯಾತ್ಮ ಸಾಧನಾದಿಗಳನ್ನು ಮಾಡುತ್ತಿದ್ದರೂ ಪರದೋಷ ಕಾಣುತ್ತಿದ್ದರೆ ಸ್ವರ್ಗವು ಸಿಗುವುದಿಲ್ಲವೆಂದೂ, ಮಾಡಿದ ಕೆಲಸಕ್ಕೆ ಪಶ್ಚಾತ್ತಾಪ ಪಟ್ಟರೆ ಸ್ವರ್ಗ ಪ್ರಾಪ್ತಿಯೆಂದೂ ಧ್ವನಿಸುವ ಈ ಕತೆಯ ಬಗ್ಗೆ ಇನ್ನೊಂದು ಗಾಢವಾದ ಆಲೋಚನೆ ಮೂಡುತ್ತದೆ. ಬಹುಶಃ ಪಶ್ಚಾತ್ತಾಪದಿಂದ ಸ್ವರ್ಗ ಪ್ರಾಪ್ತಿಯಾಗುವ ಈ ಕಥೆಯು ಭಾರತಕ್ಕೆ ಕ್ರೈಸ್ತ ಧರ್ಮದ ಪ್ರವೇಶವಾದ ಪ್ರಭಾವವಿರಬಹುದೇನೋ ಎಂದು. ಅದೊಂದು ಅನುಮಾನವಷ್ಟೇ. ಹಾಗೆಂದೇ ಹೇಳಲಾಗುವುದಿಲ್ಲ. ಏಕೆಂದರೆ ಪಶ್ಚಾತ್ತಾಪವೆಂಬ ಮೌಲ್ಯವನ್ನು ಭಾವನಾತ್ಮಕವಾಗಿ ಭಾರತದ ವಿವಿಧ ಸಂಸ್ಕೃತಿಗಳಲ್ಲೂ ಗ್ರಹಿಸಿದ್ದಾರೆ.

ಇಂಥಾ ಕಥೆಗಳನ್ನು ಹುಟ್ಟಿ ಹಾಕಿದವರು ಬಹುಶಃ ಕೀರ್ತನಕಾರರೇ ಎಂದು ನಾನು ಭಾವಿಸುತ್ತೇನೆ. ಏಕೆಂದರೆ ಇವುಗಳಲ್ಲಿ ಮುಕ್ತ ವಿಚಾರಗಳಿಗೆ, ಭಕ್ತಿಗೆ, ಮಾನವನ ಭಾವನಾತ್ಮಕ ವಿಷಯಗಳಿಗೆ ಹೆಚ್ಚಿನ ಪ್ರಾಶಸ್ತ್ಯವಿದ್ದು ಯಾವುದೇ ಅಧಿಕೃತವಾದಂತಹ ಮೂಲಗಳ ಆಧಾರಗಳು ಇರುತ್ತಿರಲಿಲ್ಲ.

ಪುರೋಹಿತಶಾಹಿಗೆ, ವೈದಿಕ ಆಚಾರಗಳಿಗೆ ಸೆಡ್ಡು ಹೊಡೆಯುವಂತೆ ಹುಟ್ಟಿದ್ದು ಅನೇಕಾನೇಕ ಕೈವ ಕಥೆಗಳು. ಅವುಗಳಲ್ಲಿ ಬಹು ಜನಪ್ರಿಯವಾದ ಕಥೆ ಕೋಳೂರು ಕೊಡಗೂಸು. ಇದು ಬಹಳ ಸೂಕ್ಷ್ಮ ವಿಚಾರಗಳನ್ನು ತಿಳಿಸುತ್ತದೆ. ಕೋಳೂರಿನ ಕೊಡಗೂಸನ್ನು ಮುಂದಿನ ಸಂಚಿಕೆಯಲ್ಲಿ ಎತ್ತಿಕೊಳ್ಳೋಣ. ■

ಯಾವ ಮಠದ ಯಾವ ಹುತ್ತದಲ್ಲಿ ಯಾವ ಹಾವು ಇದೆಯೋ




ಯಾವುದೇ ಮನೆಯಲ್ಲಿ ಮನೆಯೊಡೆಯನಿಗಿಂತ ಹೆಚ್ಚು ಪವರ್‌ಫುಲ್ ಯಾರೆಂದು ಕೇಳಿದರೆ ಸಿಗುವ ಉತ್ತರ ಆ ಮನೆಯೊಡೆಯನ ಹೆಂಡತಿಯೆಂದು. ಅದರಂತೆ ಮಂತ್ರಿಯೊಬ್ಬನ ಸೆಕ್ರೆಟರಿಗಿಂತ ಹೆಚ್ಚು ಪವರ್‌ಫುಲ್ ಯಾರೆಂದರೆ ಆ ಸಚಿವರು ಟೂರಿಗೆ ಹೋದಾಗ ಅವರು ಉಳಿಯುವ ಸರ್ಕೀಟ್ ಹೌಸ್ ಅಥವಾ ಸರಕಾರಿ ಗೆಸ್ಟ್ ಹೌಸಿನ ಮ್ಯಾನೇಜರ್ ಎಂಬುದಾಗಿ ಉತ್ತರ ಸಿಗುತ್ತದೆ. ಹಾಗೆಯೇ ಯಾವುದೇ ಕಾವಿಧಾರಿಗಳ ಮಠದಲ್ಲಿ ಸ್ವಾಮೀಜಿಗಿಂತ ಯಾರು ಹೆಚ್ಚು ಪವರ್‌ಫುಲ್ ಎಂದು ಕೇಳಿದರೆ ಸಿಗುವ ಉತ್ತರ ಆ ಸ್ವಾಮೀಜಿಯ ಕಾರಿನ ಡ್ರೈವರ್ ಎಂಬುದಾಗಿ. ಮಂತ್ರಿಯೊಬ್ಬ ಟೂರಿಗೆ ಹೋಗಿ ಸರಕಾರಿ ಗೆಸ್ಟ್‌ಹೌಸಿನಲ್ಲಿ ಉಳಿದಾಗ ಅವರ ರಾತ್ರಿಯ ಅಗತ್ಯವಾದ ಗುಂಡು-ತುಂಡು ಮದಿರೆ-ಮಾನಿನಿಯನ್ನು ಒದಗಿಸುವವರು ಈ ಸರ್ಕೀಟ್ ಹೌಸಿನ ಮ್ಯಾನೇಜರ್. ಅದರಂತೆ ಮಠ-ಆಶ್ರಮಗಳಲ್ಲಿ ಸ್ವಾಮೀಜಿಗಳ ರಾತ್ರಿಯ ಅಗತ್ಯಗಳಾದ ಮಾನಿನಿ-ಮದಿರೆಗಳನ್ನು ಪೂರೈಸುವವನು ಆ ಮಠದ ಕಾರಿನ ಡ್ರೈವರ್. ಸ್ವಾಮೀಜಿಯ ಈ ಪರಮ ಪವಿತ್ರ ಹವ್ಯಾಸಗಳಿಗೆ ಮಠದ ಡ್ರೈವರ್ ಸ್ವತಃ ಸಾಕ್ಷಿಯಾಗಿರುವುದರಿಂದ ಸ್ವಾಮೀಜಿಗಳು ತಮ್ಮ ಕಾರಿನ ಡ್ರೈವರುಗಳಿಗೆ ಇತರರಿಗಿಂತ ಬಹಳ ಹೆಚ್ಚು ಮರ್ಯಾದೆ ಕೊಡುತ್ತಾರೆ. ಹಾಗಾಗಿ ಕಾರ್ ಡ್ರೈವರ್ ಸ್ವಾಮೀಜಿಗಿಂತ ಹೆಚ್ಚು ಪವರ್ ಫುಲ್ ಎಂದು ಗಣಿಸಬೇಕಾಗುತ್ತದೆ.

ಇದಕ್ಕೆ ಪುರಾವೆಯೆಂದರೆ ನಮ್ಮ ಒಂದು ಸ್ಥಳೀಯ ಮಠದ ಕಾರಿನ ಡ್ರೈವರ್ ಎಷ್ಟು ಪ್ರಭಾವಶಾಲಿಯಾಗಿದ್ದ ಎಂದರೆ ಅವನು ತನ್ನ ಸ್ವಾಮೀಜಿಯ ಪ್ರಭಾವ ಬಳಸಿ ತನ್ನ ಮಗನನ್ನು ನಮ್ಮೂರಿನಲ್ಲಿ ಬಿಜೆಪಿ ಪಕ್ಷದ ಶಾಸಕ ಮಾಡಿಯೇ ಬಿಟ್ಟಿದ್ದ ನಂತರ ಈ ಶಾಸಕನೂ ರಾಸಲೀಲೆಯಲ್ಲಿ ಸಿಕ್ಕಿಬಿದ್ದಿದ್ದು ಬೇರೆ ವಿಷಯ. ಎಲ್ಲಾ ಸ್ವಾಮೀಜಿಗಳೂ ಅತ್ಯಂತ ನಂಬಿಕಸ್ಥನನ್ನೇ ತಮ್ಮ ಕಾರಿನ ರಾತ್ರಿ ಪಾಳಿಯ ಡ್ರೈವರ್ ಆಗಿ ನೇಮಿಸುವುದರಿಂದ ಸ್ವಾಮೀಜಿಗಳ ಗುಟ್ಟು ಹೊರಬಂದು ಎಡವಟ್ಟು ಆಗುವುದು ಕಡಿಮೆ. ಆದರೆ ರಾಮಚಂದ್ರಾಪುರ ಮಠದ ಸ್ವಾಮಿ ಇತರ ಸ್ವಾಮಿಗಳಂತೆ ಬಡ ಅನಕ್ಷರ ಹೆಣ್ಣನ್ನು ಶೋಷಿಸುವ ಬದಲಿಗೆ ಒಂದು ವಿದ್ಯಾವಂತ ಸ್ವಾಭಿಮಾನಿ ಕುಟುಂಬದ ಹೆಣ್ಣನ್ನು ಶೋಷಿಸಿದ್ದರಿಂದ ಸಿಕ್ಕಿಬಿದ್ದು ಪಡಬಾರದ ತಾಪತ್ರಯ ಪಡಬೇಕಾಯಿತು ಪಾಪ.

1967-68ರಲ್ಲಿ ಉಡುಪಿಯ ಅಷ್ಟಮಠದ 30 ವರ್ಷ ದಾಟಿದ ಸ್ವಾಮಿಯೊಬ್ಬರು ಪೀಠತ್ಯಾಗ ಮಾಡಿದರು. ಆದರೆ ಆಗಿನ ಉಳಿದ ಏಳು ಮಠಾಧೀಶರು ಅವರ ಮನವೊಲಿಸಲು ಪ್ರಯತ್ನಿಸುತ್ತಾ ಹೇಳಿದ್ದೇನೆಂದರೆ- "ನೀವು ಪೀಠ ತ್ಯಾಗ ಮಾಡಬಾರದು. ಈ ಪೀಠದಲ್ಲಿಯೇ ಇದ್ದುಕೊಂಡು ನಮ್ಮಂತೆ ನೀವೂ ನಾಲ್ಕು ಗೋಡೆಗಳ ಮಧ್ಯೆ ನಿಮಗೆ ಇಷ್ಟವಾದುದನ್ನು ಅನುಭವಿಸುತ್ತಾ ಸ್ವಾಮೀಜಿಯಾಗಿಯೇ ಮುಂದುವರಿಯಬಹುದು" ಎಂದು ಆಸೆ ತೋರಿಸಿದ್ದರಂತೆ. ಆದರೆ ಅವರು ಉಳಿದ ಸ್ವಾಮಿಗಳಂತೆ ತಮ್ಮ ಆತ್ಮಸಾಕ್ಷಿಗೆ ವಿರುದ್ಧವಾಗಿ ತಮ್ಮ ಭಕ್ತರಿಗೆ ಮತ್ತು ಮುಖ್ಯಪ್ರಾಣ ದೇವರಿಗೆ ಮೋಸ ಮಾಡುವಷ್ಟು ನೈತಿಕಶಕ್ತಿ ತಾನು ಹೊಂದಿಲ್ಲ ಎಂದು ಹೇಳಿ ಪೀಠತ್ಯಾಗ ಮಾಡಿಯೇಬಿಟ್ಟರು. ಎಸ್‌ಎಸ್‌ಎಲ್‌ಸಿ ಪಾಸಾಗಿದ್ದ ಇವರಿಗೆ ಪೀಠತ್ಯಾಗದ ನಂತರ ಸಿಂಡಿಕೇಟ್ ಬ್ಯಾಂಕಿನ ಆಗಿನ ಮುಖ್ಯಸ್ಥರಾಗಿದ್ದ ಟಿ.ಎಂ.ಎ.ಪೈ ಅವರು ಆಗ ಖಾಸಗಿಯಾಗಿದ್ದ ಸಿಂಡಿಕೇಟ್ ಬ್ಯಾಂಕಿನಲ್ಲಿ ಗುಮಾಸ್ತ ನೌಕರಿ ಕೊಡಿಸಿದರು. ಆನಂತರ ಈ ಸಾತ್ವಿಕರು ಸಂಸಾರಸ್ಥರಾಗಿ ಒಂದು ಹೆಣ್ಣು ಮಗುವಿನ ತಂದೆಯಾಗಿ 60 ನೇ ವರ್ಷಕ್ಕೆ ಬ್ಯಾಂಕಿನಿಂದ ಗೌರವಪೂರ್ಣವಾಗಿ ನಿವೃತ್ತಿಯಾದರು. ಮಗಳಿಗೆ ಮದುವೆ ಮಾಡಿ ಅವಳು ಅಮೆರಿಕಾದಲ್ಲಿ ನೆಲೆಸಿದಾಗ ಇವರೂ ಅಲ್ಲಿ ಹೋಗಿ ನೆಲೆಸಿದ್ದರು ಹಾಗೂ 2014 ರ ಪರ್ಯಾಯಕ್ಕೆ ಅವರು ಬಂದಿದ್ದಾಗ ತಮ್ಮ ಜೀವನವೃತ್ತಾಂತ ಸ್ಥಳೀಯ ಪತ್ರಿಕೆಗಳಿಗೆ ಬಿಡಿಸಿಟ್ಟಿದ್ದರು.

"ನಮ್ಮಂತೆ ನೀವೂ ಸ್ವಾಮಿಯಾಗಿದ್ದುಕೊಂಡೇ ನಿಮಗೆ ಇಷ್ಟವಾದ ರೀತಿಯಲ್ಲಿ ಜೀವಿಸುತ್ತಾ ಮಠದೊಳಗೆಯೇ ಇರಬಹುದು" -ಎಂದು ಆಸೆ ತೋರಿಸುತ್ತಾ 48 ವರ್ಷಗಳ ಹಿಂದೆ ಈ ಶುದ್ಧ ಮನಸ್ಸಿನ ಸ್ವಾಮೀಜಿಯ ಮನಸ್ಸನ್ನೂ ಮಲಿನಗೊಳಿಸಲು ಪ್ರಯತ್ನಿಸಿದ ಏಳು ಆಷಾಢಭೂತಿಗಳಲ್ಲಿ ಒಬ್ಬರು ಈಗಲೂ ಮಠಾಧೀಶರಾಗಿದ್ದು ಈಗ ಅವರಿಗೆ ಎಂಬತ್ತು ವರ್ಷ ದಾಟಿದೆ. ಈಗ ಹೇಳಿ- ಯಾವ ಮಠದ ಯಾವ ಹುತ್ತದಲ್ಲಿ ಯಾವ ಹಾವು ಸ್ವತಃ ಪುಂಗಿ ಊದುತ್ತಿದೆಯೋ?

- ಹರೀಶ್ ಎಂ ರಾವ್, ಉಡುಪಿ



ಮೌಢ್ಯ ಪ್ರತಿಬಂಧಕ ಕಾಯ್ದೆ ಜಾರಿ ಖಂಡಿತಾ ಬೇಡ

ದಿವಂಗತ ಕಲ್ಬುರ್ಗಿ, ಪನ್ಸಾರೆ, ದಾಬೋಲ್ಕರರಂತಹ ಹಿರಿಯ ಚೇತನಗಳು ಪ್ರಾಣಾಪಾಯದ ಅರಿವಿದ್ದೂ ಕೂಡ ಜನರು ಮೌಢ್ಯಗಳಿಗೆ ಬಲಿಬಿದ್ದು ನರಳುವುದರಿಂದ ಮುಕ್ತಿಕೊಡಿಸುವ ಅಥವ ಮೌಢ್ಯಾಚರಣೆಗಳ ವಿರುದ್ಧ ಮುಗ್ಧರನ್ನ ಜಾಗೃತಿಗೊಳಿಸುವ ಸಲುವಾಗಿ ಹೋರಾಡಿ ಆ ಕಾರಣಕ್ಕಾಗೇ ಅಮಾನುಷವಾಗಿ ಕೊಲೆಗೀಡಾಗಿ ಹೋದರು. (ಸದ್ಯಕ್ಕೆ ಮಂಗಳೂರಿನ ವಿಚಾರವಾದಿ ನರೇಂದ್ರ ನಾಯಕರು ಅಂತಹ ಬೆದರಿಕೆಯನ್ನು ಎದುರಿಸುತ್ತಾ ಈ ಇಳಿವಯಸ್ಸಿನಲ್ಲೂ ಅಪಾಯವನ್ನು ಎದುರು ಹಾಕಿಕೊಂಡು ಹೋರಾಡುತ್ತಿದ್ದಾರೆ.)

ಈ ಕಾಲದಲ್ಲಿ ಜನರನ್ನು ಎಜುಕೇಟ್ ಮಾಡುವುದು ದೊಡ್ಡ ಸಂಗತಿಯೇನಲ್ಲ. ಜನರಿಗೆ ವಿದ್ಯೆಯ ಮಹತ್ವದ ಅರಿವಿದೆ. ವಿದ್ಯೆಯೂ ಎಲ್ಲರಿಗೂ ಸಿಗುವಂತಹ ವಾತಾವರಣ ಇದೆ. ಎಲ್ಲಿಂದೆಲ್ಲಿಗೂ ಕೂಡ ಕ್ಷಣಾರ್ಧದಲ್ಲಿ ಸಂಪರ್ಕಿಸಬಹುದಾದ ಸಂಪರ್ಕದ ಸಂವಹನದ ಮಾಧ್ಯಮಗಳಿವೆ. ಮನಸ್ಸಿದ್ದರೆ ಯಾರೂ ಕೂಡ ಅರಿವನ್ನು ಇಂದು ಗಳಿಸಿಕೊಳ್ಳಬಹುದು. ಆದರೆ...

ನಾವುಗಳು ಇಷ್ಟೆಲ್ಲ ಮುಂದುವರೆದಿದ್ದರೂ ಸಮಾಜ ಮಾತ್ರ ಹಿಮ್ಮುಖವಾಗೇ ಚಲಿಸುತ್ತಿರುವಂತೆ ದಿನೇದಿನೇ ಭಾಸವಾಗುತ್ತಿರುವ ಕಾರಣವಾದರೂ ಏನು? ರೋಗಗಳು ಕೀಟಗಳು ಕಾಲಕ್ಕೆ ತಕ್ಕಂತೆ ತಮ್ಮ ತಾಕತ್ತನ್ನು ಬದಲಿಸಿಕೊ... ಬೆಳೆಯುತ್ತಿರುತ್ತವಂತೆ. ಹಳೆಕಾಲದ ಮದ್ದುಗಳು ... ಕಾಲದ ಕೀಟ ರೋಗಗಳಿಗೆ ನಾಟದು. ಅದೇ... ಹೋದೆಯಾ ಪಿಶಾಚಿ ಎಂದರೆ ಬಂದೆ ಗವಾಕ್ಷದ... ಎಂಬಂತೆ ಅಂದಿನ ಸಾಮಾಜಿಕ ಅನಿಷ್ಟಗಳು ಕಾಲಕ್ಕೆ ತ... ಹೊಸರೂಪವನ್ನು ಪಡೆದುಕೊಂಡು ಅದರ ಹ... ಸುವರ್ಣಯುಗಕಾಲವನ್ನೂ ನಾಚಿಸುವಂತೆ ಇ... ಮೆರೆಯುತ್ತಿವೆ. ಮೌಢ್ಯದ ಫಲಾನುಭವಿಗಳೆನಿಸಿದ... ರಾಜಕೀಯ, ಮಾಧ್ಯಮ ಜಗತ್ತು, ವಿದ್ಯಾಕೇಂದ್ರಗಳ... ತನ್ನ ಕಬಂಧ ಹಸ್ತವನ್ನು ಚಾಚಿ ತನ್ನದೇ ಆದ ರೀತಿ... ಮೌಢ್ಯವನ್ನು ಮತ್ತಷ್ಟು ಮೆರೆಸುತ್ತಿದ್ದಾರೆ. ಗಮನಿಸಿ, ಸಮಾ... ಹಿತದೃಷ್ಟಿಯನ್ನಿಟ್ಟುಕೊಂಡು ಜನರಲ್ಲಿ ಅರಿವು ಮೂ... ಹೊರಟ ಸಜ್ಜನ ಹಿರಿ ಜೀವಗಳಾದ ಕಲ್ಬುರ್ಗಿ, ಪನ... ದಾಬೋಲ್ಕರ್ ಅಂತವರನ್ನು ಕೊಂದು ಗಿಟ್ಟಿಸಿಕೊ... ಸನ್ನಿವೇಶಗಳೇ ಇವುಗಳ ತಾಕತ್ತನ್ನು ನಿಸ್ಸಂಶಯವ... ನಮ್ಮೆದುರು ಬಿಂಬಿಸುತ್ತಿದೆ.

ಸಮಾಜವಾದಿ ಸಿದ್ಧಾಂತದ ಹಿನ್ನೆಲೆಯ ಮುಖ್ಯಮ... ಸಿದ್ಧರಾಮಯ್ಯನವರು ಅಧಿಕಾರಕ್ಕೇರಿದಾಗ ಬಹಳ ದೊ... ಮಟ್ಟದಲ್ಲಿ ಚರ್ಚೆಗೆ ಬಂದಂತಹ ವಿಚಾರವೆಂದರೆ ಸರ... ಜಾರಿಗೊಳಿಸಲು ತಯಾರಾದ ಮೌಢ್ಯ ವಿರೋಧಿ ಕಾಯ... ಅಧಿಕಾರಕ್ಕೇರಿದ ಆರಂಭದಲ್ಲೇ ಈ ಬಗ್ಗೆ ಮಾತು... ಬಂದವಾದರೂ ಇದರ ಫಲಾನುಭವಿಗಳು ಮ... ಪಕ್ಷೀಯರಲ್ಲೇ ಈ ಕುರಿತು ಕೆಲ ಭಿನ್ನಮತಗಳಿದ್ದ ಕಾ... ಅದು ಕಾರ್ಯರೂಪಕ್ಕೆ ಬರಲೇ ಇಲ್ಲ. ನಂ... ಕಲ್ಬುರ್ಗಿಯವರ ಹತ್ಯೆಯ ಬಳಿಕ ಅಲ್ಲದೇ ಇತ್ತೀಚೆ... ಕೂಡ ಮಾನ್ಯ ಮುಖ್ಯಮಂತ್ರಿಯವರು ಈ ... ಮಾತನ್ನಾಡಿದ್ದರು. ಸಿದ್ಧರಾಮಯ್ಯನವರ ಇಂತಹ ಮಾತಿ... ನಿಜಕ್ಕೂ ಪ್ರಾಮಾಣಿಕತೆ ಕಾಣಿಸುತ್ತಿದೆಯೇ? ಎಂಬ ಸಂ... ಇತ್ತೀಚೆಗಿನ ಕೆಲ ವಿದ್ಯಮಾನಗಳನ್ನು ನೋಡಿದ... ಮೂಡುವುದು ಸಹಜ.

ವಯೋವೃದ್ಧರಾದ ಸಂಶೋಧಕ ಕಲ್ಬುರ್ಗಿಯವರ ... ನಡೆದು ಈತನಕ ಯಾವ ವಿಧದಲ್ಲೂ ತನಿಖೆ ಒಂದಿನ... ಮುನ್ನಡೆ ಸಾಧಿಸಲೇ ಇಲ್ಲ. ದೆಹಲಿಯ ನಿರ್ಭಯ ಪ್ರಕರ... ಬಳಿಕ ಮಹಿಳೆಯರ ಮೇಲಿನ ಅತ್ಯಾಚಾರ ಪ್ರಕರ... ಕಾನೂನು ಮತ್ತಷ್ಟು ಬಿಗಿಗೊಳಿಸಲಾಯಿತಾದರೂ ಯಾವ...

ಗೋಸ್ವಾಮಿ ಖುಲಾಸೆಗೊಂಡಿದ್ದಕ್ಕೆ ಯಾಕೆ ಕಾವಿಧಾರಿಗಳಿಗೆ ಖುಷಿ ಗೊತ್ತೆ

ಗಾಯಕಿ ಪ್ರೇಮಲತಾ ಶಾಸ್ತ್ರಿ ಹಾಗೂ ರಾಘವೇಶ್ವರ ಭಾರತೀ ನಡುವಿನ ಸಂಬಂಧ 'ಪರಸ್ಪರ ಒಪ್ಪಿತವಾದ ಶೀಲಗೆಟ್ಟ ಸಂಬಂಧ' ಎಂದು ಸೆಷನ್ಸ್ ನ್ಯಾಯಾಲಯ ಅಭಿಪ್ರಾಯಪಟ್ಟಿರುವುದರಿಂದ ಗೋಸ್ವಾಮಿ ಬ್ರಹ್ಮಚಾರಿ ಅಲ್ಲವೇ ಅಲ್ಲ ಎಂದು ಸ್ವತಃ ಕೋರ್ಟ್ ಸಹ ಒಪ್ಪಿಕೊಂಡಂತಾಗಿದೆ. ಆದರೂ ಇದು ಅತ್ಯಾಚಾರದ ಪರಿಧಿಯಲ್ಲಿ ಬರುವುದಿಲ್ಲ ಎಂದು ಕೋರ್ಟ್ ಗೋಸ್ವಾಮಿಯನ್ನು ಆರೋಪಮುಕ್ತಗೊಳಿಸಿದೆ.

ಜಯಲಲಿತಾ, ಯಡಿಯೂರಪ್ಪ ಅಥವಾ ಬಿಡದಿ ನಿತ್ಯಾನಂದ ಆರೋಪಮುಕ್ತವಾದಂತೆ ಭಾರತದಲ್ಲಿ ಆರೋಪ ಮುಕ್ತವಾಗುವುದು ದೊಡ್ಡ ವಿಷಯವಲ್ಲ. ಸದ್ಯದಲ್ಲಿಯೇ ಅಸಾರಾಮ್ ಬಾಪು ಸಹ ಆರೋಪಮುಕ್ತವಾದರೆ ಆಶ್ಚರ್ಯವಿಲ್ಲ. ಎಷ್ಟೇ ಘೋರ ಅಪರಾಧ ಮಾಡಿಯೂ ಭಾರತದಲ್ಲಿ ಕಾನೂನಿನ ಕೈಯಿಂದ ಪಾರಾಗುವುದು ಸಾಧ್ಯ. ಉದಾಹರಣೆಗೆ ಬೆಳಗಾವಿ ಜಿಲ್ಲೆಯ ಗೋಕಾಕ್ ನಗರದ ನಡುಬೀದಿಯಲ್ಲಿ ಒಬ್ಬ ಪ್ರಾಮಾಣಿಕ ಅಬಕಾರಿ ಅಧಿಕಾರಿಯ ಕೊಲೆಯಾಗುತ್ತದೆ. ನೂರಾರು ಜನರ ಕಣ್ಣೆದುರಲ್ಲಿಯೇ ಈ ಕೊಲೆ ನಡೆಯುತ್ತದೆ. ಆದರೆ ಕೋರ್ಟಿನಲ್ಲಿ ಆರೋಪಿಗಳ ಖುಲಾಸೆಯಾಗುತ್ತದೆ ಹಾಗೂ ಒಬ್ಬ ಪ್ರಮುಖ ಆರೋಪಿ ಈಗ ನಮ್ಮ ರಾಜ್ಯದಲ್ಲಿ ಸಚಿವನಾಗಿದ್ದಾನೆ. ನೋಡಿ ನ್ಯಾಯ ಯಾರ ಪರವಾಗಿದೆ.

ನಮ್ಮ ಪುರಾಣಗಳಲ್ಲಿಯೂ ದೇವರೆನಿಸಿಕೊಂಡವರು ಮತ್ತು ಋಷಿ ಮುನಿಗಳೆನಿಸಿಕೊಂಡವರು ಅತ್ಯಾಚಾರ ಮಾಡಿಯೂ ಬಹಳ ಮಹಿಮರೆನಿಸಿಕೊಂಡಿದ್ದರು. ಎಂಬತ್ತು ವರ್ಷದ ಮುದುಕ ಪರಾಶರ ಮುನಿಯೇ ಹದಿನಾರು ವರ್ಷದ ಬೆಸ್ತ ಹೆಣ್ಣು ಸತ್ಯವತಿಯನ್ನು ರೇಪ್ ಮಾಡಿ ವೇದವ್ಯಾಸನನ್ನು ಹುಟ್ಟಿಸಿದನು. ಅದೇ ವೇದವ್ಯಾಸ ತನ್ನ ತಮ್ಮನ ಹೆಂಡತಿಯರಾದ ಅಂಬಿಕೆ ಮತ್ತು ಅಂಬಾಲಿಕೆ ಇಬ್ಬರನ್ನೂ ರೇಪ್ ಮಾಡಿ ಧೃತರಾಷ್ಟ್ರ ಮತ್ತು ಪಾಂಡುವನ್ನು ಹುಟ್ಟಿಸಿದನು.

ಆದರೂ ಈ ಋಷಿಮುನಿಗಳ ಪಾವಿತ್ರ್ಯತೆಗೆ ಭಂಗ ಬರಲೇ ಇಲ್ಲ. ದೇವರಾದ ಬ್ರಹ್ಮನು ತನ್ನ ಮಗಳಾದ ಶತರೂಪಿಯನ್ನೇ ಮೋಹಿಸಿ ಅವಳನ್ನೇ ನೋಡುತ್ತಿರಲು ಐದು ತಲೆ ಸೃಷ್ಟಿಸಿಕೊಂಡನು. ಶಿವನ ಮದುವೆಗೆ ಅತಿಥಿಯಾಗಿ ಹೋದ ಅದೇ ಬ್ರಹ್ಮ ಪಾರ್ವತಿಯನ್ನು ನೋಡಿ ಕಾಮವಶನಾಗಿ ನಿಂತಲ್ಲಿಯೇ ವೀರ್ಯಪಾತ ಮಾಡಿಕೊಂಡನು. ತನ್ನ ಹೆಂಡತಿಯನ್ನು ಕಾಮುಕ ದೃಷ್ಟಿಯಿಂದ ನೋಡಿದ್ದಕ್ಕಾಗಿ ಶಿವನು ಬ್ರಹ್ಮನ ಒಂದು ತಲೆಯನ್ನೇ ಕಡಿದನು. ಆದರೂ ಅವನು ದೇವರಾಗಿಯೇ ಮುಂದುವರಿದನು. ಭಸ್ಮಾಸುರ ಮೋಹಿನಿ ಕತೆಯಲ್ಲಿ ಎರಡು ದೇವರುಗಳು ಅನೈತಿಕವಾಗಿ ಸಂಭೋಗಿಸಿದರೂ ಅವರ



ಶೀಲ-ಪಾವಿತ್ರ್ಯ ಮಾತ್ರ ಹಾಳಾಗುವುದೇ ಇಲ್ಲ. ಹೀಗೆ ದೇವರಿಗೆ-ಋಷಿಮುನಿಗಳಿಗೆ-ಸ್ವಾಮೀಜಿಗಳಿಗೆ ಒಂದು ನ್ಯಾಯವಾದರೆ ಜನಸಾಮಾನ್ಯರಿಗೆ ಇನ್ನೊಂದು ನ್ಯಾಯ. ಇಂತಹಾ ವೈಚಿತ್ರ್ಯ ಕೇವಲ ಭಾರತದಲ್ಲಿ ಮಾತ್ರ ಸಾಧ್ಯ.

ಆರ್‌ಎಸ್‌ಎಸ್‌ನಲ್ಲಿ ಮನು ಭಾಗವತನ ನಂತರ ಎರಡನೇ ಪ್ರಭಾವಿ ಸ್ಥಾನದಲ್ಲಿರುವ ದತ್ತಾತ್ರೇಯ ಹೊಸಬಾಳೆ ಹಾಗೂ ಯೂಪಿ ರಾಜ್ಯದ ಗವರ್ನರ್ ರಾಮಾ ಜೋಯಿಸ್. ಇವರಿಬ್ಬರೂ ಹವ್ಯಕರು. ಇಂತಹ ಎರಡು ಪ್ರಭಾವಿ ಹವ್ಯಕರು ಈ ಪ್ರಕರಣದಲ್ಲಿ ಆಸಕ್ತಿ ವಹಿಸಿ ಸತ್ಯ ಹೊರಬಾರದಂತೆ ನೋಡಿಕೊಂಡಿದ್ದರಿಂದ ಗೋಸ್ವಾಮಿ ಖುಲಾಸೆಗೊಂಡಿದ್ದು ಎಂಬ ಸುದ್ದಿಯಿದೆ.

ನಿಜವಾಗಿ ಹಾವೇರಿಯ ಮಲೆಯಾಳಿ ಸ್ವಾಮಿ ಪ್ರಣವಾನಂದ ಹಾಗೂ ಗುರುಪುರದ ಬಂಟ ವಜ್ರದೇಹಿ ಸ್ವಾಮಿಯಂತೆ ರಾಘವೇಶ್ವರ ಸ್ವಾಮಿಯೂ ಸಂಘ ಪರಿವಾರ ಪ್ರತಿಷ್ಠಾಪಿಸಿದ ಒಬ್ಬ ಕಾವಿ ವೇಷಧಾರಿ ಅಷ್ಟೇ. ಹಿಂದುಳಿದ ವರ್ಗದ ಜಾತಿಪದ್ಧತಿಯನ್ನು ರಕ್ಷಿಸಿ ಮುಂದುವರಿಸಿ ಆ ಹಿಂದುಳಿದ ಜಾತಿಗಳವರು ವೈದಿಕ ಧರ್ಮದಿಂದ ದೂರ ಸರಿಯದಂತೆ ನೋಡಿಕೊಳ್ಳಲು ಎಲ್ಲಾ ಹಿಂದುಳಿದ ಜಾತಿಗಳಲ್ಲಿ ಒಂದೆರಡು ಆಷಾಢಭೂತಿಗಳಿಗೆ ಕಾವಿ ಉಡಿಸಿ ಸಂಘ ಪರಿವಾರದವರು ಎಲ್ಲೆಡೆ ಸ್ವಾಮೀಜಿಯೆಂದು ಪ್ರತಿಷ್ಠಾಪಿಸಿದ್ದಾರೆ.

ರಾಘವೇಶ್ವರನ ಪರ ನ್ಯಾಯಾಲಯ ತೀರ್ಪು ನೀಡುತ್ತಿದ್ದಂತೆ ಬೆಂಗಳೂರಿನ ಗಿರಿನಗರ ಮಠ, ಶಿವಮೊಗ್ಗದ ಮಠ ಹಾಗೂ ಕಲ್ಲಡ್ಕದ ಪೆರಾಜೆ ಮಠದ ಮುಂದೆ ನೆರೆದಿದ್ದ ಸಾವಿರಾರು ಹವ್ಯಕ ಗಂಡಸರು ಮಾತ್ರ ಸಂಭ್ರಮಾಚ... ಮಾಡಿದ್ದಾರೆ. ಯಾಕೆಂದರೆ ಈ ಗಂಡು ಭಕ್ತರ ಮನೆಯ ಹೆಂಗಸರೂ ... ಸ್ವಾಮಿಯೊಂದಿಗೆ ಏಕಾಂತ ಪೂಜೆ ಮಾಡಿರುವುದರಿಂದ ತಮ್ಮ ಮನೆ... ಹೆಂಗಸರ ಹುಳುಕು ಹೊರಬರುವ ಬಗ್ಗೆ ಇವರಿಗೆಲ್ಲಾ ಆತಂಕವಿ... ಪ್ರೇಮಲತಾರಷ್ಟು ಧೈರ್ಯವಂತರಲ್ಲದ ಇತರ ಸಂತ್ರಸ್ತ ಹೆಂಗಸರು ತಮ್ಮ... ಕುಟುಂಬದ ಗಂಡಸರ ಬೆಂಬಲ ಸಿಗದೇ ಸಮಾಜಕ್ಕೆ ಹೆದರಿ ಎಲ್ಲವ... ಮೌನವಾಗಿ ಸಹಿಸುತ್ತಿದ್ದಾರೆ ಎನ್ನಲಾಗಿದೆ. ಆದರೆ ಈಗ ಗೋಸ್ವಾಮಿಪರ ತೀರ್ಪು ಬಂದಿದ್ದರಿಂದ ಇಂತಹ ಸಂತ್ರಸ್ತೆಯರ ಮನೆಯ ಗಂಡಸರು ಖುಷಿಯಿ... ಸಿಹಿ ಹಂಚಿ ಪಟಾಕಿ ಸುಟ್ಟು ಸಂಭ್ರಮಿಸಿದರಂತೆ. ಕಾರಣ ಇನ್ನು ಅ... ಮನೆಯ ಮಹಿಳೆಯರ ಶೀಲದ ಬಗ್ಗೆ ಜನರು ಸಂಶಯ ವ್ಯಕ್ತ ಮಾಡುವುದಿ... ಎಂಬ ಧೈರ್ಯ ಈ ಹವ್ಯಕ ಗಂಡಸರಲ್ಲಿ ಮೂಡಿದೆ.

ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವೆಂದರೆ ರಾಘವೇಶ್ವರರ ವಿರು... ಅತ್ಯಾಚಾರದ ಆರೋಪ ಹೊರಿಸಿ ನ್ಯಾಯಾಲಯದ ಮೆಟ್ಟಲೇರಿರುವು... ಪ್ರೇಮಲತಾ ಒಬ್ಬರೆ ಅಲ್ಲ, ಹದಿನೆಂಟರ ಎಳೆ ವಯಸ್ಸಿನ ಓರ್ವ ತರು... ಕೂಡಾ ಇದೇ ಸ್ವಾಮಿಯ ವಿರುದ್ಧ ಅತ್ಯಾಚಾರದ ದೂರು ದಾಖಲಿಸಿರುವುದ... ನೆನಪಿನಲ್ಲಿಡಬೇಕು. ಇದಲ್ಲದೆ ಇನ್ನೂ ಹಲವು ವಿವಾಹಿತ ಮತ್ತು ವಿ... ಮಹಿಳೆಯರ ಜೊತೆ ಹಾಗೂ ಮಠದ ಹಾಸ್ಟೆಲ್ ಹುಡುಗಿಯರ ಜತೆ ಅಕ್ರ... ಸಂಬಂಧದ ಆರೋಪ ಹೊತ್ತಿರುವ ರಾಘವೇಶ್ವರ ಸ್ವಾಮಿಯ ಅಂತರಂಗ... ಭಕ್ತರು ಸೆಷನ್ಸ್ ನ್ಯಾಯಾಲಯದ ಈ ತೀರ್ಪಿನಿಂದ ನಿರಾಳವಾಗುವ ಅಗತ್ಯ... ಕಾರಣ ಕೆಲವು ಸಂತ್ರಸ್ತರು ಮೇಲಿನ ಕೋರ್ಟಿಗೆ ಅಪೀಲ್ ಹೋಗಲಿದ್ದಾರ...

ಈಗ ಗೋಸ್ವಾಮಿ ಖುಲಾಸೆಗೊಂಡಾಗ ಅನೇಕ ವೈದಿಕ ಕಾವಿಧಾರಿಗಳು ಯ... ಅಷ್ಟೊಂದು ಖುಷಿಯಾಗಿದ್ದು ಗೊತ್ತೇ? ಒಂದು ವೇಳೆ ಗೋಸ್ವಾಮಿಗೆ ಕೋರ್ಟ... ಶಿಕ್ಷೆಯಾಗಿದ್ದರೆ ಇನ್ನೂ ಅನೇಕ ಕಾವಿಧಾರಿಗಳ ಇಂತಹದ್ದೇ ಹುಳುಕು ಹೊರಬರು... ಸಾಧ್ಯತೆ ಇತ್ತು ಕಾರಣ ಇಂತಹ ಅನೇಕ ಸಂತ್ರಸ್ತೆಯರು ಪ್ರೇಮಲತಾರ ಉದಾಹರಣೆಯಿ... ಸ್ಫೂರ್ತಿಗೊಂಡು ಧೈರ್ಯವಹಿಸಿ ಪೊಲೀಸರಲ್ಲಿ ದೂರು ದಾಖಲಿಸುವ ಸಾ... ಇತ್ತು. ಆದರೆ ಈಗ ಗೋಸ್ವಾಮಿಯ ಪರ ತೀರ್ಪು ಬಂದಿದ್ದರಿಂದ ಇನ್ನು ... ಸಂತ್ರಸ್ತೆಯರು ಧೈರ್ಯವಹಿಸಿ ಪೊಲೀಸರಿಗೆ ದೂರು ಕೊಡುವ ಸಾ... ಕಡಿಮೆಯಾಗಿರುವುದು ಗೋಸ್ವಾಮಿಯಂತಹ ಇತರ ಕಾವಿ-ಕಾಚ ಹರುಕ ಸ್ವಾಮೀಜಿಗ... ಈಗ ನಿರಾಳವೆನಿಸಿದೆ. ಏನೇ ಆಗಲಿ ಹೀಗೊಂದು ಹಳೆಯ ಗಾದೆ ಇದೆ - ಎ... ಮನೆಯ ದೋಸೆ ತೂತು, ಎಲ್ಲಾ ಜಾತಿಯ ಸ್ವಾಮಿಗಳ ಮಠದ ಚಿಲಕವಿ... ಹಿಂಬಾಗಿಲು ತೂತು.

- ಕೆ.ಕೆ.ಹೆಗ್ಡೆ, ಬೆಳಗಾ...



ತಿಯಿಲ್ಲದ ಬಡ ಹಿನ್ನೆಲೆಯವರಲ್ಲದ ಪ್ರೇಮಲತಾರ ತ್ಯಾಚಾರ ಪ್ರಕರಣದ ಕೇಸು ಅನೇಕರ ನಿರೀಕ್ಷೆಯಂತೆ ದೇವತಾ ಮಾನವ"ನನ್ನು ರಕ್ಷಿಸುವ ಸಲುವಾಗಿ ಉದ್ದೇಶ ಪೂರ್ವಕವಾಗಿ ಹಳ್ಳ ಹಿಡಿಸಲಾಯಿತು. (ಈ ಹಿಂದೆ ಹೊಸನಗರದಲ್ಲೇ ವಾಸ್ತವ್ಯ ಇದ್ದ ರಾಘವೇಶ್ವರ ಸ್ವಾಮಿಗೆ ಪ್ತರೂ ಆಗಿರುವ ಈಗಿನ ನ್ಯಾಯಾಧೀಶರು ಬೇಡ ಎಂಬ ದೂರುದಾರಳ ನಿವೇದನೆಗೂ ಮನ್ನಣೆ ನೀಡದೆ ಏಕಪಕ್ಷೀಯವಾಗಿ ನಡೆದುಕೊಳ್ಳಲಾಯಿತು.) ಇನ್ನು ಯಾವ ಹಿನ್ನೆಲೆಯೂ ಇರದ ಬಡಪಾಯಿಗಳ ಗತಿಯನ್ನು ಇಂತಹ ಪ್ರಕರಣಕ್ಕೆ ಸಂಬಂಧಿಸಿಕೊಂಡು ನೋಡಿದರೆ ನಾಡಿನ ನ್ಯಾಯ ವ್ಯವಸ್ಥೆಯ ಕುರಿತು ಯಾರಿಗಾದರೂ ತಾತ್ಸಾರ ಭಾವನೆ ಮೂಡದೇ ಇರದು.

ಮೌಢ್ಯವನ್ನು ವಿರೋಧಿಸಿ ಹತ್ಯೆಗೀಡಾದ ಕಲ್ಬುರ್ಗಿಯವರಿಗೆ ನ್ಯಾಯ ಸಿಗಲಿಲ್ಲ, ದೇವಮಾನವನೆಂಬ ಒಂದೇ ಕಾರಣಕ್ಕೆ ರಾಘವೇಶ್ವರ ಸ್ವಾಮಿಯ ವಿರುದ್ಧ ತೀರ್ಮಾನ ತೆಗೆದುಕೊಳ್ಳಲಾಗದೇ ಮೂವರು ನ್ಯಾಯಾಧೀಶರೇ ಜಾರಿಕೊಂಡಂತಹ "ಹೆಚ್ಚುಗಾರಿಕೆ"ಯ ಪ್ರಕರಣ ನಡೆಯಿತು. ಕೊನೆಗೂ ನೀಡಲಾದ ತೀರ್ಪಿನಲ್ಲಿ ಆರೋಪಿ ಸ್ವಾಮಿಯನ್ನು ಇನ್ನಿಲ್ಲದಂತೆ ಹೊಗಳಿದರೆ ಮಹಿಳೆಯಾದ ದೂರುದಾರಳನ್ನು ಅಲ್ಲಲ್ಲಿ ಹೀನಾಯವಾಗಿ ನಿಂದಿಸಲಾಗಿರುವುದು ಸಮಾಜದಲ್ಲಿ "ದೇವಮಾನವರು"ಗಳ ಹಿಡಿತ ಎಂಥದೆಂಬುವುದಕ್ಕೆ ಉತ್ತಮ ದರ್ಶನ. ಸಮಾಜವಾದಿಗಳ ರಾಜ್ಯದಲ್ಲಿ ಸಾಮಾನ್ಯನಿಗೊಂದು ರೀತಿ ಸೋ ಕಾಲ್ಡ್ ದೇವಮಾನವರಿಗೊಂದು ರೀತಿ ಎಂಬಂತಿದೆ ಈ "ಐತಿಹಾಸಿಕ" ತೀರ್ಪು.

ಕೊನೆಗೂ ಈ ಸಮಾಜದಲ್ಲಿ ದೇವಮಾನವರದ್ದೇ ಗೆಲುವು, ಧರ್ಮರಕ್ಷಕ ಮುಖವಾಡಧಾರಿಗಳದ್ದೇ ಕೊನೇ ಮಾತು ಎಂಬಂತಾಗಿದೆ. ಇಂತಹವನ್ನೆಲ್ಲ ನೋಡಿದಾಗ ಕೇವಲ ಹೆಸರಿಗಷ್ಟೆ ಕಾಗದದ ಹುಲಿಯಂತಿರುವ ಮೌಢ್ಯ ಪ್ರತಿಬಂಧಕ ಕಾಯಿದೆ ತರುವ ಬದಲು ಸಿದ್ದು ಸರಕಾರ ಅದನ್ನು ತರದಿರುವುದೇ ಲೇಸು.

- ಅವಿನಾಶ್ ಎಮ್.ಎಸ್. ನೆಲ್ಲಿಕಾರ್

ಭಾರತ ಮಾತೆಯ ಜಯಕಾರಕ್ಕಿಂತ ಪ್ರಕೃತಿ ಮಾತೆಯ ಮಮಕಾರ ಮುಖ್ಯ

ಮಾರ್ಚ್ ತಿಂಗಳ ಎರಡನೇ ವಾರದಲ್ಲಿ ದಿಲ್ಲಿಯ ಯಮುನಾ ತೀರದಲ್ಲಿ ವಿಶ್ವ ಸಂಸ್ಕೃತಿ ಉತ್ಸವ ಆರಂಭಕ್ಕೆ ಮುನ್ನ ಅದರ ಆಯೋಜಕ ರವಿಶಂಕರ್ ಗುರೂಜಿ ಐದು ಕೋಟಿ ರೂಪಾಯಿ ದಂಡ ಪಾವತಿಸಬೇಕೆಂದು ಭಾರತದ ರಾಷ್ಟ್ರೀಯ ಹಸಿರು ನ್ಯಾಯಾಲಯ ಎನ್‌ಜಿಟಿ ಆದೇಶಿಸಿತ್ತು. ದರೆ ತನಗೆ ಇಷ್ಟು ದೊಡ್ಡ ದಂಡ ಪಾವತಿಸಲು ಸ್ವಲ್ಪ ಸಮಯಾವಕಾಶ ಕೊಡಬೇಕೆಂದು ರವಿಶಂಕರರ ಸಂಘಟನೆ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣಕ್ಕೆ ಮಾರ್ಚ್ 10 ರಂದು ತಿಳಿಸಿತ್ತು, ಈ ರವಿಶಂಕರರಿಗೆ ಕೇಂದ್ರ ಸರಕಾರದ ಕಡೆಯಿಂದ ಸಂಸ್ಕೃತಿ ಸಚಿವಾಲಯ 2.5 ಕೋಟಿ ಮಂಜೂರು ಮಾಡಿತ್ತು, ಜತೆಗೆ ವಿವಿಧ ಸಂಘಸಂಸ್ಥೆ ಹಾಗೂ ಖಾಸಗಿ ಕಂಪನಿಗಳಿಂದ ಕೋಟ್ಯಾಂತರ ರೂಪಾಯಿ ಈ ರವಿಶಂಕರ ಪ್ರತಿಷ್ಠಾನ ಸಂಗ್ರಹಿಸಿತ್ತು ಎಂದು ಪತ್ರಿಕೆಗಳು ವರದಿ ಮಾಡಿದ್ದವು. ಪ್ರಚಾರ ಮಾಡಿದ್ದು 35 ಲಕ್ಷ ಜನರು ಬರುತ್ತಾರೆ ಎಂದು. ಆದರೆ ಕೊನೆಗೆ ಭಾರಿ ಮಳೆಯ ಕಾರಣ ನಿಜವಾಗಿ ಬಂದಿದ್ದು ಕೇವಲ ಒಂದೂವರೆ ಲಕ್ಷ ಜನರು ಮಾತ್ರ. ಇದರಲ್ಲಿ ಕಲಾಕಾರರು ಮತ್ತು ಕೆಲಸಗಾರರೇ 5 ಸಾವಿರ ಇದ್ದರು. ಹಾಗಾಗಿ ಕಾಂಗ್ರೆಸ್ಸಿನ ಸುರೇಶ್ ಕಲ್ಮಾಡಿಯವರ ಗ್ಯಾಂಗ್ ಏಷಿಯಾಡ್‌ನಲ್ಲಿ ಮುಕ್ಕಿದಂತೆ ಇಲ್ಲಿ ಎಷ್ಟು ಜನರು ಮುಕ್ಕಿದ್ದಾರೋ?

ಹೋಮಹವನ ಯಜ್ಞದ ನೆಪದಲ್ಲಿ ವೈದಿಕರಿಂದ ಈ ರೀತಿ ಪರಿಸರ ನಾಶ ಪುರಾಣಕಾಲದಿಂದಲೂ ಆಗುತ್ತಿದೆ. ಈ ಜಗತ್ತಿನ ಮೊಟ್ಟಮೊದಲ ಪರಿಸರ ನಾಶಕ ಹಾಗೂ ಪ್ರಕೃತಿಯ ವೈರಿ ಯಾರೆಂದರೆ ಅದು ವಿಷ್ಣುವಿನ ಆರನೇ ಅವತಾರ ಭಾರ್ಗವ ಪರಶುರಾಮ. ಅವನು ಕೊಡಲಿ ಬೀಸಿ ಸಮುದ್ರದಿಂದ ಭೂಮಿ ಮೇಲೆತ್ತಿದ ಎಂದರೆ- ಕರಾವಳಿಯ ಅರಣ್ಯ ಕಡಿದು ಕೃಷಿಗೆ ಭೂಮಿ ತಯಾರು ಮಾಡಿದ ಎಂದರ್ಥ. ಅವನು ಎಲ್ಲಾ ಕ್ಷತ್ರಿಯರನ್ನು ಕೊಂದ ಎಂದರೆ- ಅರಣ್ಯ ನಾಶ ವಿರೋಧಿಸಿದ ಇಲ್ಲಿಯ ಬುಡಕಟ್ಟು ಜನರನ್ನೆಲ್ಲಾ ಕೊಂದ ಎಂದರ್ಥ. ಅವನು ತಾಯಿ ರೇಣುಕೆಯ ತಲೆ ಕಡಿದ ಎಂದರೆ- ಇಲ್ಲಿಯ ಮಾತೃ ಸಂಸ್ಕೃತಿಯನ್ನು ನಾಶ ಮಾಡಿದ ಎಂದರ್ಥ. ಅವನು ರೇಣುಕೆಯನ್ನು ಮತ್ತೆ ಜೀವಗೊಳಿಸಿದ ಎಂದರೆ ಆರ್ಯರೂ ಮಾತೃ ಸಂಸ್ಕೃತಿಯನ್ನು ಭಾಗಶ ಸ್ವೀಕರಿಸಿದರು ಎಂದರ್ಥ. ಅವನು ಇಲ್ಲಿಯ ನೆಲವನ್ನೆಲ್ಲಾ ಬ್ರಾಹ್ಮಣರಿಗೆ ದಾನ ಮಾಡಿದ ಎಂದರೆ- ವೈದಿಕ ಆರ್ಯರನ್ನು ಇಲ್ಲಿ ತಂದು ಅರಣ್ಯ ಕಡಿದು ನೆಲೆಗೊಳಿಸಿದ ಎಂದರ್ಥ. ಪರಶುರಾಮ ಕಲಿಸಿದ ಈ ಅನರ್ಥಕಾರಿ ಬದುಕುವ ಕಲೆ- ಅಂದರೆ ದೇವರು ಧರ್ಮ ಸಂಸ್ಕೃತಿ ಪರಂಪರೆಯ ಹೆಸರಲ್ಲಿ ಪರಿಸರ ನಾಶ ಮಾಡಿ ತಮ್ಮ ಸ್ವಾರ್ಥ ಸಾಧಿಸುವ ಕಲೆಯನ್ನು ಈಗಿನ ವೈದಿಕರೂ ಅನುಸರಿಸುತ್ತಿದ್ದಾರೆ.

ಈ ರವಿಶಂಕರ ಗುರು ಸಂಘ ಪರಿವಾರದ ಸದಸ್ಯನಾದುದರಿಂದ ಅವನ ಬದುಕುವ ಕಲೆ ಎಂದರೆ- ನಕಲಿ ರಾಷ್ಟ್ರಭಕ್ತಿ ತೋರಿಸಿ ಕೇವಲ ವೈದಿಕ ಸಂಸ್ಕೃತಿಯನ್ನು ಭಾರತದ ಮೂಲ ಪರಂಪರೆ ಎಂದು ತಪ್ಪಾಗಿ ಬಿಂಬಿಸಿ ತಾನು ನೋಬಲ್ ಪ್ರಶಸ್ತಿಯ ಕ್ಯಾಂಡಿಡೇಟ್ ಆಗಲು ಪ್ರಯತ್ನಿಸುವುದು. ಇಂತಹ ಪ್ರಕೃತಿಯ ವಿರೋಧಿಗೂ ನೋಬಲ್ ಪ್ರಶಸ್ತಿಯೇ? ಸ್ವತಃ ಪ್ರಕೃತಿಯೇ ಈ ಸಾಂಸ್ಕೃತಿಕ ಜಾತ್ರೆಯನ್ನು ಅನುಮೋದಿಸಿಲ್ಲ ಎನ್ನುವುದಕ್ಕೆ ಸಾಕ್ಷಿ- ಮೊದಲಿನ ಎರಡು ದಿನವೂ ಭಾರಿ ಮಳೆ ಬಂದು ಉತ್ಸವವೆಲ್ಲಾ ಕೆಸರುಮಯವಾಗಿ ಜನರೆಲ್ಲಾ ಮನೆಗೆ ಓಡಿದ್ದು. ಪ್ರಕೃತಿತಾಯಿಗೂ ಒಂದು ಸ್ವತಂತ್ರ ಪ್ರಜ್ಞೆ ಇದೆ ಎಂಬುದನ್ನು ಮಾನವರು ಮರೆಯಬಾರದು. ಭಾರತ ಮಾತೆಗೆ ಜೈ ಎನ್ನುವ ಬೊಬ್ಬೆಯಲ್ಲಿ ಪ್ರಕೃತಿ ಮಾತೆಯ ಅಳಲು ಹತ್ತಿಕ್ಕಲಾಗಿತ್ತು, ಅದಕ್ಕಾಗಿಯೇ ಪ್ರಕೃತಿ ಮಾತೆ ಮುನಿದಳು. ಭಾರತ ಮಾತೆಯ ಜಯಕಾರಕ್ಕಿಂತ ಪ್ರಕೃತಿ ಮಾತೆಯ ಮಮಕಾರ ಹೆಚ್ಚು ಮುಖ್ಯ.

ಆ ದಿನ ಪಾಕಿಸ್ತಾನದ ಪ್ರತಿನಿಧಿ ಮಾತನಾಡಿದ ನಂತರ ಈ ರವಿಶಂಕರ್ ಗುರು ಪಾಕಿಸ್ತಾನ್ ಜಿಂದಾಬಾದ್ ಎಂದು ಘೋಷಣೆ ಕೂಗಿದ್ದಾನೆ. ಇದು ಬಿಜೆಪಿ ಮತ್ತು ಸಂಘ ಪರಿವಾರದವರಿಗೆ ಕೋಪ ತರಿಸಲಿಲ್ಲ ಮತ್ತು ಅವರ ಸ್ಯೂಡೋ ರಾಷ್ಟ್ರಪ್ರೇಮ ಬಡಿದೆಬ್ಬಿಸಲಿಲ್ಲದಿರುವುದು ವಿಪರ್ಯಾಸ. ಒಂದು ವೇಳೆ ಇದೇ ಘೋಷಣೆಯನ್ನು ಯಾರಾದರೂ ವಿದ್ಯಾರ್ಥಿ ಸಂಘಟನೆಯ ನೇತಾರ ಕೂಗಿದ್ದರೆ ಆಗ ಸಂಘಿಪಡೆಗಳು ಅದೆಷ್ಟು ಬೀದಿ ನಾಟಕ ಆಡುತ್ತಿದ್ದವೋ ಆ ಭಾರತಮಾತೆಗೇ ಗೊತ್ತು. ಇವರ ಉತ್ಸವ ಉದ್ಘಾಟಿಸುತ್ತಾ ಪ್ರಧಾನಿ ಮೋದಿಯವರು "ಇಡೀ ಜಗತ್ತೇ ಭಾರತದತ್ತ ನೋಡುತ್ತಿದೆ" ಎಂದು ಮತ್ತೊಮ್ಮೆ ಪುಂಗಿ ಊದಿದರು. ಇಂತಹಾ ಧರ್ಮದ ವ್ಯಾಪಾರಿಯ ಅಡಿಗೆ ಇಡೀ ಭಾರತ ಸರಕಾರವೇ ಉರುಳಿರುವುದನ್ನು ಕಂಡು ಇಡೀ ಜಗತ್ತೇ ಭಾರತದತ್ತ ವ್ಯಂಗವಾಗಿ ನೋಡುತ್ತಿದೆ ಎಂದು ಮೋದಿ ಹೇಳಿಕೆಯ ಅರ್ಥವಿರಬಹುದೇ?

ಅದೇನೇ ಇರಲಿ ತೆರಿಗೆದಾರರ ಇಪ್ಪತ್ತೈದು ಕೋಟಿ ರೂಪಾಯಿಯನ್ನು ಕೇಂದ್ರ ಸರಕಾರ ಹಾಗೂ ದಿಲ್ಲಿ ಸರ್ಕಾರ ಈ ಸಂಸ್ಕೃತಿಯ ಪ್ರಹಸನಕ್ಕೆ ಖರ್ಚು ಮಾಡಿ ಪರಿಸರ ನಾಶಕ್ಕೆ ಕಾರಣ ಆಗಿರುವುದರಿಂದ ಪರಿಸರ ನ್ಯಾಯಾಲಯ ವಿಧಿಸಿರುವ ಐದು ಕೋಟಿ ರೂಪಾಯಿ ದಂಡವನ್ನು ಈ ಗುರೂಜಿ ತೆತ್ತಿದ್ದರೋ ಇಲ್ಲವೋ ಎಂದು ತಿಳಿಯುವ ಹಕ್ಕು ಸಾಮಾನ್ಯ ಜನರಿಗೆ ಇದೆ. ಈ ರವಿಶಂಕರ ಗುರು ಬಾಬಾ ರಾಮದೇವನಂತೆ ತನ್ನದೇ "ಶ್ರೀ ಶ್ರೀ ಆಯುರ್ವೇದ" ಎಂಬ ಬ್ರಾಂಡಿನ ಆಯುರ್ವೇದ ಉತ್ಪನ್ನಗಳನ್ನು ಹಾಗೂ ಅತ್ಯಂತ ಲಾಭದಾಯಕ ಮಹಿಳೆಯರ ಸೌಂದರ್ಯ ಪ್ರಸಾಧನ, ಆರೋಗ್ಯ ಪೇಯ (ಓಜಸ್-ವಿಟಾ), ಮತ್ತು ಹಸಿರು ಚಹಾ ಮಾರುಕಟ್ಟೆಗೆ ತಂದಿದ್ದು ಸರಕಾರದ ವೆಚ್ಚದಲ್ಲಿ ಅದರ ಬೃಹತ್ ಪ್ರಚಾರಕ್ಕೆ ಆ ದಿಲ್ಲಿಯ ಸಾಂಸ್ಕೃತಿಕ ಜಾತ್ರೆ ಆಯೋಜಿಸಿದ್ದು ಎಂಬ ವಿಷಯ ಈಗ ಬಹಿರಂಗಗೊಂಡಿದೆ. ಮೊದಲ ವರ್ಷವೇ ರೂ. 500 ಕೋಟಿಯ ವಹಿವಾಟಿನ ಗುರಿ ಶ್ರೀ ಶ್ರೀ ಗುರು ಹೊಂದಿದ್ದು ಮುಂದಿನ ಐದು ವರ್ಷಗಳಲ್ಲಿ ಬಾಬಾ ರಾಮದೇವನ ಪತಂಜಲಿಯನ್ನು ಹಿಂದಿಕ್ಕುವ ಗುರಿಯಿದೆಯಂತೆ. ಇಂತಹ ವಾಣಿಜ್ಯ ಉದ್ದೇಶದ ಸಾಂಸ್ಕೃತಿಕ ಜಾತ್ರೆಗೆ ಸರಕಾರದ ರೂ.25 ಕೋಟಿ ಖರ್ಚು ಮಾಡಿದ್ದು ಮತ್ತು ಯಮುನಾ ತೀರದಲ್ಲಿ ಪರಿಸರ ನಾಶಕ್ಕೆ ಅನುಮತಿ ಕೊಟ್ಟದ್ದು ಮೋದಿ ಸರ್ಕಾರ ಕೇವಲ ಲಾಭಕೋರ ವ್ಯಾಪಾರಿಗಳ ಕೈಗೊಂಬೆ ಆಗಿದೆ ಎನ್ನುವುದಕ್ಕೆ ಇನ್ನೊಂದು ಪುರಾವೆ.

- ರಾಮಕೃಷ್ಣ ಹುಲುಲ್, ಬೆಂಗಳೂರು

ವಿ.ಸೂ. : ನಿಮ್ಮ ಅನಿಸಿಕೆಗಳನ್ನು
lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಸ್ಪಷ್ಟವಾಗಿ ಮತ್ತು ಚೊಕ್ಕವಾಗಿ SMS ಕಳುಹಿಸಬಹುದು.



ಶ್ರುತಿ ಹರಿಹರನ್ ಸದ್ಯ 'ಬ್ಯುಟಿಫುಲ್ ಮನಸುಗಳು' ಸಿನಿಮಾದಲ್ಲಿ ನಟಿಸುತ್ತಿದ್ದಾರೆ. ಅಲ್ಲದೇ, ಇವರ ನಟನೆಯ 'ಗೋಧಿ ಬಣ್ಣ ಸಾಧಾರಣ ಮೈಕಟ್ಟು' ಚಿತ್ರವು ಇನ್ನಷ್ಟೇ ಬಿಡುಗಡೆ ಆಗಬೇಕು. ಜತೆಗೆ ಕಿರುತೆರೆಯಲ್ಲೂ ಬಿಜಿ ಆಗಿರುವ ಇವರು, ಆ ಎಲ್ಲಾ ಅನುಭವಗಳನ್ನು ಇಲ್ಲಿ ಹಂಚಿಕೊಂಡಿದ್ದಾರೆ.

ಬ್ಯುಟಿಫುಲ್ ಮನಸಿನ ಹುಡುಗಿಯ ಮನದಾಳ



ಸತೀಶ್ ನೀನಾಸಂ ನಟನೆಯ 'ಲೂಸಿಯಾ' ಸಿನಿಮಾದ ಮೂಲಕ ಸ್ಯಾಂಡಲ್‌ವುಡ್‌ಗೆ ಪರಿಚಯ ಆದವರು ಶ್ರುತಿ ಹರಿಹರನ್. ಆನಂತರ ಅವರು ಹಲವು ಚಿತ್ರಗಳಲ್ಲಿ ನಟಿಸಿದರು. ಮೊನ್ನೆಯಷ್ಟೇ ಇವರ ನಟನೆಯ 'ಜೈ ಮಾರುತಿ 800' ಚಿತ್ರ ರಿಲೀಸ್ ಆಗಿದೆ. ಬಾಕ್ಸ್ ಆಫೀಸ್‌ನಲ್ಲಿ ತಕ್ಕ ಮಟ್ಟಿಗೆ ಗೆಲುವನ್ನೂ ಸಾಧಿಸಿದೆ. ಅಲ್ಲದೇ ಇನ್ನೂ ಮೂರು ಚಿತ್ರದಲ್ಲಿ ಇವರು ನಟಿಸಿದ್ದಾರೆ. ಸದ್ಯ 'ಬ್ಯುಟಿಫುಲ್ ಮನಸುಗಳು' ಮತ್ತು 'ಗೋಧಿ ಬಣ್ಣ ಸಾಧಾರಣ ಮೈಕಟ್ಟು' ಚಿತ್ರಗಳ ಪಾತ್ರದ ಬಗ್ಗೆ ಮಾತಾಡಿದ್ದಾರೆ.

** ಸತೀಶ್ ಜತೆ ಮತ್ತೊಮ್ಮೆ ತೆರೆ ಹಂಚಿಕೊಳ್ಳುತ್ತಿದ್ದೀರಿ. ಆ ಅನುಭವ ಹೇಗಿದೆ?*

ನಾವಿಬ್ಬರೂ 'ಲೂಸಿಯಾ' ಸಿನಿಮಾದಲ್ಲಿ ಒಂದಾಗಿದ್ದೆವು. ಆಗ ನನಗೆ ಕನ್ನಡ ಸಿನಿಮಾ ರಂಗ ಹೊಸದು. ಪಾತ್ರ ಮತ್ತು ತಂಡ ಇಷ್ಟ ಆಗಿದ್ದಕ್ಕೆ ಒಪ್ಪಿಕೊಂಡೆ. ಆನಂತರ 'ಲೂಸಿಯಾ' ಇತಿಹಾಸ ಸೃಷ್ಟಿ ಮಾಡಿತು. ನನಗೆ ಮತ್ತು ಸತೀಶ್ ಅವರಿಗಷ್ಟೇ ಅಲ್ಲ, ಇಡೀ ತಂಡಕ್ಕೆ ಹೆಸರು ತಂದಿತು. ಈಗ ಮತ್ತೆ 'ಬ್ಯುಟಿಫುಲ್ ಮನಸುಗಳು' ಸಿನಿಮಾದಲ್ಲಿ ಸತೀಶ್ ಜತೆ ನಟಿಸುತ್ತಿದ್ದೇನೆ. ನಿರ್ದೇಶಕರೂ ಪ್ರತಿಭಾವಂತರು. ಹೀಗಾಗಿ ಮತ್ತೊಂದು 'ಲೂಸಿಯಾ' ಬಗ್ಗೆ ಕನಸು ಕಾಣುತ್ತಿದ್ದೇನೆ.

** 'ಬ್ಯುಟಿಫುಲ್ ಮನಸುಗಳು' ಸಿನಿಮಾದಲ್ಲಿ ನಿಮ್ಮ ಪಾತ್ರ ಎಂಥದ್ದು?*

ಅದೊಂದು ವಿಭಿನ್ನ ಪಾತ್ರ. ಮಧ್ಯಮ ವರ್ಗದ ಹುಡುಗಿಯಾಗಿ ಕಾಣಿಸಿಕೊಂಡಿದ್ದೇನೆ. ಅವಳಿಗೊಂದು ಹಿನ್ನೆಲೆ ಇದೆ. ಅವಳು ಮಾಡುವ ವೃತ್ತಿಯಿಂದಾಗಿ ಸಮಸ್ಯೆಗೆ ಸಿಲುಕಿಕೊಳ್ಳುತ್ತಾಳೆ. ಅದರಿಂದ ಅವಳು ಪಾರಾಗುವುದು ಹೇಗೆ? ಅನ್ನುವ ಸುಂದರ ಕತೆ ಪಾತ್ರಕ್ಕಿದೆ. ಉಳಿದಂತೆ ಸಿನಿಮಾದಲ್ಲೇ ನೋಡಿದರೆ ಚೆಂದ.

** 'ಗೋಧಿ ಬಣ್ಣ ಸಾಧಾರಣ ಮೈಕಟ್ಟು' ಚಿತ್ರ ತನ್ನದೇ ಆದ ಕಾರಣದಿಂದಾಗಿ ಕುತೂಹಲ ಮೂಡಿಸಿದೆ. ಆ ಸಿನಿಮಾದ ಬಗ್ಗೆ ಹೇಳಿ.*

ಇಲ್ಲಿ ನಾನು ರಕ್ಷಿತ್ ಶೆಟ್ಟಿಯ ಜತೆಯಾಗಿ ನಟಿಸಿದ್ದೇನೆ. ಇದೊಂದು ಮಿಸ್ಸಿಂಗ್ ಸ್ಟೋರಿ, ಹೀಗಾಗಿ ರೋಮ್ಯಾನ್ಸ್ ರೀತಿಯ ದೃಶ್ಯಗಳು ಕಂಡುಬರುವುದಿಲ್ಲ, ವ್ಯಕ್ತಿಯ ಹುಡುಕಾಟದಲ್ಲಿ ನಾನು ನಾಯಕನಿಗೆ ಸಾಥ್ ನೀಡುತ್ತೇನೆ.

** ಈ ಚಿತ್ರದಲ್ಲಿ ಅನಂತ್ ನಾಗ್ ನಟಿಸುತ್ತಿದ್ದಾರೆ ಅಂದಾಗ ಏನನಿಸಿತು?*

ನಿಜ ಹೇಳುತ್ತೇನೆ. ನಿರ್ದೇಶಕ ಹೇಮಂತ್ ಅವರು ನನ್ನ ಹತ್ತಿರ ಬಂದು ಕತೆ ಹೇಳಿದರು. ನನ್ನ ಪಾತ್ರದ ಬಗ್ಗೆ ವಿವರಿಸಿದರು. ಖುಷಿ ಆಯಿತು. ನನ್ನ ಪಾತ್ರ ಚೆನ್ನಾಗಿದ್ದರಿಂದ ಒಪ್ಪಿಕೊಂಡೆ. ಆಗಲೂ ನಾನು ಯಾರು ಹೀರೋ ಅಂತ ಕೇಳಿರಲಿಲ್ಲ, ನಾನು ಸಿನಿಮಾವನ್ನು ಒಪ್ಪಿಕೊಂಡ ನಂತರ ಈ ಚಿತ್ರದಲ್ಲಿ ಅನಂತ್ ನಾಗ್ ಸಾರ್ ಮತ್ತು ರಕ್ಷಿತ್ ಶೆಟ್ಟಿ ಇರುತ್ತಾರೆ ಅನ್ನುವುದು ಗೊತ್ತಾಗಿದ್ದು. ಅವರಿಬ್ಬರ ಹೆಸರು ಕೇಳಿದ ಮೇಲಂತೂ ಯಾವ ಕಾರಣಕ್ಕೂ ಈ ಪಾತ್ರ ಬಿಡಬಾರದು ಅಂತ ಅನಿಸಿತು.

** 'ಗೋಧಿ ಬಣ್ಣದಲ್ಲಿ' ನಿಮ್ಮದು ಯಾವ ರೀತಿಯ ಪಾತ್ರ?*

ನಾನಿಲ್ಲಿ ಡಾಕ್ಟರ್. ಹೆಸರು ಸಹನಾ. ದಿಮೆನ್ಷಿಯಾ ರೋಗಿಗಳನ್ನು ಮತ್ತು ವಯಸ್ಸಾದವರನ್ನು ನೋಡಿಕೊಳ್ಳುವ ವಾರ್ಡ್‌ನಲ್ಲಿ ನನ್ನ ಕೆಲಸ. ವೈಯಕ್ತಿಕ ಜೀವನದಲ್ಲಿ ತುಂಬಾ ನೊಂದಿರುವ ಮತ್ತು ವೃತ್ತಿಜೀವನದಲ್ಲಿ ಏನಾದರೂ ಸಾಧಿಸಿ ಆ ನೋವನ್ನು ಮರೆಯುವ ಅದೆಷ್ಟೋ ಮಹಿಳೆಯರು ನಮ್ಮ ಮಧ್ಯೆ ಇದ್ದಾರೆ. ಅಂತಹ ಮಹಿಳೆಯರ ಪ್ರತಿನಿಧಿಯಾಗಿ ನನ್ನ ಕ್ಯಾರೆಕ್ಟರ್ ಇದೆ.

** ಸಿನಿಮಾದ ಜತೆ ಜತೆಗೆ ನೀವು ಕಿರುತೆರೆಯಲ್ಲೂ ಕೆಲಸ ಮಾಡುತ್ತಿದ್ದೀರಿ. ಆ ಅನುಭವ ಹೇಗಿದೆ?*

ನನಗೆ ಡಾನ್ಸ್ ಅಂದರೆ ತುಂಬಾ ಪ್ರೀತಿ. ಹೀಗಾಗಿ ಡಾನ್ಸ್ ಮೇಲಿನ ಪ್ರೀತಿಯೇ ಈ ಷೋನಲ್ಲಿ ಭಾಗವಹಿಸುವಂತೆ ಮಾಡಿದೆ. ಎಲ್ಲರಿಗೂ ಗೊತ್ತಿರುವಂತೆ, ನಾನು ನೃತ್ಯಗಾರ್ತಿ. ಸದ್ಯ ಸಿನಿಮಾದಲ್ಲಿ ಕಳೆದುಹೋಗಿದ್ದೇನೆ. ಎಲ್ಲೋ ಒಂದು ಕಡೆ ನನಗೇ ಈ ನೃತ್ಯದಿಂದ ದೂರವಾಗುತ್ತಿದ್ದೇನೆ ಅನಿಸಿತ್ತು, ಹೀಗಾಗಿ ಕಿರುತೆರೆಗೆ ಹೋದೆ. ನಾನು ಎಲ್ಲೇ ಹೋದರೂ, ನನ್ನತನವನ್ನು ಬಿಟ್ಟು ಕೊಡುವುದಿಲ್ಲ.

** ಈ ವಾರವಷ್ಟೇ 'ಜೈ ಮಾರುತಿ 800' ಚಿತ್ರ ರಿಲೀಸ್ ಆಗಿದೆ. ಪ್ರೇಕ್ಷಕರ ಪ್ರತಿಕ್ರಿಯೆ ಹೇಗಿದೆ?*

ನೋಡುಗರು ತುಂಬಾ ಚೆನ್ನಾಗಿ ಪ್ರತಿಕ್ರಿಯೆ ಕೊಟ್ಟಿದ್ದಾರೆ. ಈ ಚಿತ್ರದಲ್ಲಿ ಇಬ್ಬರು ನಾಯಕಿಯರಿದ್ದರೂ, ಇಬ್ಬರಿಗೂ ಸಮಾನ ರೀತಿಯಲ್ಲೇ ಅವಕಾಶ ಸಿಕ್ಕಿದೆ. ಹೀಗಾಗಿ ನನಗೂ ಖುಷಿ ಆಗಿದೆ. ಶರಣ್ ಅವರ ಜತೆ ಇದೇ ಮೊದಲ ಬಾರಿಗೆ ನಟಿಸಿದ್ದೇನೆ. ಅವರ ಕಾಮಿಡಿಗೆ ನಾನು ಫಿದಾ ಆಗಿದ್ದೆ. ಅವರ ಜತೇ ನಟಿಸಿದ್ದು ಸಂಭ್ರಮವನ್ನು ಇಮ್ಮಡಿಗೊಳಿಸಿದೆ. ■

Registered No.RNP/KA/BGS/2036/2014-16 Posted at :BGPSO, Mysore Road, Bangalore-26 Thursday R B P LANKESH, Kannada Weekly Price Rs. 15/- 27-04-2016 RNI No. KARKAN2

ಸಂತುನಾದ ಯಶ್



ಯಶ್ ನಟನೆಯ ಹೊಸ ಸಿನಿಮಾದ ಬಗ್ಗೆ ಸಾಕಷ್ಟು ಕುತೂಹಲ ಮೂಡಿತ್ತು, ಹೊಸ ಚಿತ್ರಕ್ಕೆ ಅವರು ಏನು ಹೆಸರಿಡುತ್ತಾರೆ ಅನ್ನುವ ಚರ್ಚೆ ಕೂಡ ನಡೆದಿತ್ತು, ಎಲ್ಲಾ ಮಾತಿಗೂ ಯುಗಾದಿಯಂದು ತೆರೆ ಎಳೆದಿದ್ದಾರೆ ನಟಿ ರಾಧಿಕಾ ಪಂಡಿತ್. ಅಂದು ಅಧಿಕೃತವಾಗಿ ತಮ್ಮ ಟ್ವೀಟರ್ ಅಕೌಂಟ್ ತೆರೆದಿರುವ ರಾಧಿಕಾ, ಹೊಸ ಸಿನಿಮಾದ ಹೆಸರನ್ನು ಅನಾವರಣ ಮಾಡಿದ್ದಾರೆ.

ಅಂದಹಾಗೆ ಯಶ್ ನಟನೆಯ ಹೊಸ ಚಿತ್ರಕ್ಕೆ 'ಸಂತು' ಎಂದು ಹೆಸರಿಡಲಾಗಿದೆ. ಸ್ಟ್ರೇಟ್ ಫಾರ್ವರ್ಡ್ ಎಂಬ ಟ್ಯಾಗ್‌ಲೈನ್ ಕೂಡ ಚಿತ್ರಕ್ಕೆ ಕೊಡಲಾಗಿದೆ. ಈ ಸಿನಿಮಾದ ಮೂಲಕ ನಾಲ್ಕನೆಯ ಬಾರಿ ಯಶ್ ಮತ್ತು ರಾಧಿಕಾ ಪಂಡಿತ್ ತೆರೆಹಂಚಿಕೊಳ್ಳುತ್ತಿದ್ದಾರೆ.

ಈ ಸಿನಿಮಾದ ಟೈಟಲ್ ವಿಚಾರವಾಗಿ ಯಶ್ ಈ ಹಿಂದೆ ಗರಂ ಆಗಿದ್ದರು. ತಮಗೆ ಆಗದೇ ಇರೋರು, ಈ ಚಿತ್ರಕ್ಕೆ ನಾನಾ ಶೀರ್ಷಿಕೆ ಇಡುತ್ತಿದ್ದಾರೆಂದು ತಮ್ಮ ನೋವನ್ನು ತೋಡಿಕೊಂಡಿದ್ದರು. ಆದಕ್ಕೆ ಫುಲ್‌ಸ್ಟಾಪ್ ಇಡುವ ನಿಟ್ಟಿನಲ್ಲಿ ಟೈಟಲ್ ಲಾಂಚ್ ಆಗಿದೆ.

'ಸಂತು'ವನ್ನು ಮಹೇಶ್ ರಾವ್ ನಿರ್ದೇಶನ ಮಾಡುತ್ತಿದ್ದಾರೆ. ಇವರ ನಿರ್ದೇಶನದಲ್ಲಿ ಮೂಡಿಬಂದಿರುವ ಬಹುತೇಕ ಚಿತ್ರಗಳು ಬಾಕ್ಸ್ ಆಫೀಸ್‌ನಲ್ಲಿ ಮಲಗಿವೆ. ಯಶ್ ಅವರ ಹಿಂದಿನ 'ಮಾಸ್ಟರ್‌ಪೀಸ್' ಸಿನಿಮಾ ಕೂಡ ಪ್ರೇಕ್ಷಕರನ್ನು ನಿರಾಸೆಗೊಳಿಸಿತ್ತು, ಈ ಸಿನಿಮಾ ಇಬ್ಬರಿಗೂ ಬ್ರೇಕ್ ಕೊಡಬೇಕಿದೆ.

ವಿಜಯಲಕ್ಷ್ಮಿ ಸಿಂಗ್‌ರ ಹೊಸ ಸಾ




ಸಿನಿಮಾ ನಿರ್ಮಾಣ ಮಾಡಿ ಸಾಕಷ್ಟು ಕಳೆದುಕೊಂಡಿರುವ ವಿಜಯಲಕ್ಷ್ಮೀ ಸಿಂಗ್, ಈ ಬಾರಿ ಮತ್ತೊಂದು ಸಾಹಸಕ್ಕೆ ಕೈಹಾಕಿದ್ದಾರೆ. ತಮ್ಮ ಮೂವರು ಪುತ್ರಿಯರನ್ನು ನಾಯಕಿಯರನ್ನಾಗಿಸಿ ಸಿನಿಮಾ ಮಾಡುತ್ತಿದ್ದಾರೆ. ಚಿತ್ರಕ್ಕೆ ವಿಜಯಲಕ್ಷ್ಮಿ ಸಿಂಗ್ ಆಕ್ಷನ್ ಕಟ್ ಹೇಳುತ್ತಿದ್ದರೆ, ಪತಿ ಜೈ ಜಗದೀಶ್ ಹಣ ಹೂಡುತ್ತಿದ್ದಾರೆ. ಚಿತ್ರಕ್ಕೆ 'ಯಾನ' ಎಂದು ಹೆಸರಿಡಲಾಗಿದೆ.

ವಿಜಯಲಕ್ಷ್ಮಿ ಸಿಂಗ್ ಈ ಹಿಂದೆ 'ಸ್ವೀಟಿ' ಸಿನಿಮಾವನ್ನು ನಿರ್ದೇಶನ ಮಾಡಿದ್ದರು. ರಾಧಿಕಾ ಕುಮಾರಸ್ವಾಮಿ ಈ ... ಬರೋಬ್ಬರಿ ಏಳು ಕೋಟಿ ಸುರಿದಿದ್ದರೂ, ಒಂದು ಪೈಸೆ ಕೂಡ ... ಬರಲಿಲ್ಲ, ಆದರೂ, ನಿರ್ದೇಶಕಿ ತಮ್ಮ ಸಾಹಸವನ್ನು ನಿಲ್ಲ... ಬಾರಿ ತಮ್ಮ ಮಕ್ಕಳ ಜತೆ ಅದೃಷ್ಟ ಪರೀಕ್ಷೆಗೆ ಮುಂದ... ಜತೆಗೆ ತಮ್ಮ ಮಕ್ಕಳನ್ನು ಸಿನಿಮಾ ... ಪರಿಚಯಿಸುತ್ತಿದ್ದಾರೆ.

ಮೊನ್ನೆಯಷ್ಟೇ ಸಿನಿಮಾದ ಮುಹೂರ್ತ... ಅಂಬರೀಷ್ ಕ್ಲಾಪ್ ಮಾಡುವ ... ಸಿನಿಮಾಗೆ ಚಾಲನೆ ನೀಡಿದ್ದಾರೆ. ಕ್ರೇ... ರವಿಚಂದ್ರನ್, ಪುನೀತ್ ರಾಜ್‌ಕುಮಾರ್ ... ಚಿತ್ರರಂಗದ ಹಲವು ಗಣ್ಯರು ಮು... ಸಮಾರಂಭಕ್ಕೆ ಆಗಮಿಸಿ ಶುಭ ಕೋರಿದ್ದಾರೆ.

ಕೈಕೊಟ್ಟ ಪಡ್ಡೆ ಹುಲಿ



ಅಂದುಕೊಂಡಂತೆ ಆಗಿದ್ದರೆ, ನೀನಾಸಂ ಸತೀಶ್ ನಟನೆಯ 'ಪಡ್ಡೆ ಹುಲಿ' ಸಿನಿಮಾ ಸೆಟ್ಟೇರಬೇಕಿತ್ತು, ಒಂದು ಹಂತದ ಚಿತ್ರೀಕರಣ ಕೂಡ ಮುಗಿಯಬೇಕಿತ್ತು, ನಿರ್ದೇಶಕರಿಂದಾಗಿ ಸಿನಿಮಾ ಡ್ರಾಪ್ ಆಗಿದೆ. ಈ ಚಿತ್ರದ ನಿರ್ದೇಶಕ ಗುರು ದೇಶಪಾಂಡೆ ಸ್ಕ್ರಿಪ್ಟ್ ಅನ್ನು ಚೆನ್ನಾಗಿ ಮಾಡದೇ ಇರುವ ಕಾರಣ,. ಚಿತ್ರದಲ್ಲಿ ನಟಿಸಲು ಸತೀಶ್ ಒಪ್ಪಿಲ್ಲ ಅನ್ನುವ ಮಾತು ಕೇಳಿಬರುತ್ತಿದೆ. ಗುರು ದೇಶಪಾಂಡೆ 'ರಾಜಾಹುಲಿ' ಗೆಲುವಿನ ಗುಂಗಿನಲ್ಲಿದ್ದಾರೆ. ಸತೀಶ್ ಕೈಯಲ್ಲಿ ಸದ್ಯ ಮೂರ್‍ನಾಲ್ಕು ಚಿತ್ರಗಳಿವೆ. ಅಲ್ಲದೇ ಗುರು ಕೂಡ ಇನ್ನೂ ಎರಡು ಚಿತ್ರಗಳನ್ನು ಮಾಡಲು ತಯಾರಿ ಮಾಡಿಕೊಂಡಿದ್ದಾರೆ. ಹೀಗಾಗಿ 'ಪಡ್ಡೆ ಹುಲಿ' ಸದ್ಯಕ್ಕೆ ಬೋನು ಸೇರಿಕೊಂಡಿದೆ. ಸತೀಶ್ ಈಗ ಜಯತೀರ್ಥ ನಿರ್ದೇಶನದ 'ಬ್ಯುಟಿಫುಲ್ ಮನಸುಗಳು' ಸಿನಿಮಾದ ಶೂಟಿಂಗ್‌ನಲ್ಲಿ ಬಿಜಿ ಆಗಿದ್ದಾರೆ. ಇದು ಮುಗಿಯುತ್ತಿದ್ದಂತೆಯೇ ಜೇಕಬ್ ವರ್ಗೀಸ್ ಅವರ ಸಿನಿಮಾ ಶುರುವಾಗಲಿದೆ. ಅಲ್ಲದೇ ಅವರ ಸ್ನೇಹಿತರೊಬ್ಬರು ಸಿನಿಮಾ ಮಾಡುವ ಕುರಿತು ಮಾತುಕತೆ ನಡೆಯುತ್ತಿದೆ. ಹೀಗಾಗಿ ಸತೀಶ್ ಇಂಥದ್ದೊಂದು ನಿರ್ಧಾರಕ್ಕೆ ಬಂದಿದ್ದಾರೆ ಎನ್ನಲಾಗುತ್ತಿದೆ.

ಆದಿತ್ಯಗೆ ಟೈಮ್ ಸರಿ ಇಲ್ಲ

ರಾಜೇಂದ್ರ ಸಿಂಗ್ ಬಾಬು ಪುತ್ರ ಆದಿತ್ಯ ಪ್ರತಿಭಾವಂತ ನಟ ಅನ್ನುವುದರಲ್ಲಿ ಅನುಮಾನವಿಲ್ಲ, ಅವರಲ್ಲಿ ಪ್ರತಿಭೆ ಇದೆ ಅನ್ನುವ ಕಾರಣಕ್ಕೆ ತಮಿಳಿನತ್ತ ಹೆಜ್ಜೆ ಹಾಕಿದರು. ಅಲ್ಲಿ ಸಕ್ಸೆಸ್ ಕೂಡ ಕಂಡರು. ಆದರೆ, ಕನ್ನಡ ಸಿನಿಮಾರಂಗ ಮಾತ್ರ ಅವರನ್ನು ದೂರ ತಳ್ಳುತ್ತಿದೆ.

ಅಂದುಕೊಂಡಂತೆ ಆಗಿದ್ದರೆ ಯಶ್ ಅವರ ಹೊಸ ಸಿನಿಮಾದಲ್ಲಿ ಆದಿತ್ಯ ನಟಿಸಬೇಕಿತ್ತು, ಇವರೊಂದಿಗೆ ಮಾತುಕತೆ ಕೂಡ ಆಗಿತ್ತು, ಅದಕ್ಕಾಗಿ ಆದಿತ್ಯ ತಯಾರಿಯನ್ನೂ ಮಾಡಿಕೊಳ್ಳುತ್ತಿದ್ದರು. ಸಡನ್ನಾಗಿ ಸಿನಿಮಾದಿಂದ ಕೈಬಿಡಲಾಯಿತು. ಅದಕ್ಕೆ ಕಾರಣ ಈವರೆಗೂ ತಿಳಿದುಬಂದಿಲ್ಲ.

ಆನಂತರ ಪಿ.ಎನ್.ಸತ್ಯ ನಿರ್ದೇಶನದಲ್ಲಿ ಸಿನಿಮಾವೊಂದನ್ನು ಮಾಡುತ್ತಿದ್ದಾರೆ ಅನ್ನುವ ಸುದ್ದಿ ಬಂತು. ಸಿನಿಮಾ ಪೋಸ್ಟರ್ ಕೂಡ ರಿಲೀಸ್ ಆಯಿತು. ಈಗ ಆ ಸಿನಿಮಾ ಕೂಡ ನಿಲ್ಲುವ ಹಂತಕ್ಕೆ ಬಂದಿದೆ. ನಿರ್ಮಾಪಕ ಸುಧಾಕರ್ ಸಿನಿಮಾದಿಂದ ಆಚೆ ಬಂದಿದ್ದಾರೆ. ತಾವು ಈ ಸಿನಿಮಾ ಮಾಡುತ್ತಿಲ್ಲ ಎಂದೂ ಹೇಳಿದ್ದಾರೆ. ನಿರ್ಮಾಪಕರೇ ಇಲ್ಲದೇ ಸಿನಿಮಾ ಮಾಡುವುದು ಅನುಮಾನ. ಹೀಗಾಗಿ ಈ ಚಿತ್ರ ಕೂಡ ನಿಲ್ಲುವ ಸಾಧ್ಯತೆ ಇದೆ. ಅಲ್ಲದೇ ಗುರು ದೇಶಪಾಂಡೆ ನಿರ್ದೇಶನದಲ್ಲೂ ಆದಿತ್ಯ ನಟಿಸಬೇಕಿತ್ತು, ಆ ಚಿತ್ರವನ್ನೂ ಅನಿವಾರ್ಯ ಕಾರಣದಿಂದ ಮುಂದೂಡಲಾಗಿದೆ.





ಬಳುಕುವ ಬಳ್ಳಿಯಂತಾದ ಗಿಣಿ

ರಾಗಿಣಿ ತಮ್ಮ ಅಭಿಮಾನಿಗಳಿಗೆ ಅಚ್ಚರಿಯ... ಕೊಟ್ಟಿದ್ದಾರೆ. 'ಹುಲಿ ದೇವರ ಕಾಡು' ಸಿನಿಮಾಗಾಗಿ ... ಬರೋಬ್ಬರಿ ಹದಿನೈದು ಕೇಜಿ ತೂಕ ಇಳಿಸಿಕೊಂ... 'ಪರಪಂಚ' ಚಿತ್ರಕ್ಕಾಗಿ ಐದು ಕೇಜಿ ತೂಕ ಏರಿಸಿಕೊಂಡಿ... ಸಡನ್ನಾಗಿ ಹದಿನೈದು ಕೇಜಿ ಇಳಿಯಲು ಕಾರಣ ... ದೇವರ ಕಾಡು' ಸಿನಿಮಾದಲ್ಲಿ ಪಾತ್ರವೇ ಹಾಗಿದೆ...

ಈ ಚಿತ್ರದಲ್ಲಿ ರಾಗಿಣಿ ಐದು ಶೇ... ಕಾಣಿಸಿಕೊಳ್ಳುತ್ತಿದ್ದಾರೆ. ಅದರಲ್ಲಿ ಒಂದು ಪಾ... ವಯಸ್ಸಿನದ್ದಂತೆ. ಹೀಗಾಗಿ ಅನಿವಾರ್ಯವಾಗಿ ಅಷ್ಟು... ಇಳಿಸಿಕೊಳ್ಳಬೇಕಿತ್ತಂತೆ. ತೂಕ ಕಳೆದುಕೊಳ್ಳುವ ... ಹಿಂದೆ ಮತ್ತೊಂದು ಕಾರಣವಿದೆಯಂತೆ. ಕಳೆ... ಹಿಂದಿ ಸಿನಿಮಾದ ಹಾಡಿನಲ್ಲಿ ಕಾಣಿಸಿಕೊಂಡಿದ್ದ ... ಈ ಬಾರಿ ನಟಿಸಲು ಅವಕಾಶ ಸಿಕ್ಕಿದೆಯಂತೆ. ... ತೂಕ ಇಟ್ಟುಕೊಂಡು ಬಾಲಿವುಡ್‌ನಲ್ಲಿ ಮಿಂಚು... ತೀರಾ ಕಷ್ಟ. ಹೀಗಾಗಿ ರಾಗಿಣಿ ಭಾರೀ ... ಮಾಡಿದ್ದಾರೆ. ನಾಲ್ಕು ತಿಂಗಳಲ್ಲಿ ದೇಹವನ್ನು ದಂಡಿಸಿ, ಬಳುಕುವ ಬಳ್ಳಿಯಾಗಿದ್ದಾರೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com